ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 8 ಗುರುವಾರ 2024

ಸಂಪುಟ: 44 | ಸಂಚಿಕೆ: 291 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಮ್ಮ ಪಾಲು ನಮಗೆ ಕೊಡಿ...

● ದೆಹಲಿಯಲ್ಲಿ ಕಾಂಗ್ರೆಸ್ ಸರ್ಕಾರದಿಂದ 'ನಮ್ಮ ತೆರಿಗೆ ನಮ್ಮ ಹಕ್ಕು' ಅಭಿಯಾನ ● ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಜಂತರ್ ಮಂತರ್‌ನಲ್ಲಿ ಧರಣಿ ● ಕರ್ನಾಟಕಕ್ಕೆ ನ್ಯಾಯವಾಗಿ ಸಲ್ಲಬೇಕಾದ 62,098 ಕೋಟಿ ಬಿಡುಗಡೆಗೆ ಆಗ್ರಹ ● ಬೇರೆಯವರಿಗೆ ಹೆಚ್ಚು ಅನುದಾನ ಕೊಡುವುದರ ಬಗ್ಗೆ ನಮ್ಮ ತಕರಾರಿಲ್ಲ; ಆದರೆ ನಮಗೆ ಅನ್ಯಾಯ ಮಾಡಬೇಡಿ



ನವದೆಹಲಿ, ಫೆ. 7(ಕೆಎಂಶಿ)–ಕೇಂದ್ರ ಸರ್ಕಾರ ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ಸರ್ಕಾರ ದೆಹಲಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ವಿರುದ್ಧ ರಣ ಕಹಳೆ ಮೊಳಗಿಸಿತು.

ಕರ್ನಾಟಕಕ್ಕೆ ಬರಬೇಕಿರುವ 62,098 ಕೋಟಿ ಬಾಕಿಗಾಗಿ ಕೇಂದ್ರದ ಕಣ್ಣು ತೆರೆಸುವುದು. ಜೊತೆಗೆ ರಾಷ್ಟ್ರದ ಗಮನ ಸೆಳೆಯುವ ಉದ್ದೇಶದಿಂದ ಸಿದ್ದರಾಮಯ್ಯ ತಮ್ಮ ಇಡೀ ಸರ್ಕಾರವನ್ನೇ ಕೊಂಡೊಯ್ದು ದೆಹಲಿಯಲ್ಲಿ ಕನ್ನಡಿಗರ ಧ್ವನಿ ಮೊಳಗಿಸಿ ರಾಜ್ಯದ ಪಾಲು ಕೊಡುವಂತೆ ಆಗ್ರಹಿಸಿದರು. ಸಚಿವರು, ಶಾಸಕರು ಹಾಗೂ ಪಕ್ಷದ ಮುಖಂಡರೊಂದಿಗೆ ಜಂತರ್ ಮಂತರ್‌ನಲ್ಲಿ ವಿನೂತನ ಧರಣಿ ಮತ್ತು ಪ್ರತಿ ಭಟನೆ ನಡೆಸಿ ಕರ್ನಾಟಕಕ್ಕೆ ಆಗಿರುವ ● 2ನೇ ಪುಟಕ್ಕೆ

ರಾಜ್ಯದ ಬಿಜೆಪಿ ಸಂಸದರು ಮೋದಿ ಮುಂದೆ ಕೋಲೆ ಬಸವನ ಥರ ತಲೆ ಅಲ್ಲಾಡಿಸುತ್ತಾರೆ...!

ರಾಜ್ಯದಿಂದ ಆಯ್ಕೆ ಆಗಿರುವ ಬಿಜೆಪಿ ಸಂಸದರು ಕೋಲೆ ಬಸವನ ರೀತಿಯಲ್ಲಿ ಮೋದಿ ಅವರ ಎದುರಿಗೆ ತಲೆ ಅಲ್ಲಾಡಿಸುವುದು ಬಿಟ್ಟರೆ ರಾಜ್ಯದ ಪಾಲನ್ನು ಬಾಯಿ ಬಿಟ್ಟು ಕೇಳಲೇ ಇಲ್ಲ. ವಿಧಾನಸಭಾ ಅಧಿವೇಶನದಲ್ಲಿ ಯಡಿಯೂರಪ್ಪ, ಬೊಮ್ಮಾಯಿ ಅವರಿಗೆ ಕೇಂದ್ರದ ಮುಂದೆ ರಾಜ್ಯದ ಹಕ್ಕು ಮಂಡಿಸಿ ಎಂದು ಆಗ್ರಹಿಸಿದೆ, ಅವರು ಕೇಳಲಿಲ್ಲ. ಇವರು ಕೊಡಲಿಲ್ಲ. ನಮಗೆ ಅನ್ಯಾಯ ಸರಿ ಪಡಿಸಲು ವಿಶೇಷ ಅನುದಾನವಾಗಿ 11,495 ಕೋಟಿ ರೂ. ಕೊಡ್ತೀವಿ ಎಂದು ಘೋಷಿಸಿದರು. ಆದರೆ ಈ ಹಣ ಕೊಡಬೇಡಿ ಎಂದು ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ತಡೆ ಹಿಡಿದರು. ಈಗೇಕೆ ಸುಳ್ಳು ಹೇಳ್ತಿದ್ದೀರಿ ಮೇಡಂ ಎಂದು ವ್ಯಂಗ್ಯವಾಡಿದರು. ● 2ನೇ ಪುಟಕ್ಕೆ

ಅನುದಾನದ ವಿಷಯ ಮುಂದಿಟ್ಟು ಕಾಂಗ್ರೆಸ್ ದೇಶ ವಿಭಜಿಸುವ ಯತ್ನ

● ಇದು ಅಪಾಯಕಾರಿ ಬೆಳವಣಿಗೆ: ರಾಜ್ಯಸಭೆಯಲ್ಲಿ ಪ್ರಧಾನಿ ಮೋದಿ ಆಕ್ರೋಶ ● ರೋಗಿಯೇ ಸುಧಾರಣೆ ಬಯಸದೇ ಇದ್ದಾಗ ವೈದ್ಯರೇನು ಮಾಡಲು ಸಾಧ್ಯ?



ನವದೆಹಲಿ, ಫೆ.7– ಅನುದಾನದ ವಿಷಯವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ದೇಶವನ್ನು ಉತ್ತರ–ದಕ್ಷಿಣವಾಗಿ ವಿಭಜಿಸುವ ಯತ್ನ ಮಾಡುತ್ತಿದೆ ಎಂದು ರಾಜ್ಯಸಭೆಯಲ್ಲಿ ಪ್ರಧಾನಿ ಮೋದಿ ವಾಗ್ದಾಳಿ ನಡೆಸಿದರು. ಸಂಸತ್‌ನ ಬಜೆಟ್ ಅಧಿವೇಶನದ ರಾಜ್ಯಸಭೆ ಕಲಾಪದಲ್ಲಿ ಪ್ರಧಾನಿ ಮೋದಿ ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಮಾತನಾಡಿದರು. ಕಾಂಗ್ರೆಸ್ ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ತೆರಿಗೆ ಹಂಚಿಕೆ ಹಾಗೂ ಅನುದಾನದ ವಿಷಯವಾಗಿ 'ನನ್ನ ತೆರಿಗೆ ನನ್ನ ಹಣ' ಎನ್ನುತ್ತಿದ್ದಾರೆ. ಇದು ಯಾವ ಭಾಷೆ ಎಂದು ಪ್ರಶ್ನಿಸಿದರು. ಕಾಂಗ್ರೆಸ್ ದೇಶವನ್ನು ಇಬ್ಭಾಗ ಮಾಡುವ ವಾತಾವರಣ ಸೃಷ್ಟಿಸುತ್ತಿದೆ. ಇಂತಹ ಹೇಳಿಕೆಗಳು ದೇಶಕ್ಕೆ ಅಪಾಯಕಾರಿ ಎಂದು ಮೋದಿ ಎಚ್ಚರಿಕೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷ ದೇಶದ ಶತ್ರುಗಳಿಗೆ ಭೂಮಿಯನ್ನು ಬಿಟ್ಟುಕೊಟ್ಟಿತ್ತು. ಈಗ ಆಂತರಿಕ ಭದ್ರತೆ ಬಗ್ಗೆ ನಮಗೆ ಉಪದೇಶ ● 7ನೇ ಪುಟಕ್ಕೆ

ಕರ್ನಾಟಕದ ಜಿಎಸ್‌ಟಿಯ ಒಂದು ಪೈಸೆ ಬಾಕಿ ಉಳಿಸಿಕೊಂಡಿಲ್ಲ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಜವಾಬು



ನವದೆಹಲಿ, ಫೆ. 7– ಕೇಂದ್ರ ಸರ್ಕಾರದಿಂದ ನಿರಂತರ ದ್ರೋಹ, ವಂಚನೆಯಾಗುತ್ತಿದೆ ಎಂದು ಆರೋಪಿಸಿ ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯ ಸರ್ಕಾರ ದೆಹಲಿಯ ಜಂತರ್ ಮಂತರ್‌ನಲ್ಲಿಂದು ಪ್ರತಿಭಟನೆ ನಡೆಸಿದ ಬೆನ್ನ ಹಿಂದೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪ್ರತಿಕ್ರಿಯಿಸಿ, ಕರ್ನಾಟಕದ ಜಿಎಸ್‌ಟಿಯ ಒಂದು ಪೈಸೆಯನ್ನೂ ಬಾಕಿ ಉಳಿಸಿಕೊಂಡಿಲ್ಲ. ಬರಪರಿ ಹಾರವೂ ಸೇರಿದಂತೆ ಪ್ರಕೃತಿ ವಿಕೋಪ ನಿಧಿಯಡಿ ಮುಂಗಡವಾಗಿ 6196 ಕೋಟಿ ಹಣ ನೀಡಲಾಗಿದೆ. ಆದರೆ ಕಾಂಗ್ರೆಸ್ ಮಾತ್ರ ಒಂದು ರುಪಾಯಿ ನೀಡಿಲ್ಲ ಎಂದು ಪತ್ರಿಕಾ ಪ್ರಕಟಣೆ ನೀಡಿದ್ದಾರೆ. ಇಲ್ಲಿಯವರೆಗೆ ಒಟ್ಟು 12,476 ಕೋಟಿ ರೂ.ಗಳಲ್ಲಿ 6196 ಕೋಟಿ ರೂ. ನೀಡಲಾಗಿದೆ ಎಂದು ಅಂಕಿ–ಸಂಖ್ಯೆ ಮೂಲಕ ಸ್ಪಷ್ಟೀಕರಣ ನೀಡಿದ್ದಾರೆ.

ತೆರಿಗೆ ಕಟ್ಟುತ್ತಿರುವುದಕ್ಕೆ ಕನ್ನಡಿಗರು ಹೆಮ್ಮೆ ಪಡುತ್ತಿದ್ದಾರೆ. ಆದರೆ, ಕಾಂಗ್ರೆಸ್ ನೇತೃತ್ವದ ಸರಕಾರ ಈ ಪ್ರಶ್ನೆ ಎತ್ತಿದೆ. ಕರ್ನಾಟಕ ಸರಕಾರ ಮಾತಾಡುತ್ತಿರುವ ಭಾಷೆ ಜನವಿರೋಧಿಯಾಗಿದೆ. ಕರ್ನಾಟಕಕ್ಕೆ ಕೇಂದ್ರ ತಾರತಮ್ಯ ಮಾಡಿದೆ ಎಂಬ ತಪ್ಪು ಮಾಹಿತಿ ನೀಡುತ್ತಿದೆ. ಕುಟುಂಬವಾದದಲ್ಲೇ ಮುಳುಗಿರುವ ಕಾಂಗ್ರೆಸ್ ● 7ನೇ ಪುಟಕ್ಕೆ



ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಸಂಸ್ಕೃತ ಪಂಡಿತರಾದ ಡಾ. ಪಿಯರ್ ಸಿಲ್ವಿನ್ ಫಿಲೋಜಾ ಮತ್ತು ಡಾ. ವಸುಂಧರಾ ಫಿಲೋಜಾ ದಂಪತಿ ಶ್ರೀ ಸುತ್ತೂರು ಕ್ಷೇತ್ರಕ್ಕೆ ಭೇಟಿ ನೀಡಿ, ಸುತ್ತೂರು ಶ್ರೀಗಳಿಂದ ಆಶೀರ್ವಾದ ಪಡೆದರು.

ಫೆ.13, ಜ್ಞಾನಪ್ರಕಾಶೋತ್ಸವ ಕಾರ್ಯಕ್ರಮ

ಮೈಸೂರು, ಫೆ. 7– ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ವತಿಯಿಂದ ಫೆಬ್ರವರಿ 13ರಂದು ಮಂಗಳವಾರ ಮೈಸೂರಿನ ಗಾನಭಾರತೀ ರಮಾಗೋವಿಂದ ಕಲಾವೇದಿಕೆಯಲ್ಲಿ 'ಜ್ಞಾನಪ್ರಕಾಶೋತ್ಸವ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಶ್ರೀ ಅರ್ಜುನ ಅವಧೂತರ ಸಾನ್ನಿಧ್ಯದಲ್ಲಿ ಸಂಜೆ 6 ಗಂಟೆಗೆ "ಗಾನ ಸೌರಭ" ಸಂಗೀತ ಕಛೇರಿಯನ್ನು ಸಂಗೀತಾ ವಿದ್ಯಾನಿಧಿ ಡಾ.ವಿದ್ಯಾಭೂಷಣ ಮತ್ತು ತಂಡದವರಿಂದ ಏರ್ಪಡಿಸಲಾಗಿದೆ. ಭಕ್ತರು ಮತ್ತು ಸಾರ್ವಜನಿಕರು ಜ್ಞಾನಪ್ರಕಾಶೋತ್ಸವ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಟ್ರಸ್ಟ್ ತಿಳಿಸಿದೆ.

ಒಂದನೇ ಪುಟದಿಂದ

ನಮ್ಮ ಪಾಲು ನಮಗೆ ಕೊಡಿ...

ಅನ್ಯಾಯವನ್ನು ರಾಷ್ಟ್ರದ ಮುಂದಿಟ್ಟರು. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಕೇಂದ್ರದ ಮಲತಾಯಿ ಧೋರಣೆಯನ್ನು ಅಂಕಿ, ಸಂಖ್ಯೆಗಳ ಸಮೇತ ತೆರೆದಿಟ್ಟು, ಚಿನ್ನದ ಮೊಟ್ಟೆ ಕೊಡುವ ಕೋಳಿ ಕೊಯ್ದು, ಹಾಲಿನ ಕೆಚ್ಚಲು ಕೊಯ್ದು, ನೀವು ಏನು ಮಾಡುತ್ತೀರಿ ಎಂದು ಪ್ರಧಾನಿ ಅವರನ್ನು ಪ್ರಶ್ನಿಸಿದರು. ಇದು ಬಿಜೆಪಿ ಅಥವಾ ಇನ್ನಾವುದೇ ಪಕ್ಷಗಳ ವಿರುದ್ಧದ ಚಳವಳಿ ಅಲ್ಲ. ಕಳೆದ ಐದು ವರ್ಷಗಳಲ್ಲಿ 1,87,000 ಕೋಟಿ ರೂ.ಗಳಷ್ಟು ನ್ಯಾಯಯುತವಾಗಿ ಬರಬೇಕಿದ್ದ ಅನುದಾನವನ್ನು ರಾಜ್ಯಕ್ಕೆ ನೀಡಿಲ್ಲ, ಅದಕ್ಕಾಗಿ ಈ ಚಳವಳಿ ಎಂದರು. ಈ ಅನ್ಯಾಯದ ವಿರುದ್ಧ ನಾವು ಹೋರಾಟ ನಡೆಸುತ್ತಿದ್ದೇವೆಯೇ ಹೊರತು ಯಾವುದೇ ರಾಜಕೀಯ ದೃಷ್ಟಿಯಿಂದಲ್ಲ ಎಂದು ಸ್ಪಷ್ಟಪಡಿಸಿದರು. ನಿಮ್ಮ ವಿರುದ್ಧ ನಾವು ನಡೆಸುತ್ತಿರುವುದು ಐತಿಹಾಸಿಕ ಪ್ರತಿಭಟನೆ. 14ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ತೆರಿಗೆ ಪಾಲು ಶೇ.4.71 ರಷ್ಟಿತ್ತು, 15ನೇ ಹಣಕಾಸು ಆಯೋಗದಲ್ಲಿ ಶೇ. 3.64 ಕ್ಕೆ ಇಳಿಯಿತು. ಇದರಿಂದ ರಾಜ್ಯಕ್ಕೆ ಬರುವ ತೆರಿಗೆಯಲ್ಲಿ ಶೇ. 40ರಿಂದ 45 ರಷ್ಟು ಕಡಿತವಾಗಿದೆ.

ನಮಗೆ ಅನ್ಯಾಯ ಮಾಡಬೇಡಿ: ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚಿಗೆ ಅನುದಾನ ಕೊಡುವ ಬಗ್ಗೆ ನಮಗೆ ತಕರಾರುಗಳಿಲ್ಲ. ಆದರೆ ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡಬೇಡಿ ಎನ್ನುವುದು ನಮ್ಮ ಆಗ್ರಹ. ಕೇಂದ್ರ ಸರ್ಕಾರದ ಅಂಕಿ–ಅಂಶಗಳೇ ನಮ್ಮ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ಹೇಳುತ್ತಿವೆ. ದೇಶದಲ್ಲಿ ಎರಡನೇ ಅತೀ ಹೆಚ್ಚು ತೆರಿಗೆ ಕಟ್ಟುವ ರಾಜ್ಯ ಕರ್ನಾಟಕ. ನಮಗೇ ಏಕೆ ಈ ಮಟ್ಟದ ಅನ್ಯಾಯ ಎಂದು ಪ್ರಶ್ನಿಸಿದರು. ನಾವು ಕನ್ನಡಿಗರು 4,30,000 ಕೋಟಿ ರೂ. ತೆರಿಗೆ ಕಟ್ಟುತ್ತೇವೆ, ನಮಗೆ ವಾಪಸ್ ಬರುವುದು ಕೇವಲ 50,000 ಕೋಟಿ ರೂ. ಮಾತ್ರ. ಅಂದರೆ ನಾವು ಕೊಡುವ ಪ್ರತಿ 100 ರೂ.ನಲ್ಲಿ 13 ರೂ. ಮಾತ್ರ ನಮಗೆ ವಾಪಸ್ ಬರುತ್ತದೆ. ಇದಕ್ಕಿಂತ ಭೀಕರ ಅನ್ಯಾಯ ಏನಿದೆ. ಈ ಅನ್ಯಾಯವನ್ನು ನಾವು ಸಹಿಸಬೇಕಾ? ಎಂದು ಪ್ರಶ್ನಿಸಿದರು. 15ನೇ ಹಣಕಾಸು ಆಯೋಗದಿಂದಾಗಿ ನಮಗೆ 62,098 ಕೋಟಿ ರೂ. ತೆರಿಗೆಯೊಂದರಲ್ಲೇ ಅನ್ಯಾಯ ಆಗಿದೆ. ಇದನ್ನು ನಾವು ಪ್ರಶ್ನಿಸಬಾರದಾ? ಈ ಕಾರಣಗಳಿಗೇ ನಾವು ಪ್ರತಿಭಟನೆ ಮಾಡುತ್ತಿದ್ದೇವೆ.

ಬಿಜೆಪಿ ನಿರಂತರ ಸುಳ್ಳುಗಳ ಮೂಲಕ ತಮ್ಮ ದ್ರೋಹವನ್ನು ಮರೆಮಾಚಲು ನೋಡುತ್ತಿದೆ. ಕೇಂದ್ರದ ಬಜೆಟ್ ಗಾತ್ರ ಹೆಚ್ಚಾದ ಹಾಗೇ, ರಾಜ್ಯದ ತೆರಿಗೆ ಪಾಲು ಹೆಚ್ಚಾಗಬೇಕಿತ್ತು. ಆದರೆ ಈ ಪ್ರಮಾಣದಲ್ಲೂ ನಮಗೆ ಹಂಚಿಕೆ ಆಗಿಲ್ಲ, ಇದನ್ನು ಕೇಂದ್ರದ ಅಂಕಿ–ಅಂಶಗಳೇ ಹೇಳುತ್ತಿವೆ. ಕಳೆದ 10 ವರ್ಷಗಳಿಂದ ಹಂತ ಹಂತವಾಗಿ ರಾಜ್ಯದ ಪಾಲಿನ ತೆರಿಗೆ ಪಾಲು, ಕೇಂದ್ರದ ಅನುದಾನದ ಪಾಲು ನಿರಂತರವಾಗಿ ಕಡಿಮೆ ಆಗುತ್ತಿರುವುದನ್ನು ಪ್ರತೀ ವರ್ಷದ ಅಂಕಿ–ಅಂಶಗಳೊಂದಿಗೆ ಮುಖ್ಯಮಂತ್ರಿ ವಿವರಿಸಿದರು. ಕೇಂದ್ರದ ಬಜೆಟ್ ಗಾತ್ರ ದುಪ್ಪಟ್ಟಾಗಿದೆ, ಆದರೆ ರಾಜ್ಯದ ಪಾಲಿನ ತೆರಿಗೆ ಅರ್ಧಕ್ಕಿಂತ ಕಡಿಮೆ ಆಗಿದೆ. ನಮ್ಮ ಪಾಲು ದುಪ್ಪಟ್ಟಾಗಬೇಕಾದ ಜಾಗದಲ್ಲಿ ಅರ್ಧಕ್ಕಿಂತ ಕಡಿಮೆ ಆಗಿರುವುದು ಅನ್ಯಾಯ ಅಲ್ಲವೇ?

ಜಿಎಸ್‌ಟಿಯಲ್ಲಿ ನಮ್ಮ ರಾಜ್ಯಕ್ಕೆ ಮಾಡುತ್ತಿರುವ ಅನ್ಯಾಯ ಇನ್ನೂ ಬೃಹತ್ತಾಗಿದೆ. ಜಿಎಸ್‌ಟಿಯಲ್ಲಿ ಆಗುವ ಅನ್ಯಾಯವನ್ನು ವಿಶೇಷ ಪರಿಹಾರ ಕೊಟ್ಟು ಸರಿದೂಗಿಸುವುದಾಗಿ ಹೇಳಿದ್ದರು. ಈಗ ಪರಿಹಾರವನ್ನೂ ಕೊಡುತ್ತಿಲ್ಲ. ಇದರಿಂದ 59,000 ಕೋಟಿ ರೂ.ಗೂ ಅಧಿಕ ಅನ್ಯಾಯ, ವಂಚನೆ ಆಗಿದೆ. ಕೇಂದ್ರದ ನಿರಂತರ ದ್ರೋಹ, ವಂಚನೆಯಿಂದ ರಾಜ್ಯದ ತೆರಿಗೆ ಸಂಗ್ರಹ ಪ್ರಮಾಣ ಶೇ.15 ರಿಂದ ಕೆಳಗೆ ಜಾರಿ ಶೇ.9ಕ್ಕೆ ಕುಸಿದಿದೆ. ಇದಕ್ಕೆ ಕೇಂದ್ರದ ಮಲತಾಯಿ ಧೋರಣೆ ಮತ್ತು ವಂಚನೆಯೇ ಕಾರಣ.

ಕೋಲೆ ಬಸವನ ಥರ ತಲೆ ಅಲ್ಲಾಡಿಸುತ್ತಾರೆ...!

ರಾಜ್ಯದಿಂದ ಆಯ್ಕೆ ಆದ ನಿರ್ಮಲಾ ಸೀತಾರಾಮನ್ ಅವರೇ ಈ ಮಟ್ಟದ ದ್ರೋಹ ಮಾಡಿದ ಬಳಿಕವೂ ಸುಳ್ಳುಗಳನ್ನು ಹೇಳುತ್ತಿದ್ದಾರೆ ಎಂದು ಆರೋಪಿಸಿದರು.

ಹಣಕಾಸು ಆಯೋಗದಲ್ಲಿ ದ. ಭಾರತದ ಒಬ್ಬರಿಲ್ಲ: ಮೋದಿ ಅವರ ಕೇಂದ್ರ ಸರ್ಕಾರ ರಚಿಸಿದ 15ನೇ ಹಣಕಾಸು ಆಯೋಗದಲ್ಲಿ ದಕ್ಷಿಣ ಭಾರತ ರಾಜ್ಯಗಳಿಂದ ಒಬ್ಬ ಸದಸ್ಯನೂ ಇರಲಿಲ್ಲ. ಇದರಿಂದ ನಮ್ಮ ರಾಜ್ಯಗಳಿಗೆ ಅನ್ಯಾಯ ಆಗಿದೆ. ಇದಕ್ಕೆ ಮೋದಿಯವರೇ ಕಾರಣ ಎಂದರು. ನೀವು ಎಷ್ಟೇ ಸುಳ್ಳುಗಳನ್ನು ಹೇಳಿದರೂ ಸತ್ಯ ಮುಚ್ಚಿ ಹಾಕಲು ಸಾಧ್ಯವಿಲ್ಲ. ಯಡಿಯೂರಪ್ಪ, ಬೊಮ್ಮಾಯಿ, ಮೋದಿಯವರೇ... ಕೇಂದ್ರ ಸರ್ಕಾರದ ಬಜೆಟ್ ದಾಖಲೆಗಳನ್ನೇ ಪರಿಶೀಲಿಸಿ ನೋಡಿ, ನಮಗಾಗಿರುವ ವಂಚನೆಯ ಪ್ರಮಾಣ ಅದರಲ್ಲಿ ದಾಖಲಾಗಿದೆ. 15ನೇ ಹಣಕಾಸು ಆಯೋಗ ಒಂದರಿಂದಲೇ ಇದುವರೆಗೂ 1,87,000 ಕೋಟಿ ರೂ.ಗೂ ಹೆಚ್ಚು ರಾಜ್ಯಕ್ಕೆ ಅನ್ಯಾಯ ಆಗಿದೆ. ರಾಜ್ಯಕ್ಕೆ ಭೀಕರ ಬರಗಾಲ ಬಂದಿದೆ. ಸೆಪ್ಟೆಂಬರ್‌ನಿಂದ ರಾಜ್ಯದ ಪಾಲಿನ ಬರ ಪರಿಹಾರ ಕೊಡಿ ಎಂದು ನಿರಂತರವಾಗಿ ಒತ್ತಾಯಿಸುತ್ತಲೇ ಬಂದಿದ್ದೇವೆ. ಆದರೆ ಇದುವರೆಗೂ ಒಂದೇ ಒಂದು ರೂ. ಬರ ಪರಿಹಾರ ಕೊಟ್ಟಿಲ್ಲ.

ಪ್ರಧಾನಿ ಮೋದಿಜೀ ಮತ್ತು ಅಮಿತ್ ಷಾ ಅವರನ್ನು ಖುದ್ದಾಗಿ ಭೇಟಿ ಮಾಡಿ ವಿನಂತಿಸಿದೆ. ಆದರೂ ಇವತ್ತಿಗೂ ಒಂದು ಪೈಸೆ ಬಂದಿಲ್ಲ. ಈ ಬಗ್ಗೆ ನೆಪಕ್ಕೂ ಒಂದೂ ಸಭೆಯನ್ನೂ ಕರೆದಿಲ್ಲ. ಆದರೂ ಬರದಿಂದ ರಾಜ್ಯದ ಜನತೆ ಕಂಗಾಲಾಗದಂತೆ ರಾಜ್ಯ ಸರ್ಕಾರವೇ ಪರಿಹಾರ ನೀಡಿದೆ. 31 ಲಕ್ಷ ರೈತರಿಗೆ 650 ಕೋಟಿ ರೂ. ಬರ ಪರಿಹಾರವನ್ನು ರಾಜ್ಯದ ಬೊಕ್ಕಸದಿಂದಲೇ ಕೊಟ್ಟಿದ್ದೇವೆ. ಲಕ್ಷ ಲಕ್ಷ ರೈತರಿಗೆ ಪರಿಹಾರ ಕೊಡುವವರಿದ್ದೇವೆ. ಕೇಂದ್ರ ತನ್ನ ಕೈಯಿಂದ ಪರಿಹಾರ ಕೊಡುವುದಲ್ಲ, ನಮ್ಮ ಹಣ ಅವರ ಬಳಿ ಇದೆ, ಅದರಲ್ಲಿ ರಾಜ್ಯದ ಪಾಲನ್ನು ವಾಪಸ್ ಕೊಡಬೇಕಿತ್ತು. ಒಂದೇ ಒಂದು ರೂಪಾಯಿ ಕೊಡಲಿಲ್ಲ. ನಾವು ಇನ್ನೂ ಎನ್‌ಡಿಆರ್‌ಎಫ್ ನಿಧಿಗಾಗಿ ಕಾಯುತ್ತಲೇ ಇದ್ದೇವೆ. ಈ ಹಣ ಕೊಡಿಸಿ ಯಡಿಯೂರಪ್ಪ, ಅಶೋಕ್, ನಿರ್ಮಲಾ ಸೀತಾರಾಮನ್ ಅವರೇ ಎಂದು ಕೇಳಿದರು.

ನಾವು ಬರೆದ ಪತ್ರಗಳಿಗೆ ಬೆಲೆಯೇ ಇಲ್ಲ!

ಸಂಸತ್ತಿನಲ್ಲಿ ರಾಜ್ಯದ ಪರವಾಗಿ ಬಾಯಿ ಬಿಡಲು ರಾಜ್ಯದಿಂದ ಆಯ್ಕೆ ಆಗಿರುವ ಬಿಜೆಪಿ ಸಂಸದರಿಗೆ ಭಯ. ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ರೂ. ಕೊಡುವುದಾಗಿ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲೇ ಘೋಷಿಸಿದರು. ಒಂದು ರೂಪಾಯಿ ಕೂಡ ಇದುವರೆಗೆ ಬಂದಿಲ್ಲ. ಮಹದಾಯಿ ಯೋಜನೆಗೆ ಇವತ್ತಿನವರೆಗೂ ಕೇಂದ್ರ ಸರ್ಕಾರ ಅನುಮತಿ ಕೊಟ್ಟಿಲ್ಲ. ಕೃಷ್ಣಾ ಮೇಲ್ದಂಡೆ ಬಗ್ಗೆ ಇವತ್ತಿನವರೆಗೂ ಗೆಜೆಟ್ ನೋಟಿಫಿಕೇಷನ್ ಆಗಿಲ್ಲ. ಇನ್ನೂ ಕೆಲಸವೇ ಆರಂಭವಾಗಿಲ್ಲ. ಮೋದಿಯವರನ್ನು ಮಾಜಿ ಪ್ರಧಾನಿ ದೇವೇಗೌಡರು ಹೊಗಳುತ್ತಾ ಕುಳಿತಿದ್ದಾರೆ. ಮೇಕೆದಾಟು, ಕೃಷ್ಣ ಮೇಲ್ದಂಡೆಗೆ ಅನುಮತಿ ಕೊಡಿಸಲಿ, ರಾಜ್ಯಕ್ಕೆ ಬರಬೇಕಾದ ಹಣ ವಾಪಸ್ ಕೊಡಿಸಲಿ ಎಂದರು. ರಾಯಚೂರಿಗೆ ಏಮ್ಸ್ ಕೊಡ್ತೀವಿ ಅಂದರು, ಮೂರು ಪತ್ರ ಬರೆದೆ, ಇವತ್ತಿನವರೆಗೂ ಏಮ್ಸ್ ಬರಲಿಲ್ಲ. ಪತ್ರಗಳಿಗೆ ಉತ್ತರವೂ ಬರಲಿಲ್ಲ. ಎಲ್ಲಾ ಜಾತಿ, ಧರ್ಮದ ಬಡವರಿಗೆ ಅನ್ನಭಾಗ್ಯ ಯೋಜನೆ ಜಾರಿ ಮಾಡಿದೆವು, ದುಡ್ಡು ಕೊಡ್ತೀವಿ, ಅಕ್ಕಿ ಕೊಡಿ ಎಂದರೂ ಅಕ್ಕಿ ಕೊಡಲಿಲ್ಲ. ನಾವು ನೇರವಾಗಿ ಜನರಿಗೇ ಹಣ ಕೊಟ್ಟೆವು.

ರಾಜ್ಯದ ಜನರಿಗೆ ದ್ರೋಹ ಮಾಡಿ, ನಮ್ಮ ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಭಾಗ್ಯ ಎನ್ನುತ್ತಿದ್ದಾರೆ. ಬಡವರು, ಮಧ್ಯಮ ವರ್ಗದವರಿಗೆ ನೆರವು ನೀಡುವುದು ಬಿಟ್ಟಿ ಭಾಗ್ಯವೇ... ಎಂದರು. ನರೇಂದ್ರ ಮೋದಿ ಅವರು ಗ್ಯಾರಂಟಿಗಳು ಜಾರಿಯಾದರೆ ರಾಜ್ಯ ಆರ್ಥಿಕವಾಗಿ ದಿವಾಳಿಯಾಗಿ ಬಿಡುತ್ತದೆ ಎಂದರು. ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳು ಜಾರಿಯಾಗಿ, ರಾಜ್ಯ ಆರ್ಥಿಕವಾಗಿ ಸದೃಢವಾಗಿದೆ. ಮೋದಿ ಅವರ ಮಾತುಗಳು ಪರಮ ಸುಳ್ಳು ಎನ್ನುವುದು ಸಾಬೀತಾಗಿದೆ ಎಂದರು. ಸ್ವಾತಂತ್ರ್ಯ ಬಂದಾಗಿನಿಂದ ದೇಶದ ಸಾಲ 2014ರವರೆಗೂ 54 ಲಕ್ಷ ಕೋಟಿ ರೂ. ಮಾತ್ರ ಇತ್ತು. ಈಗ 180 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಮೋದಿ ಅವಧಿಯಲ್ಲೇ 130 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ. 130 ಕೋಟಿ ರೂ. ಸಾಲ ಒಬ್ಬರೇ ಮಾಡಿದ್ದಾರಲ್ಲಾ ಇದು ಸಾಧನೆಯಾ ಎಂದು ಪ್ರಶ್ನಿಸಿದರು. ಸೆಸ್, ಸರ್ಚಾರ್ಜ್ ಮೂಲಕವೂ ರಾಜ್ಯಕ್ಕೆ ನಿರಂತರ ದ್ರೋಹ, ಅನ್ಯಾಯ ಆಗುತ್ತಿದೆ. ಬರಗಾಲ ಇದ್ದು, ನರೇಗಾ ಕೂಲಿ ದಿನಗಳನ್ನು 150 ದಿನಗಳಿಗೆ ಏರಿಸಿ ಎಂದು ಮನವಿ ಮಾಡಿದರೂ ಏರಿಕೆ ಮಾಡಲಿಲ್ಲ ಎಂದು ಖಂಡಿಸಿದರು.

ವಿವಿ ಅಂತರ ಕಾಲೇಜು ಸಾಹಿತ್ಯಕ, ಸಾಂಸ್ಕೃತಿಕ ಸ್ಪರ್ಧೆ ಸಮಾರೋಪ

ಪಠ್ಯೇತರ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ಪ್ರತಿಭೆ ಅನಾವರಣ

ಪ್ರೊ.ಗುರುಸಿದ್ದಯ್ಯ ಅಭಿಮತ



ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು 'ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ' ಸಮಾರೋಪ ಸಮಾರಂಭದಲ್ಲಿ ಸಮಗ್ರ ಪ್ರಶಸ್ತಿ ವಿತರಿಸಲಾಯಿತು.

ಮೈಸೂರು, ಫೆ.7(ಎಸ್‌ಪಿಎನ್)– ಶಾಲಾ–ಕಾಲೇಜಿನಲ್ಲಿ ಆಯೋಜಿಸುವ ಪಠ್ಯೇತರ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಗೊಳ್ಳಲಿದೆ ಎಂದು ಮೈಸೂರು ವಿವಿ ಇತಿಹಾಸ ವಿಭಾಗದ ಪ್ರಾಧ್ಯಾಪಕ ಪ್ರೊ.ಗುರುಸಿದ್ದಯ್ಯ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿ ಆವರಣದ ಇಎಂಆರ್‌ಸಿ ಸಭಾಂಗಣದಲ್ಲಿ 2023–24ನೇ ಸಾಲಿನ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು 'ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ' ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಹಿಂದೆ ನಾನು ವಿದ್ಯಾರ್ಥಿ ಕ್ಷೇಮಾಪಾಲನಾ ನಿರ್ದೇಶನಾಲಯದ ನಿರ್ದೇಶಕನಾಗಿ, ಅಂತರ ವಿವಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸುವ ಕಾರ್ಯಕ್ರಮಗಳ ಸಂಯೋಜಕನಾಗಿ ಹಲವು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಈ ಸ್ಪರ್ಧೆಗಳಲ್ಲಿ ಮೈಸೂರು ವಿವಿ ವಿದ್ಯಾರ್ಥಿಗಳು ಒಂದಿಲ್ಲೊಂದು ಸ್ಪರ್ಧೆಯಲ್ಲಿ ಭಾಗವಹಿಸಿ, ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಅಂತಹ ಸಂದರ್ಭದಲ್ಲಿ ಮೈಸೂರು ವಿವಿಯ ಕೀರ್ತಿ ದೇಶ–ವಿದೇಶಗಳಲ್ಲಿ ರಾರಾಜಿಸುವ ಸಂದರ್ಭದಲ್ಲಿ ನಮಗೆ ಹೆಮ್ಮೆ ಎನಿಸುತ್ತದೆ ಎಂದರು.

ಈ ಹಿಂದೆ ಮೈಸೂರು ವಿವಿ ವ್ಯಾಪ್ತಿಗೆ ಮಂಡ್ಯ, ಚಾಮರಾಜನಗರ, ಹಾಸನ ಜಿಲ್ಲೆಯ ಕಾಲೇಜುಗಳು ಸೇರಿಕೊಳ್ಳುತ್ತಿದ್ದವು. ಆ ಸಂದರ್ಭದಲ್ಲಿ ಅಂತರ ವಿವಿ ಸ್ಪರ್ಧೆಗಳು ಹೆಚ್ಚು ದಿನಗಳ ಕಾಲ ನಡೆಯುತ್ತಿದ್ದವು. ಈ ಬಾರಿ ತಾಂತ್ರಿಕ ಕಾರಣಗಳಿಂದಾಗಿ 3 ದಿನಕ್ಕೆ ಮುಗಿದಿವೆ. ಈ ಕಾರ್ಯಕ್ರಮ ಜಿಲ್ಲೆಯೊಳಗೆ ಮಾತ್ರ ಆಯೋಜಿಸಲಾಗಿಸಿದೆ ಎಂದು ಹೇಳಿದರಲ್ಲದೆ, ಯುವಕರು ತಮ್ಮ ವೈಯಕ್ತಿಕ ವರ್ಚಸ್ಸು ಬೆಳಸಿಕೊಳ್ಳಬೇಕಾದರೆ, ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ಇದರಿಂದ ವಿದ್ಯಾರ್ಥಿಗಳು ಮುಖ್ಯವಾಹಿನಿ ಬರಲು ಸಹಕಾರಿಯಾಗತ್ತದೆ ಎಂದರು.

ವಿದ್ಯಾರ್ಥಿ ಕ್ಷೇಮಾಪಾಲನಾ ನಿರ್ದೇಶನಾಲಯ ನಿರ್ದೇಶಕ ಪ್ರೊ.ಬಿ.ಎಸ್. ಚಂದ್ರಶೇಖರ್ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಮೈಸೂರು ವಿವಿ ಶೈಕ್ಷಣಿಕ ಚಟುವಟಿಕೆಗಳು ಸರಾಗವಾಗಿ ಜರುಗಲು ಹಣಕಾಸು ವಿಭಾಗದ ಸಹಕಾರ ಅತೀ ಮುಖ್ಯ. ಅದರಲ್ಲೂ ವಿವಿ ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಅವರೇ ಮುತುವರ್ಜಿ ವಹಿಸಿ ವಿದ್ಯಾರ್ಥಿಗಳ ಸಂಬಂಧಿಸಿದ ಯಾವುದೇ ಬಿಲ್ಲುಗಳಿಗೂ ತಗಾದೆ ತೆಗೆಯದೇ ಮಂಜೂರು ಮಾಡುತ್ತಾರೆ. ಅದರಲ್ಲೂ ಹಾಸ್ಟೆಲ್ ವಿದ್ಯಾರ್ಥಿಗಳ ಮನವಿಗಳಿಗೆ ತಕ್ಷಣ ಸ್ಪಂದಿಸಿ, ವಿದ್ಯಾರ್ಥಿಗಳ ಏಳಿಗೆಗೆ ಸಹಕಾರಿಯಾಗುತ್ತಿರುವುದು ಸಂತೋಷ ಸಂಗತಿ ಎಂದರು. ಈ ವೇಳೆ ವಿದ್ಯಾರ್ಥಿ ಕ್ಷೇಮಾಪಾಲನಾ ನಿರ್ದೇಶನಾಲಯದ ಸಹಾಯಕ ನಿರ್ದೇಶಕಿ ಡಾ.ಎಂ.ಎನ್. ಸುಷ್ಮಾ ಉಪಸ್ಥಿತರಿದ್ದರು.



ವಿದ್ಯಾರ್ಥಿಗಳ ಪ್ರತಿಭಟನೆ

ವೇದಿಕೆ ಕಾರ್ಯಕ್ರಮದ ನಂತರ 2023–24ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರದರ್ಶನ ನೀಡಿದ್ದ ಉತ್ತಮ ತಂಡಗಳನ್ನು ಆಯ್ಕೆ ಮಾಡಲು ತೀರ್ಪುಗಾರರಾಗಿ ಭಾಗವಹಿಸಿದ್ದವರು ತಾರತಮ್ಯ ಎಸಗಿದ್ದು, ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ವಿದ್ಯಾರ್ಥಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಿಲ್ಲ. ಬದಲಾಗಿ ತಮಗೆ ಬೇಕಾದ ವಿದ್ಯಾರ್ಥಿ ತಂಡಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ್ದಾರೆ ಎಂದು ಆರೋಪಿಸಿ, ಮಾನಸ ಗಂಗೋತ್ರಿ ವಿದ್ಯಾರ್ಥಿಗಳು, ಕಾರ್ಯಕ್ರಮದ ಆಯೋಜಕರು, ತೀರ್ಪುಗಾರರ ವಿರುದ್ಧ ಇಎಂಆರ್‌ಸಿ ಸಭಾಂಗಣದಲ್ಲೇ ಕೆಲ ಕಾಲ ಪ್ರತಿಭಟನೆ ನಡೆಸಿ, ವಿದ್ಯಾರ್ಥಿಗಳು ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರಲ್ಲದೆ, ಆಯೋಜಕರು ಕಾರ್ಯಕ್ರಮಗಳನ್ನು ಪಾರದರ್ಶಕವಾಗಿ ನಡೆಸಿಲ್ಲ ಎಂದು ಆರೋಪಿಸಿದರು.

ಸ್ಟ್ಯಾಂಪ್ ಡ್ಯೂಟಿ ಪರಿಷ್ಕರಣೆ ; ವಿವಿಧ ಮುದ್ರಾಂಕ ಶುಲ್ಕ ಹೆಚ್ಚಳ

ಮೈಸೂರು,ಫೆ.7(ಪಿಎಂ)– ರಾಜ್ಯ ಸರ್ಕಾರವು ಕರ್ನಾಟಕ ಮುದ್ರಾಂಕ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಮುದ್ರಾಂಕ ಶುಲ್ಕ (ಸ್ಟ್ಯಾಂಪ್ ಡ್ಯೂಟಿ) ಪರಿಷ್ಕರಿಸಿದೆ. ಅದರಂತೆ ಕರಾರುಗಳ ಮುದ್ರಾಂಕ ಶುಲ್ಕವು 200 ರೂ.ನಿಂದ 500 ರೂ.ಗೆ ಹೆಚ್ಚಳಗೊಂಡಿದೆ.

ಅದೇ ರೀತಿಯಲ್ಲಿ ಇಂಡೆಂನಿಟಿ ಬಾಂಡ್ ಮುದ್ರಾಂಕ ಶುಲ್ಕವು 200 ರೂ.ನಿಂದ 500 ರೂ.ಗೆ ಏರಿಕೆ ಮಾಡಲಾಗಿದೆ. ಅಂತೆಯೇ ಬ್ಯಾಂಕ್ ಗ್ಯಾರಂಟಿ ಶುಲ್ಕವು 200ರಿಂದ 500 ರೂ., ಹೈಪೋಥಿಕೇಷನ್ ಕರಾರು ಶುಲ್ಕವನ್ನು ಸಾಲದ ಮೊತ್ತದ ಶೇ.0.5ರಷ್ಟು ನಿಗದಿ ಮಾಡಲಾಗಿದೆ (10 ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟು ಎರಡಕ್ಕೂ).

ಜನರಲ್ ಪವರ್ ಆಫ್ ಅಟಾರ್ನಿ ಶುಲ್ಕ ಸಾವಿರ ರೂ., ಸ್ಪೆಷಲ್ ಪವರ್ ಆಫ್ ಅಟಾರ್ನಿ ಶುಲ್ಕ 500 ರೂ. ನಿಗದಿ ಮಾಡಲಾಗಿದೆ. ಲೇಟರ್ ಆಫ್ ಗ್ಯಾರಂಟಿ ಶುಲ್ಕ 200ರಿಂದ 500 ರೂ., ಅಫಿಡವಿಟ್ (ಪ್ರಮಾಣ ಪತ್ರ) ಶುಲ್ಕ 20ರಿಂದ 100 ರೂ., ತ್ರಿಪಕ್ಷೀಯ ಒಪ್ಪಂದ (ಬಿಲ್ಡರ್, ಎರವಲುಗಾರ ಮತ್ತು ಬ್ಯಾಂಕ್) ಶುಲ್ಕ 500ರಿಂದ 1,500 ರೂ.ಗೆ ಹೆಚ್ಚಳ ಮಾಡಲಾಗಿದೆ. ಎಂಓಡಿಟಿ/ಇಕ್ವೀಎಂ ಶುಲ್ಕ ಸಂಬಂಧ 10 ಲಕ್ಷ ರೂ.ವರೆಗೆ ಶೇ.0.5ರಷ್ಟು ಸಾಲದ ಮೊತ್ತ (ಕನಿಷ್ಟ .500 ರೂ.) ಮತ್ತು 10 ಲಕ್ಷ ರೂ. ಮೇಲ್ಪಟ್ಟು ಹೆಚ್ಚಿನ ಸಾಲ ಅಥವಾ ಸಾಲದ ಮೊತ್ತದ ಶೇ.0.5 ನಿಗದಿ ಮಾಡಲಾಗಿದೆ. ನೋಂದಾಯಿತ ಕಾನೂನು ಅಡಮಾನ ಸಿಹೆಚ್‌ಎ 4 ಶುಲ್ಕವು ಯಥಾಸ್ಥಿತಿಯಲಿದೆ (ಸಾಲದ ಮೊತ್ತದ ಶೇ.0.5).

ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.2.2024 ಗುರುವಾರ, ಮಳೆ ನಕ್ಷತ್ರ: ಧನಿಷ್ಠ 6.2.2024 ರಿಂದ 19.02.2024

ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ತೀವ್ರ ತಲೆನೋವು, ಮೈಗ್ರೇನ್ ತಲೆನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ ಸಂಜೆ 4.30 ಗಂಟೆವರೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಮಾತೃಮಂಡಲಿ ಬಾಲಕಿಯರ ಪದವಿಪೂರ್ವ ಕಾಲೇಜು :** ಸಾಂಪ್ರದಾಯಿಕ ದಿನಾಚರಣೆ ಮತ್ತು ಬೀಳ್ಕೊಡುಗೆ ಸಮಾರಂಭ, ಉದ್ಘಾಟನೆ : ಟಾಟಾ ಕನ್ಸಲ್ಟೆನ್ಸಿ ನಿವೃತ್ತ ಹಿರಿಯ ವ್ಯವಸ್ಥಾಪಕರಾದ ಶ್ರೀಮತಿ ಶ್ಯಾಮಲ ಪದ್ಮನಾಭನ್, ಮುಖ್ಯ ಅತಿಥಿಗಳು : ಉದ್ಯಮಿ ಶ್ರೀಮತಿ ಜಾಹ್ನವಿಮೂರ್ತಿ, ಅಧ್ಯಕ್ಷತೆ : ಮಾತೃಮಂಡಲಿ ವಿದ್ಯಾಸಂಸ್ಥೆ ಅಧ್ಯಕ್ಷೆ ಶ್ರೀಮತಿ ಎಂ. ವಿಜಯಲಕ್ಷ್ಮಿ ಅರಸ್, ಉಪಸ್ಥಿತರು : ಮಾತೃ ಮಂಡಳಿ ವಿದ್ಯಾಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಎಚ್.ಎ. ವಾಣಿ, ಜಂಟಿ ಕಾರ್ಯದರ್ಶಿ ಶ್ರೀಮತಿ ಹೇಮಾ ಬಾಲಚಂದ್ರನ್, ಸ್ಥಳ: ವಜ್ರ ಮಹೋತ್ಸವ ಸಭಾಂಗಣ, ಬೆಳಗ್ಗೆ 11ಕ್ಕೆ

■ **ಭಾರತೀಯ ರಂಗ ಶಿಕ್ಷಣ ಕೇಂದ್ರ, ರಂಗಾಯಣ, ಶ್ರೀ ಗುಬ್ಬಿ ವೀರಣ್ಣ ಅಧ್ಯಯನ ಪೀಠ, ವಿವಿ ಲಲಿತ ಕಲಾ ಕಾಲೇಜು, ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ :** ರಂಗ ಸಂಯುಕ್ತ, ರಂಗಭೂಮಿ ಹಾಗೂ ರಂಗಭೂಮಿಯ ಪೂರಕ ಕಲೆಗಳ ಉಪನ್ಯಾಸ ಮಾಲಿಕೆ, ವೀಣಾ ಬಸವರಾಜಯ್ಯ ಅವರಿಂದ ನೃತ್ಯ (ಚಲನೆ) ಕುರಿತು ಉಪನ್ಯಾಸ, ಸ್ಥಳ: ಬಿ.ವಿ. ಕಾರಂತ ರಂಗಚಾವಡಿ, ಸಂಜೆ 5 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ಪುರಂದರದಾಸರ ಮತ್ತು ಶ್ರೀ ತ್ಯಾಗರಾಜರ ಆರಾಧನೆ ಪ್ರಯುಕ್ತ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಸಂಜೆ 6 ರಿಂದ ಅಭಿಜ್ಞಾ ಅಫಲಯಂ ಅವರಿಂದ ಗಾಯನ, ಸಂಜೆ 7.15 ರಿಂದ ಅಕ್ಷತಾ ಎಸ್. ಭಟ್ ಅವರಿಂದ ಗಾಯನ, ಪ್ರೇರಣಾ ಪ್ರವೀಣ್–ಪಿಟೀಲು, ಟಿ.ಆರ್. ಭುವನ್–ಮೃದಂಗ, ಸ್ಥಳ: ಶ್ರೀರಾಮಮಂದಿರ, ಜಯನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ. ಆರ್. ರಾಮಕೃಷ್ಣ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, 10.00 ಆರ್.ಕೆ. ಪದ್ಮನಾಭ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 1.20 ಭಾವಗೀತೆ– ಪ್ರಥಮ್ ಭಟ್, 4.30 ರಸಮಂಜರಿ, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸವಾದದಲ್ಲಿ ಭಾಗವಹಿಸುತ್ತಾರೆ ಎಂ. ರಾಜೇಂದ್ರನ್ ಹಾಗೂ ಆರ್. ಅಶ್ವಥ್, 8.00 ಯುವವಾಣಿ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕನ್ನಡ ಸಾಹಿತ್ಯ ಪರಿಷತ್ತು :** ಸುವರ್ಣ ಕರ್ನಾಟಕ ಸಂಭ್ರಮ–2024, ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ, ಚಾಮರಾಜ ವಿಧಾನಸಭಾ ಕ್ಷೇತ್ರ, ಕರ್ನಾಟಕ ರತ್ನ ದೇಜಗೌ ವೇದಿಕೆ, ಕುವೆಂಪು ಮಹಾದ್ವಾರ, ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ : ಬೆಳಗ್ಗೆ 8.30ಕ್ಕೆ ಧ್ವಜಾರೋಹಣ, ರಾಷ್ಟ್ರ ಧ್ವಜಾರೋಹಣ : ಶಾಸಕ ಕೆ. ಹರೀಶ್‌ಗೌಡ, ನಾಡ ಧ್ವಜಾರೋಹಣ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪರಿಷತ್ತಿನ ಧ್ವಜಾರೋಹಣ : ನಗರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ಶಿವರಾಮು, ಬೆಳಗ್ಗೆ 9ಕ್ಕೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ, ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ, ಮೆರವಣಿಗೆಗೆ ಚಾಲನೆ : ಶಾಸಕ ಕೆ. ಹರೀಶ್‌ಗೌಡ, ಬೆಳಗ್ಗೆ 11ಕ್ಕೆ ಸಮ್ಮೇಳನ ಉದ್ಘಾಟನೆ: ಪ್ರೊ.ಎಂ.ಕೃಷ್ಣೇಗೌಡ, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಜಯಪ್ರಕಾಶ್‌ರಾವ್ ಅವರ ದಶಕಗಳ ಸಾಹಿತ್ಯದ ಮೊಗಸಾಲೆಯಲ್ಲಿ ಕೃತಿ ಬಿಡುಗಡೆ–1: ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ. ಅರವಿಂದ ಮಾಲಗತ್ತಿ, ಪ್ರೊ. ವೈ.ಎಸ್. ಗೌರಮ್ಮ ಅವರ 'ದಾರ್ಶನಿಕ ಕುವೆಂಪು' ಅವರ ಕೃತಿ ಬಿಡುಗಡೆ–2 : ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಚಿತ್ರಕಲಾ ಪ್ರದರ್ಶನ ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್, ಪುಸ್ತಕ ಮಳಿಗೆ ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಮ. 2.30 ರಿಂದ ವಿಚಾರಗೋಷ್ಠಿ ಉದ್ಘಾಟನೆ : ಹಿರಿಯ ಪತ್ರಕರ್ತ ಟಿ. ಗುರುರಾಜ್, ಮ. 3.30 ರಿಂದ ನಾಡು–ನುಡಿಯ ಕುರಿತು ಕವಿಗೋಷ್ಠಿ : ಸಂಜೆ 4.30ಕ್ಕೆ ವಿವಿಧ ಕ್ಷೇತ್ರದ ಸಾಧಕರಿಗೆ ಅಭಿನಂದನೆ, ಅಭಿನಂದಿಸುವವರು : ಮಾಜಿ ಶಾಸಕ ಎಲ್. ನಾಗೇಂದ್ರ, ಸಂಜೆ 5.30ಕ್ಕೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಸಂಜೆ 6.30 ರಿಂದ ಡಾ. ಲೋಕೇಶ್ ಐ.ಡಿ. ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ, ಸ್ಥಳ : ಕಲಾಮಂದಿರ.

ಸುತ್ತೂರು ಜಾತ್ರಾ ಮಹೋತ್ಸವದ ಇಂದಿನ ಕಾರ್ಯಕ್ರಮಗಳು



ಕರ್ತೃ ಗದ್ದುಗೆಯಲ್ಲಿ ಪೂಜಾ ಕೈಂಕರ್ಯ ಮತ್ತು ಮೆರವಣಿಗೆ

ಬೆಳಗ್ಗೆ 4ಕ್ಕೆ ಮಹಾರುದ್ರಾಭಿಷೇಕ, ಬೆ. 5ಕ್ಕೆ ಶಿವದೀಕ್ಷೆ–ಲಿಂಗದೀಕ್ಷೆ, ಬೆ. 6ಕ್ಕೆ ಶ್ರೀ ಮಠದ ಗುರುಪರಂಪರೆ ಸಂಸ್ಮರಣೋತ್ಸವ, ಮಂತ್ರಮಹರ್ಷಿ ಗದ್ದುಗೆ, ರುದ್ರಾಭಿಷೇಕ, 58ನೇ ಮಂತ್ರಲೇಖನ ಸಂಸ್ಮರಣೋತ್ಸವ, ಬೆ. 6.30ಕ್ಕೆ ಕಲ್ಕುಂದ : ಸ್ನೇಹ–ಸೌಹಾರ್ದ–ಶಾಂತಿ–ಪ್ರಾರ್ಥನಾ ಪಥ ಸಂಚಲನ, ಬೆ. 7.30ಕ್ಕೆ ಷಟ್‌ಸ್ಥಲ ಧ್ವಜಾರೋಹಣ : ವಿಜಯಪುರ ಶ್ರೀ ಬಸವ ಕಲ್ಯಾಣ ಮಠದ ಕಿರಿಯ ಶ್ರೀಗಳಾದ ಶ್ರೀ ಸದಾಶಿವ ಸ್ವಾಮೀಜಿ, ಧರ್ಮ ಸಂದೇಶ : ಮಲ್ಲನಮೂಲೆ ಕ್ಷೇತ್ರ ಶ್ರೀ ಗುರು ಕಂಬಳೀಶ್ವರ ಮಠದ ಕಿರಿಯ ಶ್ರೀಗಳಾದ ಶ್ರೀ ಇಮ್ಮಡಿ ಸಿದ್ಧಲಿಂಗ ಸ್ವಾಮಿಗಳು, ಬೆ. 9ಕ್ಕೆ ಉತ್ಸವಮೂರ್ತಿಗೆ ರಾಜೋಪಚಾರ, ಬೆ. 10.30ಕ್ಕೆ ರಥೋತ್ಸವ.

ರಥೋತ್ಸವ ಧಾರ್ಮಿಕ ಸಭೆ

ಸಮ್ಮುಖ : ನಿಂಬಾಳ ಶ್ರೀ ಶಾಂತಲಿಂಗೇಶ್ವರ ಮಠದ ಶ್ರೀ ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳು, ಶ್ರವಣಬೆಳಗೊಳ ಶ್ರೀ ಜೈನ ಮಠದ ಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳು, ಉದ್ಘಾಟನೆ : ಗೋವಾ ರಾಜ್ಯಪಾಲ ಪಿ.ಎಸ್. ಶ್ರೀಧರನ್ ಪಿಳ್ಳೈ, ಅಧ್ಯಕ್ಷತೆ : ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಮುಖ್ಯ ಅತಿಥಿಗಳು : ಮಾಜಿ ಸಚಿವರಾದ ಜೆ.ಸಿ. ಮಾಧುಸ್ವಾಮಿ, ಮುರುಗೇಶ್ ಆರ್. ನಿರಾಣಿ, ಎ. ಮಂಜು, ಅಡಗೂರು ಹೆಚ್. ವಿಶ್ವನಾಥ್, ಶಾಸಕರಾದ ಡಿ.ಜಿ. ಶಾಂತನಗೌಡ, ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ, ಟಿ.ಎಸ್.ಶ್ರೀವತ್ಸ, ದಿನೇಶ್ ಗೂಳಿಗೌಡ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ದೀಪಕ್ ಸಲೂಜ, ಬೆಳಗ್ಗೆ 11ಕ್ಕೆ.

53ನೇ ದನಗಳ ಜಾತ್ರೆ, ಚಿತ್ರಕಲಾ ಮತ್ತು ಗಾಳಿಪಟ ಸ್ಪರ್ಧೆ ಉದ್ಘಾಟನೆ

ಸಮ್ಮುಖ: ಬೆಳಗಾವಿ ಜಿಲ್ಲೆ ಪಿ.ಜಿ. ಹುಣಶ್ಯಾಳದ ಶ್ರೀ ಸಿದ್ಧಲಿಂಗ ಕೈವಲ್ಯಾಶ್ರಮದ ಶ್ರೀ ನಿಜಗುಣದೇವರು, ಹುಬ್ಬಳ್ಳಿ ಶ್ರೀ ಶಾಂತಾಶ್ರಮದ ಶ್ರೀ ಅಭಿನವ ಸಿದ್ಧಾರೂಢ ಸ್ವಾಮೀಜಿ, ಅಧ್ಯಕ್ಷತೆ: ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್, ಚಿತ್ರಕಲಾ ಸ್ಪರ್ಧೆ ಉದ್ಘಾಟನೆ: ಕಾನೂನು ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್, ಗಾಳಿಪಟ ಸ್ಪರ್ಧೆ ಉದ್ಘಾಟನೆ : ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್, ದನಗಳ ಜಾತ್ರೆ ಉದ್ಘಾಟನೆ: ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ಮುಖ್ಯ ಅತಿಥಿಗಳು: ಶಾಸಕರಾದ ಬಸವರಾಜ ರಾಯರೆಡ್ಡಿ, ತನ್ವೀರ್ ಸೇಠ್, ಸಿ.ಪುಟ್ಟರಂಗಶೆಟ್ಟಿ, ಸಿ.ಎಸ್.ನಾಡಗೌಡ, ಎ.ಆರ್. ಕೃಷ್ಣಮೂರ್ತಿ, ಕೃಷ್ಣನಾಯ್ಕ, ವಿಧಾನ ಪರಿಷತ್ ಸದಸ್ಯ ಮಧು ಜಿ. ಮಾದೇಗೌಡ, ಚಲನಚಿತ್ರ ನಟ ದರ್ಶನ್ ತೂಗುದೀಪ.

ಸಾಂಸ್ಕೃತಿಕ ಕಾರ್ಯಕ್ರಮಗಳು

ಗದ್ದುಗೆ ಆವರಣ : ಬೆಳಗ್ಗೆ 8ಕ್ಕೆ ನಾದಸ್ವರ, 9ಕ್ಕೆ ಭಕ್ತಿಗೀತೆ ಮತ್ತು ವಚನ ಗಾಯನ : ಗಾನಲಹರಿ ತಂಡ, ತೊರವಳ್ಳಿ, ನಂಜನಗೂಡು ತಾ.; ಮ. 2ಕ್ಕೆ ರಂಗಗೀತೆ : ರಾಜಪ್ಪ ಮತ್ತು ತಂಡ, ಕಿರಗಸೂರು, ಟಿ. ನರಸೀಪುರ ತಾ.; ರಾ. 7ಕ್ಕೆ ಭರತನಾಟ್ಯ : ಡಾ. ಅಕ್ಷತಾ ಎಸ್. ಜೈನ್ ಮತ್ತು ತಂಡ, ಭ್ರಮರಾಂಭ ಬಡಾವಣೆ, ಚಾಮರಾಜನಗರ; ರಾ. 8ಕ್ಕೆ ಶಿವತಾಂಡವ ನೃತ್ಯ : ವಿದುಷಿ ಎಸ್.ಎನ್. ಮೇಘನಾರಾವ್ ಮತ್ತು ತಂಡ, ದಟ್ಟಗಳ್ಳಿ, ಮೈಸೂರು; ರಾ. 9ಕ್ಕೆ ಶ್ರೀ ಮಲೆ ಮಹದೇಶ್ವರ ಕಥನ : ಜನಪದ ಗಾಯನ: ಡಾ. ಜಿ. ಗುರುರಾಜ್, ಹಳೆ ಕೆಸರೆ, ಮೈಸೂರು.

ನಾಟಕಗಳು ರಾತ್ರಿ 10ಕ್ಕೆ

ಹಿರಿಯ ಮನೆ ಆವರಣ : ಭಕ್ತ ಪ್ರಹ್ಲಾದ : ಶ್ರೀ ಮುದ್ದು ಮಹದೇಶ್ವರ ಕಲಾಸಂಘ, ಚಿಕ್ಕಹಳ್ಳಿ, ಮೈಸೂರು.

ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ : ದಕ್ಷಯಜ್ಞ : ಶ್ರೀ ಭೋಗೇಶ್ವರ ಕಲಾ ಸಂಘ, ಬೋಗಯ್ಯನಹುಂಡಿ, ನಂಜನಗೂಡು ತಾ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣ : ಶಿವಕುಮಾರ : ಶ್ರೀ ಬೋರಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ಗಾಣಿಗನಕೊಪ್ಪಲು, ಟಿ. ನರಸೀಪುರ ತಾ.

ಶ್ರೀ ಘನಲಿಂಗ ಶಿವಯೋಗಿ ಅತಿಥಿ ಗೃಹದ ಹಿಂಭಾಗ: ಭೀಮನ ಪ್ರತಿಜ್ಞೆ ಅಥವಾ ಗದಾಯುದ್ಧ : ಶ್ರೀ ಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ಗೌರೀಶಂಕರ, ಮೈಸೂರು.

ವಿಶೇಷ ಕಾರ್ಯಕ್ರಮಗಳು

ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ –ಕೈಮಗ್ಗ, ಜವಳಿ, ಕರಕುಶಲ ಉತ್ಪನ್ನಗಳು, ಗ್ರಾಮೀಣ ಉತ್ಪನ್ನಗಳು, ಕೈಗಾರಿಕೋತ್ಪನ್ನಗಳು, ಗೃಹ ಬಳಕೆ ವಸ್ತುಗಳು, ಪುಸ್ತಕ ಹಾಗೂ ಕಲಾಕೃತಿಗಳ ಪ್ರದರ್ಶನ, ಪ್ರೌಢಶಾಲಾ ವಿದ್ಯಾರ್ಥಿಗಳು ತಯಾರಿಸಿದ ಶೈಕ್ಷಣಿಕ ಮಾದರಿಗಳ ಪ್ರದರ್ಶನ, ವಿವಿಧ ಸಂಸ್ಥೆಗಳು, ಸಹಕಾರ ಸಂಘಗಳು, ಸ್ವಸಹಾಯ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು ಮತ್ತು ಗುಡಿ ಕೈಗಾರಿಕೆ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಆರೋಗ್ಯ, ವೈದ್ಯಕೀಯ ಮತ್ತು ತಾಂತ್ರಿಕ ವಸ್ತುಪ್ರದರ್ಶನ.

ಕೃಷಿ ಮೇಳ : ಪ್ರತಿದಿನ ಬೆಳಗ್ಗೆ 10 ರಿಂದ ರಾತ್ರಿ 7.30 ರವರೆಗೆ

ಹನಿ ನೀರಾವರಿಯಲ್ಲಿ ಭತ್ತದ ಬೆಳೆ ಪ್ರಾತ್ಯಕ್ಷಿಕೆ, ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಮಾರಾಟ, ಹಸು, ಕುರಿ, ಮೇಕೆ ಹಾಗೂ ಕೋಳಿಗಳು–ದೇಸಿ ತಳಿಗಳ ಪ್ರದರ್ಶನ, ವೈವಿಧ್ಯಮಯ ಬೆಳೆಗಳ ಪ್ರಾತ್ಯಕ್ಷಿಕೆ, ಒಂದು ಎಕರೆ ಕೃಷಿ ಬ್ರಹ್ಮಾಂಡ, ವಿದೇಶಿ ಆಹಾರ ಬೆಳೆಗಳಾದ ಚಿಯಾ ಮತ್ತು ಟೆಫ್‌ಗಳ ಪ್ರದರ್ಶನ, ದ್ವಿದಳ ಧಾನ್ಯಗಳ ವಿವಿಧ ತಳಿಗಳ ಪ್ರದರ್ಶನ.

ಬೆಳಗ್ಗೆ 6 ರಿಂದ 10 ರವರೆಗೆ : ಜೆಎಸ್‌ಎಸ್ ಆಸ್ಪತ್ರೆ ನುರಿತ ವೈದ್ಯರಿಂದ ಆರೋಗ್ಯ ತಪಾಸಣೆ ಶಿಬಿರ ಮತ್ತು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ವೈದ್ಯರಿಂದ ಕ್ಯಾನ್ಸರ್ ತಪಾಸಣಾ ಶಿಬಿರ

ದೇಸಿ ಆಟಗಳು

ಜೆಎಸ್‌ಎಸ್ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗಾಗಿ : ಗೋಲಿ, ಬುಗುರಿ, ಹುಲಿ–ಕುರಿ, ನವಕಂಕರಿ, ಹಾವು–ಏಣಿ, ಚೌಕಾಬಾರ, ಚದುರಂಗ, ಪಗ್ಗದ ಆಟ, ತಾಬ್ಲ, ಪಂಚೀ, ಸಿಂಗಮ್, ಕೆಸರುಗದ್ದೆ ಓಟ, ಹಗ್ಗ–ಜಗ್ಗಾಟ, ಅಣ್ಣೆಕಲ್ಲು, ಕುಂಟೆಬಿಲ್ಲೆ, ಅಳಿಗುಳಿಮಣೆ.

ಗ್ರಾಮೀಣ ಜನತೆಗಾಗಿ : ಕಲ್ಲುಗುಂಡು ಎತ್ತುವುದು, 50 ಕೆಜಿ ಭಾರದ ಚೀಲ ಹೊತ್ತುಕೊಂಡು ಓಡುವುದು, ಬುಗುರಿ, ಕೆಸರುಗದ್ದೆ ಓಟ, ಕೆಸರುಗದ್ದೆಯಲ್ಲಿ ಹಗ್ಗ ಜಗ್ಗಾಟ, ನಿಂಬೆಹಣ್ಣು ಇರುವ ಚಮಚವನ್ನು ಬಾಯಲ್ಲಿಟ್ಟುಕೊಂಡು ಓಡುವುದು, ಹಗ್ಗಜಗ್ಗಾಟ, ಅಳಗುಳಿಮಣೆ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮಡಕೆ ಒಡೆಯುವುದು, ಅಣ್ಣೆಕಲ್ಲು, ತುಂಬಿದ ಬಿಂದಿಗೆಯನ್ನು ತಲೆಯ ಮೇಲೆ ಹೊತ್ತು ಓಡುವುದು.

ವಾಸ್ತವ್ಯ ಮತ್ತು ಪ್ರಸಾದ : ಪ್ರತಿನಿತ್ಯ ಭಕ್ತಾದಿಗಳಿಗೆ ಪ್ರಸಾದ ಹಾಗೂ ದೂರದಿಂದ ಬರುವವರಿಗೆ ವಾಸ್ತವ್ಯಕ್ಕೆ ತಾತ್ಕಾಲಿಕ ಕುಟೀರಗಳಲ್ಲಿ ವ್ಯವಸ್ಥೆ.

ಬಸ್ ಸೌಲಭ್ಯ, ನೇರ ಪ್ರಸಾರ

ಬಸ್ ಸೌಲಭ್ಯ: ವಿವಿಧ ತಾಲೂಕುಗಳು ಮತ್ತು ಜಿಲ್ಲೆಗಳಿಂದ ಸುತ್ತೂರು ಜಾತ್ರಾ ವಿಶೇಷವಾಗಿ ಸಾರಿಗೆ ಬಸ್ ಸೌಕರ್ಯ ಕಲ್ಪಿಸಲಾಗಿದೆ. ಮಾಹಿತಿಗೆ ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು, ದೂ. 08221–232223, 232224 **ಜೆಎಸ್‌ಎಸ್ ಮಹಾವಿದ್ಯಾಪೀಠ. ದೂ.0821–2548212–122. https://www.youtube.com/@jssmhavidyapeetaonline**ನಲ್ಲಿ ಸುತ್ತೂರು ಜಾತ್ರೆ ನೇರ ಪ್ರಸಾರ.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜನ-ಜಾನುವಾರುಗಳಿಗೆ ನೀರು ಪೂರೈಕೆ ವ್ಯತ್ಯಯವಾಗಬಾರದು

ಅಗತ್ಯ ಮುಂಜಾಗ್ರತಾ ಕ್ರಮಕ್ಕೆ ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರ ತಾಕೀತು

ಮೈಸೂರು,ಫೆ.7(ಆರ್‌ಕೆ)-ಮೈಸೂರು ತಾಲೂಕಿನ ಗ್ರಾಮಗಳಲ್ಲಿ ಜನ-ಜಾನುವಾರುಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು ಅಗತ್ಯ ಮುಂಜಾಗ್ರತಾ ಕ್ರಮ ವಹಿಸುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಕುಡಿಯುವ ನೀರು ಸರಬರಾಜು ಕುರಿತು ಮೈಸೂರಿನ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಇಂದು ಅಧಿಕಾರಿಗಳ ಸಭೆ ನಡೆಸಿದ ಅವರು, ಈ ವರ್ಷ ಬೇಸಿಗೆ ತೀವ್ರ ಪ್ರಖರವಾಗುವ ಸಾಧ್ಯತೆ ಇರುವುದರಿಂದ ನೀರಿಗೆ ಹಾಹಾಕಾರ ಉಂಟಾಗುವ ಸಂಭವವಿರುವ ಕಾರಣ ಈಗಿನಿಂದಲೇ ಮುನ್ನೆಚ್ಚರಿಕೆ ವಹಿಸಿ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿದರು.

ಪ್ರಗತಿಯಲ್ಲಿರುವ ನೀರಿನ ಸಂಪರ್ಕ, ನೆಲಮಟ್ಟ ಹಾಗೂ ಎತ್ತರದ ನೀರಿನ ಟ್ಯಾಂಕ್ ನಿರ್ಮಾಣ ಯೋಜನೆ ಕಾಮಗಾರಿಗಳನ್ನು ಪಂಚಾಯ್ತಿವಾರು ಪೂರ್ಣಗೊಳಿಸಿ ನೀರು ಪೂರೈಸಲು ಸಿದ್ಧತೆ ಮಾಡಿಕೊಳ್ಳಬೇಕು, ಅಗತ್ಯವಿರುವೆಡೆ ಜಿಯೋಲಜಿಸ್ಟ್‌ಗಳಿಂದ ಪರಿಶೀಲಿಸಿ ನೀರು ಬರುವುದನ್ನು ಖಾತರಿಪಡಿಸಿಕೊಂಡು ಬೋರ್‌ವೆಲ್ ಕೊರೆಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನೀರಿನ ಸಮಸ್ಯೆ ಇರುವ ಬೀರಿಹುಂಡಿ ಗ್ರಾಮದಲ್ಲಿ ಇರುವ 4 ಕೊಳವೆ ಬಾವಿಗಳಲ್ಲೂ ನೀರು ಬರುತ್ತಿಲ್ಲ. ಅಲ್ಲಿ ಪೈಪ್‌ಲೈನ್ ಅಳವಡಿಸಿ ಲಭ್ಯವಿರುವ ಮಾರ್ಗಕ್ಕೆ ಸಂಪರ್ಕ ಕಲ್ಪಿಸುವ ಮೂಲಕ ಜನ-ಜಾನುವಾರುಗಳಿಗೆ ಕುಡಿಯುವ ನೀರು ಪೂರೈಸಿ, ಅದಕ್ಕೆ ಬೇಕಾಗುವ ಅನುದಾನವನ್ನು ಜಿಲ್ಲಾಧಿಕಾರಿಗಳಿಂದ ಬಿಡುಗಡೆ ಮಾಡಿಸಿಕೊಳ್ಳುವಂತೆಯೂ ಶಾಸಕರು ತಿಳಿಸಿದರು. ಕ್ಷೇತ್ರ ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯ್ತಿ, ಹೋಬಳಿ ಸರಹದ್ದಿನ ಗ್ರಾಮಗಳಿಗೂ ಭೇಟಿ ನೀಡಿ ಅಲ್ಲಿನ ನೀರು ಪೂರೈಕೆ ಸ್ಥಿತಿ, ಬೇಸಿಗೆಯಲ್ಲಿ ಎದುರಾಗಬಹುದಾದ ಸಮಸ್ಯೆ ಕುರಿತು ಪ್ರಮುಖರಿಂದ ಮಾಹಿತಿ ಪಡೆದು ಮುಂದೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ನನಗೆ ತಿಳಿಸಿದಲ್ಲಿ ಜಿಲ್ಲಾಡಳಿತದ ಮೂಲಕ ಅನುಕೂಲ ಮಾಡಿಕೊಡುತ್ತೇನೆ. ಈ ವಿಷಯದಲ್ಲಿ ನಿರ್ಲಕ್ಷ್ಯ ತಾಳಬೇಡಿ ಎಂದು ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಮಿನಿ ವಾಟರ್ ಸಪ್ಲೈ ಯೋಜನೆಯಡಿ ನಿರ್ಮಿಸಲುದ್ದೇಶಿಸಿರುವ ಸಂಪ್ ಮತ್ತು ವಾಟರ್ ಟ್ಯಾಂಕ್ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಬೇಕು, ಗ್ರಾಮ ಪಂಚಾಯ್ತಿ ವತಿಯಿಂದ ಪೈಪ್‌ಲೈನ್ ಅಳವಡಿಸಿ ಲಿಂಕ್ ಮಾಡುವ ಮೂಲಕ ಗ್ರಾಮಗಳಿಗೆ ನೀರು ಕೊಡಲು ವ್ಯವಸ್ಥೆ ಮಾಡಿ ಎಂದ ಶಾಸಕರು, ಹಳೇ ಉಂಡುವಾಡಿ ಕುಡಿಯುವ ನೀರಿನ ಯೋಜನೆ ಪ್ರಗತಿಯಲ್ಲಿದ್ದು, ಕಾಮಗಾರಿ ಮುಗಿಯುವವರೆಗೆ ಇಲವಾಲ, ನಾಗವಾಲ, ಬೊಮ್ಮನಹಳ್ಳಿ, ಸೀಗಳ್ಳಿ, ಲಿಂಗದೇವರಕೊಪ್ಪಲು ಸೇರಿದಂತೆ ಸುತ್ತಲಿನ ಗ್ರಾಮಗಳಿಗೆ ನೀರಿನ ತೊಂದರೆ ಉಂಟಾಗದಂತೆ ಪೂರ್ವತಯಾರಿ ಮಾಡಿಕೊಳ್ಳುವಂತೆಯೂ ಇದೇ ಸಂದರ್ಭ ಅಧಿಕಾರಿಗಳಿಗೆ ಸಲಹೆ ನೀಡಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಗಿರಿಧರ, ತಹಶೀಲ್ದಾರ್ ಮಹೇಶ್‌ಕುಮಾರ್, ಜಿಲ್ಲಾ ಪಂಚಾಯ್ತಿ ಉಪಕಾರ್ಯದರ್ಶಿ ಸವಿತಾ, ಭೂ ದಾಖಲೆಗಳ ಸಹಾಯಕ ನಿರ್ದೇಶಕ ಚಿಕ್ಕಣ್ಣ ಹಾಗೂ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.




ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಬುಧವಾರ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಅಧಿಕಾರಿಗಳ ಸಭೆ ನಡೆಸಿದರು. (ಎಡದಿಂದ) ಜಿಪಂ ಉಪ ಕಾರ್ಯದರ್ಶಿ ಸವಿತಾ, ತಾಪಂ ಇಓ ಗಿರಿಧರ್, ತಹಶೀಲ್ದಾರ್ ಮಹೇಶ್ ಕುಮಾರ್ ಹಾಗೂ ಎಡಿಎಲ್‌ಆರ್ ಚಿಕ್ಕಣ್ಣ ಅವರನ್ನು ಚಿತ್ರದಲ್ಲಿ ಕಾಣಬಹುದು.

ಪೌತಿ ಖಾತೆ, ಇ-ಸ್ವತ್ತು, ಆಶ್ರಯ ಮನೆ, ಪಿಂಚಣಿ, ಆರೋಗ್ಯ ಸವಲತ್ತಿಗೆ ಆದ್ಯತೆ ನೀಡಿ

ಮೈಸೂರು, ಫೆ.7(ಆರ್‌ಕೆ)-ಚಾಮುಂಡೇಶ್ವರಿ ಕ್ಷೇತ್ರದ ಜನರಿಗೆ ಜಮೀನುಗಳ ಪೌತಿ ಖಾತೆ, ಕಂದಾಯ, ಇ-ಸ್ವತ್ತು ದಾಖಲೆ, ಆಶ್ರಯ ಮನೆ, ಸಾಮಾಜಿಕ ಭದ್ರತಾ ಯೋಜನೆಯ ಪಿಂಚಣಿ ಸೇರಿದಂತೆ ಸರ್ಕಾರದ ಸೌಲಭ್ಯಗಳನ್ನು ಆದ್ಯತೆ ಮೇಲೆ ತಲುಪಿಸಿ ಎಂದು ಶಾಸಕ ಜಿ.ಟಿ.ದೇವೇಗೌಡರು ಅಧಿಕಾರಿಗಳಿಗೆ ಇಂದಿಲ್ಲಿ ಸೂಚಿಸಿದ್ದಾರೆ.

ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಸಭೆ ನಡೆಸಿದ ಅವರು, ಪ್ರತೀ ಗ್ರಾಮದ ರೈತರು ತಮ್ಮ ಜಮೀನುಗಳ ಖಾತೆ, ಪೌತಿ ಖಾತೆ ಮಾಡಿಸಿಕೊಳ್ಳಲು ಪರದಾಡುತ್ತಿರುವ ಬಗ್ಗೆ ದೂರುಗಳಿವೆ. ಇ-ಸ್ವತ್ತು ಆ್ಯಪ್ ಮೂಲಕ ಆನ್‌ಲೈನ್ ದಾಖಲೆ ಕೊಡುವ ವ್ಯವಸ್ಥೆ ಇದ್ದರೂ ತೊಂದರೆ ಕೊಡುವುದೇಕೆ ಎಂದು ಪ್ರಶ್ನಿಸಿದರು. ಎಲ್ಲಾ ಗ್ರಾಮಗಳಲ್ಲಿ ಸೂರಿಲ್ಲದವರನ್ನು ಗುರ್ತಿಸಿ ಫಲಾನುಭವಿಗಳ ಪಟ್ಟಿ ತಯಾರಿಸಿ ಬೇಡಿಕೆಗೆ ತಕ್ಕಂತೆ ಈಗಾಗಲೇ ನಿಗದಿಯಾಗಿರುವ ಜಾಗದಲ್ಲಿ ಆಶ್ರಯ ಮನೆ ನಿರ್ಮಿಸಿಕೊಡಲು ತಯಾರಿ ಮಾಡಿಕೊಳ್ಳಿ. ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಪಡೆಯಲು ಆಧಾರ್, ಬಿಪಿಎಲ್ ಕಾರ್ಡ್ ಹಾಗೂ ಇನ್ನಿತರ ದಾಖಲೆಗಳಿಲ್ಲ ಎಂಬ ಕಾರಣಕ್ಕಾಗಿ ಕೆಲವರಿಗೆ ಪಿಂಚಣಿ ಇನ್ನೂ ಬರುತ್ತಿಲ್ಲ. ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಗ್ರಾಮಗಳಿಗೆ ಭೇಟಿ ನೀಡಿ ಅಂತಹ ಫಲಾನುಭವಿಗಳಿಗೆ ಪಿಂಚಣಿ ಬರುವ ಹಾಗೆ ಮಾಡಿ ಎಂದು ಜಿಟಿಡಿ ಸಲಹೆ ನೀಡಿದರು.

ಗ್ರಾಮಗಳಿಂದ ಸಂಗ್ರಹಿಸುವ ತ್ಯಾಜ್ಯವನ್ನು ವಿಲೇವಾರಿ ಮಾಡಲು ಮೈಸೂರಿನ ಕುಂಬಾರಕೊಪ್ಪಲಿನಲ್ಲಿರುವಂತೆ ಕಸ ವಿಲೇವಾರಿ ಕೇಂದ್ರ ಸ್ಥಾಪಿಸಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಜನರಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸಿ ಸ್ವಾಸ್ಥ್ಯ ಗ್ರಾಮಗಳನ್ನಾಗಿ ಮಾಡಿ ಎಂದು ಶಾಸಕರು ಇದೇ ವೇಳೆ ಸೂಚಿಸಿದರು. ಸರ್ಕಾರದ ಸೌಲಭ್ಯಗಳು, ಯೋಜನೆಯ ಅನುಕೂಲಗಳು, ಪಡೆದುಕೊಳ್ಳುವ ವಿಧಾನಗಳ ಬಗ್ಗೆ ಜನರಿಗೆ ಮಾಹಿತಿ ನೀಡಲು ಹೋಬಳಿ ಮಟ್ಟದಲ್ಲಿ ಸೇವಾ ಕೇಂದ್ರ ಸ್ಥಾಪಿಸಿ, ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿ ಸಾರ್ವಜನಿಕರಿಗೆ ಸಂಬಂಧಿಸಿದ ದಾಖಲೆ, ಕಡತಗಳನ್ನು ಕಡ್ಡಾಯವಾಗಿ ನಿರ್ವಹಣೆ ಮಾಡಿ, ಕೆರೆ, ಕಾಲುವೆ, ಸ್ಮಶಾನ ಒತ್ತುವರಿ ತೆರವುಗೊಳಿಸಬೇಕೆಂದು ಜಿ.ಟಿ.ದೇವೇಗೌಡರು ಸೂಚನೆ ನೀಡಿದರು. ಶಾಲೆ, ಅಂಗನವಾಡಿ ಕೇಂದ್ರಗಳಲ್ಲಿ ಪೀಠೋಪಕರಣ, ನೀರು, ವಿದ್ಯುತ್, ಸ್ಮಾರ್ಟ್ ಕ್ಲಾಸ್, ಶೌಚಾಲಯ ಸೌಲಭ್ಯಕ್ಕೆ ಕೊರತೆಯಾಗಬಾರದು. ಕೆರೆ, ನಾಲೆಗಳಿಗೆ ಕಲುಷಿತ ನೀರು ಹರಿಯಬಿಡದಂತೆ ಎಚ್ಚರ ವಹಿಸುವ ಜವಾಬ್ದಾರಿ ನಿಮ್ಮದು. ಪಿಡಿಓಗಳು ಯಾರೋ ನಾಯಕರನ್ನು ನೆಚ್ಚಿಕೊಳ್ಳುವ ಬದಲು ಅಲ್ಲಿನ ಜನರನ್ನು ನೆಚ್ಚಿಕೊಂಡು ಕೆಲಸ ಮಾಡಬೇಕು. ಯಾರನ್ನೋ ಓಲೈಸಲು ಇನ್ಯಾರದೋ ಕೆಂಗಣ್ಣಿಗೆ ಗುರಿಯಾಗಬೇಡಿ ಎಂದು ಜಿಟಿಡಿ ನೀತಿ ಪಾಠ ಹೇಳಿದರು. ಪಿಡಿಓಗಳನ್ನು ನಾನು ವರ್ಗಾವಣೆ ಮಾಡಿಸುತ್ತಿಲ್ಲ. ಸರ್ಕಾರವೇ ದಿಢೀರ್ ವರ್ಗ ಮಾಡುತ್ತಿದೆ. ನಮ್ಮ ಕ್ಷೇತ್ರದಲ್ಲಿರುವವರನ್ನು ಬೇರೆ ಕ್ಷೇತ್ರಕ್ಕೆ ವರ್ಗಾಯಿಸಲು ಅವಕಾಶ ಕೊಡಬಾರದು. ಹಿರಿಯ ಅಧಿಕಾರಿಗಳು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕು. ಚೆನ್ನಾಗಿ ಕೆಲಸ ಮಾಡುವವರನ್ನು ನಮ್ಮಲ್ಲೇ ಉಳಿಸಿಕೊಳ್ಳಬೇಕೆಂದು ಅವರು ತಿಳಿಸಿದರು.

ಬಿಜೆಪಿ ಜೊತೆ ಜೆಡಿಎಸ್ ಹೊಂದಾಣಿಕೆ ಲೋಕಸಭಾ ಚುನಾವಣೆಗೆ ಸೀಮಿತ

ಮೈಸೂರು, ಫೆ. 7 (ಆರ್‌ಕೆ)- ಬಿಜೆಪಿಯೊಂದಿಗೆ ಜೆಡಿಎಸ್ ಮೈತ್ರಿ ಕೇವಲ ಲೋಕಸಭಾ ಚುನಾವಣೆಗೆ ಸೀಮಿತ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶಾಸಕ ಜಿ.ಟಿ. ದೇವೇಗೌಡರು ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಬಳಿ ಪತ್ರಕರ್ತರ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಹೆಚ್.ಡಿ. ಕುಮಾರಸ್ವಾಮಿ ಅವರು ಧರಿಸಿದ್ದ ಶಾಲು ಬಿಜೆಪಿಯವರದ್ದಲ್ಲ. ಆಂಜನೇಯ ಭಕ್ತ ಯುವಕನೋರ್ವ ಅಭಿಮಾನದಿಂದ ಹಾಕಿದ್ದ ಕೇಸರಿ ಶಾಲು. ಅದನ್ನೇ ಕಾಂಗ್ರೆಸ್‌ನವರು ದೊಡ್ಡ ವಿಷಯವಾಗಿ ಬಿಂಬಿಸಿದ್ದಾರೆ ಎಂದರು.

ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಹೋಗಿದ್ದಾಗ ಅಭಿಮಾನಿಗಳು ಕೇಸರಿ ಶಾಲು ಹಾಕಿದರೆ, ಅದು ಬಿಜೆಪಿ ಶಾಲು ಎಂದು ಭಾವಿಸಿದರೆ ಹೇಗೆ? ಅದು ಭಕ್ತಿಯ ಸಂಕೇತ ಎಂದು ಕುಮಾರಸ್ವಾಮಿ ಅವರು ಧರಿಸಿದ್ದಾರಷ್ಟೇ. ಅದಕ್ಕೆ ಬೇರೆ ವ್ಯಾಖ್ಯಾನ ಬೇಡ ಎಂದ ಜಿಟಿಡಿ, ಬಿಜೆಪಿಯೊಂದಿಗಿನ ಜೆಡಿಎಸ್ ಹೊಂದಾಣಿಕೆ ಕೇವಲ 2024ರ ಲೋಕಸಭಾ ಚುನಾವಣೆಗಷ್ಟೇ ಸೀಮಿತ ಎಂದರು. ನಮ್ಮ ಪಕ್ಷದ ಸಿದ್ಧಾಂತವೇ ಬೇರೆ, ಬಿಜೆಪಿಯದ್ದೇ ಬೇರೆ. ಜನತಾ ಪಕ್ಷ ಕಟ್ಟಿದ ಜಯಪ್ರಕಾಶ್ ನಾರಾಯಣ್, ಅದನ್ನು ಉಳಿಸಿ ಬೆಳೆಸಿದ, ಹೆಚ್.ಡಿ. ದೇವೇಗೌಡರ ಹಾದಿಯಲ್ಲೇ ನಾವು ಸಾಗುತ್ತೇವೆ. ಮೈತ್ರಿ ಮಾಡಿಕೊಂಡ ಮಾತ್ರಕ್ಕೆ ನಮ್ಮ ತತ್ವ ಸಿದ್ಧಾಂತ ಬದಲಾಗದು. ಹಾಗಾಗಿ ಚುನಾವಣೆ ದೃಷ್ಟಿಯಿಂದ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದೇವೆಯೇ ಹೊರತು ಬೇರೇನೂ ಅಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಸಂವಿಧಾನದಿಂದಷ್ಟೇ ಸಾಮಾಜಿಕ ನ್ಯಾಯ ಸಾಧ್ಯ

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹುಟ್ಟುಹಬ್ಬದಲ್ಲಿ ಮಾಜಿ ಶಾಸಕ ರಮೇಶ್ ಬಾಬು ಅಭಿಮತ



'ಪ್ರಸ್ತುತ ಸಮಾಜ ಮತ್ತು ಸಾಮಾಜಿಕ ನ್ಯಾಯ' ವಿಷಯ ಮಂಡನೆ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ರಮೇಶ್ ಬಾಬು ಭಾಗವಹಿಸಿದ್ದರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತ್ತಿತರರಿದ್ದರು.

ಮೈಸೂರು, ಫೆ.7(ಎಂಕೆ)- ಸಾಮಾಜಿಕ ನ್ಯಾಯವೆಂಬುದು ಚಲನಾಶೀಲ ಪ್ರಕ್ರಿಯೆಯಾಗಿದ್ದು, ಸಂವಿಧಾನದಿಂದ ಮಾತ್ರವೇ ಪಡೆದುಕೊಳ್ಳಲು ಸಾಧ್ಯ ಎಂದು ಮಾಜಿ ಶಾಸಕ ರಮೇಶ್ ಬಾಬು ಹೇಳಿದರು. ಮೈಸೂರಿನ ಕುವೆಂಪುನಗರದಲ್ಲಿರುವ ಚಿಕ್ಕಮ್ಮಾನಿಕೇತನ ಸಮುದಾಯ ಭವನದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ 'ಪ್ರಸ್ತುತ ಸಮಾಜ ಮತ್ತು ಸಾಮಾಜಿಕ ನ್ಯಾಯ' ಕುರಿತ ವಿಷಯ ಮಂಡನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಪ್ರತಿಯೊಬ್ಬರಿಗೂ ಸ್ವಾತಂತ್ರ್ಯ, ಸಮಾನತೆಯ ಹಕ್ಕುಗಳು ದೊರೆತಿವೆ ಎಂದರೆ, ಅದಕ್ಕೆ ಸಂವಿಧಾನವೇ ಕಾರಣ. ಸಂವಿಧಾನದಿಂದ ಮಾತ್ರವೇ ಸಮಾಜದಲ್ಲಿ ಸಮಾನತೆ, ಸಾಮರಸ್ಯ ಸಾಧಿಸಲು ಸಾಧ್ಯ ಎಂದರು.

ಇತ್ತೀಚಿನ ದಿನಗಳಲ್ಲಿ ಧರ್ಮದ ಹೆಸರಿನಲ್ಲಿ ಒಗ್ಗಟ್ಟಿನ ಸಮಾಜದಲ್ಲಿ ಒಡಕು ತರುವ ಪ್ರಯತ್ನಗಳು ವಿಪರೀತವಾಗಿ ನಡೆಯುತ್ತಿವೆ. ಮಾನವೀಯ ನೆಲೆಗಟ್ಟಿನಲ್ಲಿ ನಿಂತಿರುವ ವಿವಿಧ ಮತ-ಧರ್ಮಗಳಿರುವ ಸಮಾಜದಲ್ಲಿ ಆರೋಗ್ಯಕರವಾದ ಚರ್ಚೆಗಳಿಗೆ ಅವಕಾಶವಿದೆಯೇ ಹೊರತು ಕೋಮುಗಳ ನಡುವೆ ವೈಷಮ್ಯ ತರುವ ಚರ್ಚೆಗಳಲ್ಲ ಎಂದು ತಿಳಿಸಿದರು.

ದೇಶದ ಪ್ರತಿಯೊಬ್ಬ ಪ್ರಜೆಗೂ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಾನಮಾನಗಳು ಸಮಾನವಾಗಿ ದೊರಕಬೇಕು. ಪ್ರಸ್ತುತ ಸಮಾಜದಲ್ಲಿರುವ ವೈರುಧ್ಯಗಳು ದೂರವಾಗಿ ಒಗ್ಗಟ್ಟು ನೆಲೆಸಬೇಕು. ಕರ್ನಾಟಕದಲ್ಲಿ ಮೈಸೂರು ಮಹಾರಾಜರು ಒಕ್ಕಲಿಗ ಸಮುದಾಯ ಸೇರಿದಂತೆ ಎಲ್ಲಾ ಹಿಂದುಳಿದ ಸಮಾಜಗಳ ಸ್ಥಿತಿ-ಗತಿ ಗಮನಿಸಿ ಮೀಸಲಾತಿ ಜಾರಿಗೊಳಿಸಿ, ಸಮ ಸಮಾಜ ನಿರ್ಮಾಣಕ್ಕೆ ಬುನಾದಿ ಹಾಕಿಕೊಟ್ಟರು ಎಂದು ಸ್ಮರಿಸಿದರು. ಬಳಿಕ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರಿಗೆ ಕಾಂಗ್ರೆಸ್ ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹೂಗುಚ್ಛ ನೀಡಿ, ಕೇಕ್ ಕತ್ತರಿಸಿ, ಹುಟ್ಟುಹಬ್ಬದ ಶುಭ ಕೋರಿದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್, ಮಾಜಿ ಮೇಯರ್‌ಗಳಾದ ಅಯೂಬ್ ಖಾನ್, ಪುಷ್ಪಲತಾ ಜಗನ್ನಾಥ್, ಪುಷ್ಪಲತಾ ಚಿಕ್ಕಣ್ಣ, ಮೋದಮಣಿ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಹುಕ್ಕಾ ನಿಷೇಧ: ಆರೋಗ್ಯ ಇಲಾಖೆ ಆದೇಶ

ಬೆಂಗಳೂರು, ಫೆ.7- ರಾಜ್ಯದಲ್ಲಿ ಎಲ್ಲ ಬಗೆಯ ಹುಕ್ಕಾ ಉತ್ಪನ್ನಗಳ ಮಾರಾಟ, ಸೇವನೆ, ಅವುಗಳ ಪರ ಜಾಹೀರಾತು, ಸೇವನೆಗೆ ಪ್ರಚೋದನೆ ಮತ್ತು ಸಂಗ್ರಹಣೆಯನ್ನು ನಿಷೇಧಿಸಿ ಆರೋಗ್ಯ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ಸಾರ್ವಜನಿಕರ ಆರೋಗ್ಯ ಕಾಪಾಡುವುದಕ್ಕೆ ಸಂವಿಧಾನದ 47ನೇ ವಿಧಿಯಲ್ಲಿ ರಾಜ್ಯ ಸರ್ಕಾರಕ್ಕೆ ಲಭ್ಯವಿರುವ ಅಧಿಕಾರವನ್ನು ಬಳಸಿ ಈ ಆದೇಶ ಹೊರಡಿಸಲಾಗಿದೆ. ತಂಬಾಕು ಅಥವಾ ನಿಕೋಟಿನ್ ಒಳಗೊಂಡ ಹುಕ್ಕಾ, ತಂಬಾಕುರಹಿತ ಮತ್ತು ನಿಕೋಟಿನ್ ರಹಿತ ಹುಕ್ಕಾ, ಸ್ವಾದಭರಿತ, ಮೊಲಾಸಿಸ್, ಶಿಶಾ ಒಳಗೊಂಡ ಹುಕ್ಕಾಗಳನ್ನು ನಿಷೇಧಿಸಲಾಗಿದೆ. ಆದೇಶ ಉಲ್ಲಂಘಿಸಿದವರ ವಿರುದ್ಧ ಸಿಗರೇಟು ಮತ್ತು ಇತರ ತಂಬಾಕು ಉತ್ಪನ್ನಗಳ (ಕೋಟ್ಪಾ) ಕಾಯ್ದೆ, ಮಕ್ಕಳ ಆರೈಕೆ ಮತ್ತು ರಕ್ಷಣೆ ಕಾಯ್ದೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ, ಕರ್ನಾಟಕ ವಿಷ (ಸ್ವಾಧೀನ ಮತ್ತು ಮಾರಾಟ) ಕಾಯ್ದೆ, ಭಾರತೀಯ ದಂಡ ಸಂಹಿತೆ ಹಾಗೂ ಅಗ್ನಿ ನಿಯಂತ್ರಣ ಮತ್ತು ಸುರಕ್ಷತಾ ಕಾಯ್ದೆಗಳ ಅಡಿಯಲ್ಲಿ ಕ್ರಮ ಜರುಗಿಸುವುದಾಗಿ ಆರೋಗ್ಯ ಇಲಾಖೆ ಆದೇಶದಲ್ಲಿ ತಿಳಿಸಿದೆ. ಕೋಟ್ಪಾ ಕಾಯ್ದೆಯಡಿ ಹುಕ್ಕಾವನ್ನು ತಂಬಾಕು ಎಂದು ಪರಿಗಣಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನಕ್ಕೆ ಅವಕಾಶವಿಲ್ಲ. ಮಕ್ಕಳು ಮತ್ತು ವಿದ್ಯಾರ್ಥಿಗಳಿಗೆ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧಿಸಲಾಗಿದೆ. ಕರ್ನಾಟಕ ವಿಷ (ಸ್ವಾಧೀನ ಮತ್ತು ಮಾರಾಟ) ಕಾಯ್ದೆ ಅಡಿಯಲ್ಲಿ ನಿಕೋಟಿನ್ ಅನ್ನು ವಿಷ ಎಂದು ಪರಿಗಣಿಸಲಾಗಿದೆ ಎಂಬ ವಿವರಣೆ ಆದೇಶದಲ್ಲಿದೆ. ವಿಶ್ವ ಆರೋಗ್ಯ ಸಂಸ್ಥೆಯು ಹುಕ್ಕಾವನ್ನು ವ್ಯಸನಕಾರಿ ಉತ್ಪನ್ನ ಎಂದು ಘೋಷಿಸಿದೆ. ಹುಕ್ಕಾ ಸೇವನೆಯು ಆರೋಗ್ಯಕ್ಕೆ ಅತ್ಯಂತ ಮಾರಕ. ಹುಕ್ಕಾ ಬಾರ್‌ಗಳು ಅಗ್ನಿ ಅನಾಹುತಗಳಿಗೆ ಕಾರಣವಾಗುತ್ತಿದೆ. ಈ ಎಲ್ಲ ಕಾರಣದಿಂದ ಹುಕ್ಕಾ ನಿಷೇಧಿಸಲಾಗಿದೆ ಎಂದು ಇಲಾಖೆ ಹೇಳಿದೆ.

ವಿದ್ಯಾರ್ಥಿನಿ ನೇಣಿಗೆ ಶರಣು

ಮೈಸೂರು, ಫೆ.7(ಎಂಕೆ)-ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಮೈಸೂರಿನ ಕೆ.ಟಿ.ಸ್ಟ್ರೀಟ್‌ನಿಂದ ವರದಿಯಾಗಿದೆ.

ಇಲ್ಲಿನ ದೊಡ್ಡ ಒಕ್ಕಲಗೇರಿ ಬೀದಿಯಲ್ಲಿ ವಾಸವಿದ್ದ ಶಾಮಿಲಿ(25) ನೇಣಿಗೆ ಶರಣಾದ ವಿದ್ಯಾರ್ಥಿನಿಯಾಗಿದ್ದು, ಈಕೆ ಬಹಳ ದಿನಗಳಿಂದ ಹೊಟ್ಟೆನೋವಿನಿಂದ ಬಳಲುತ್ತಿದ್ದು, ಇದರಿಂದಾಗಿ ಸೋಮವಾರ ಮಧ್ಯಾಹ್ನ ಮನೆಯಲ್ಲಿ ಯಾರೂ ಇಲ್ಲದ ವೇಳೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಈಕೆಯ ಪೋಷಕರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕ್ಕರೆ ಅದೇ ಸ್ವರ್ಗ

ಆತ : ನಾನು ಲಕ್ಷಾಧೀಶ್ವರ ಆಗಿದ್ದು ನನ್ನ ಹೆಂಡತಿಯಿಂದ
ಈತ : ಇದಕ್ಕೆ ಮುಂಚೆ ಏನಾಗಿದ್ರಿ?
ಆತ : ಕೋಟ್ಯಾಧೀಶ್ವರ !

ಮೈಸೂರು ಮಿತ್ರ

ಗುರುವಾರ, 8 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಮುಗಿಲಿಗೆ ಯಾವ ಅಪೇಕ್ಷೆಯೂ ಇಲ್ಲ, ಯಾರದೇ ದಾಕ್ಷಿಣ್ಯ ಇಲ್ಲ. ಯಾವುದೇ ಪ್ರೀತಿಯ ಹಂಗಿಲ್ಲ. ಜೊತೆಗಾರನೆಂಬ ಭಾವನೆಯೂ ಇಲ್ಲ. ಆದರೂ ಮುಗಿಲು ತನ್ನದೇ ಆದ ದೊಡ್ಡಸ್ತಿಕೆಯಿಂದ ಜನಗಳ ಬೇಗುದಿಯನ್ನು ಹೋಗಲಾಡಿಸುತ್ತದೆ. –ಭಾಮಿನೀ ವಿಲಾಸ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾತು ಚಿಕ್ಕದಾಗಿರಲಿ, ಕೆಲಸ ಚೊಕ್ಕವಾಗಿರಲಿ

ನಿಮ್ಮ ಪತ್ರಗಳು

ನಾನು ಕಂಡ ಪ್ರಧಾನಿ ಮೋದಿ

ಮಾನ್ಯರೆ,



ಇಡೀ ವಿಶ್ವಕ್ಕೆ ನೆಲೆ ನೀಡುವ ಶ್ರೀರಾಮಚಂದ್ರ ನಿನಗೆ ಭಾರತದಲ್ಲಿ ನೆಲೆ ನೀಡುವಲ್ಲಿ ತಡವಾಯಿತು ಕ್ಷಮಿಸು ಶ್ರೀರಾಮಚಂದ್ರ ಎನ್ನುವ ನಮ್ಮ ಪ್ರಧಾನಿ ನರೇಂದ್ರ ಮೋದಿಯವರ ಕರುಣಾಪೂರ್ವಕ, ಅರ್ಥಗರ್ಭಿತ ಹಾಗೂ ಭಾವನಾಪೂರ್ವಕ ನಿವೇದನೆಗಳು, ಭಾರತದ 130 ಕೋಟಿ ಜನರ ಪರವಾಗಿ ಪ್ರಧಾನಿಯವರಿಂದ ಕಳಕಳಿಯ, ಭಾರತದ ಪ್ರತಿಯೊಬ್ಬ ಭಾರತೀಯನ ಪ್ರಾರ್ಥನೆ. ಮಾನವೀಯ ಕಳಕಳಿಯ ಪುರುಷೋತ್ತಮ. ಅಬ್ಬಾ ಭಾರತ ದೇಶ ಅದರಲ್ಲೂ ಇಂದಿನ ಪೀಳಿಗೆ ಎಷ್ಟು ಅದೃಷ್ಟ ಮಾಡಿದೆ. ಇಂತಹ ಪ್ರಧಾನಿಯನ್ನು ಪಡೆಯಲು ಅಂದರೆ ತಪ್ಪಾಗಲಾರದು.

ಇಡೀ ವಿಶ್ವದಲ್ಲೇ ನಮ್ಮ ಪ್ರಧಾನಿಯು ಹೆಗ್ಗಳಿಕೆಯ ಪರಿಪೂರ್ಣ ವ್ಯಕ್ತಿ. ಇಡೀ ವಿಶ್ವದಲ್ಲೇ, ಶಾಂತಿಯ ಸಮರ ಸಾರುವ ವ್ಯಕ್ತಿ. ಅವರ ಪ್ರತಿಯೊಂದು ಮಾತಿಗೂ, ಅಷ್ಟೇ ಬೆಲೆ ಹಾಗೂ ಗೌರವ ನೀಡುತ್ತದೆ ಎಂದರೆ, ಇದು ಇಡೀ ಭಾರತೀಯರ ಹೆಗ್ಗಳಿಕೆ. ಜನವರಿ 22 ಕೇವಲ ತಾರೀಖಿನ ಸಂಭ್ರಮವಲ್ಲ, ಮುಂದಿನ ಸಾವಿರಾರು ವರ್ಷಗಳು, ಭಾರತದಲ್ಲಿ ಚಿರಸ್ಮರಣೀಯವಾಗಿ, ವಿಶ್ವದ ಭೂಪಟದಲ್ಲಿ ಹಚ್ಚ ಹಸಿರಾಗಿ ಚಿರಕಾಲ ರಂಜಿಸುವ ದಿನ ಭಾರತದಲ್ಲಿ ರಾಮರಾಜ್ಯ ಮರುಕಳಿಸುವ ದಿನ ಭವಿಷ್ಯದಲ್ಲಿ ದೂರವಿಲ್ಲ.

– ಎ.ಎಚ್. ಗೋಪಾಲಕೃಷ್ಣ, ರಾಮಕೃಷ್ಣನಗರ, ಮೈಸೂರು.

■ ಕನ್ನಡ ಬಿಟ್ಟು ಇಂಗ್ಲಿಷ್ ಬಳಸಿದ ಸೆಲ್ಫಿ ಸ್ಪಾಟ್



ಮಾನ್ಯರೆ,

ಸೆಲ್ಫಿ ತಾಣದಲ್ಲಿ ನನ್ನ ಪ್ರೀತಿಯ ಮೈಸೂರು ಎಂದು ಕನ್ನಡದಲ್ಲೂ ಪ್ರದರ್ಶಿಸಬೇಕೆಂದು ಕನ್ನಡ ಹೋರಾಟಗಾರರು ದಸರಾ ವಸ್ತುಪ್ರದರ್ಶನದ ಮುಂದೆ ಫಲಕಕ್ಕೆ ಕಪ್ಪು ಪಟ್ಟಿ ಬಳಿದು ಪ್ರತಿಭಟಿಸಿದ್ದರು.

ಆದರೂ ಮತ್ತೆ ಹೊಸದಾಗಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಇಂಗ್ಲಿಷ್‌ನಲ್ಲಿ ಐ ಲವ್ ಯು ಮೈಸೂರು ಎಂದು ಪ್ರದರ್ಶಿಸುವ ಪ್ರಯತ್ನವನ್ನು ಸರ್ಕಾರಿ ಇಲಾಖೆ ಅಧಿಕಾರಿಗಳು ಮಾಡಿರುವುದು ಖಂಡನೀಯ. ಪ್ರವಾಸಿಗರಿಗಾಗಿ ಇಂಗ್ಲೀಷ್ ಬಳಸುವುದನ್ನು ನಾವು ವಿರೋಧಿಸುವುದಿಲ್ಲ. ಸರ್ಕಾರದ ನೀತಿಯಂತೆ ಯಾವುದೇ ಫಲಕದಲ್ಲೂ ಶೇಕಡ 60ರಷ್ಟು ಕನ್ನಡ ಇದ್ದು ಇಂಗ್ಲೀಷ್ ಬಳಸಬಹುದು.

ಇದೇ ಸ್ಥಳದಲ್ಲಿ ಅತ್ಯಂತ ವಿಶಾಲವಾಗಿ ಪೊಲೀಸ್ ಇಲಾಖೆಯು ಇಂಗ್ಲೀಷ್‌ನಲ್ಲಿ ಮಾತ್ರವೇ ಬರೆದಿರುವುದು ಖಂಡನೀಯ. ಆಡಳಿತ ಭಾಷೆ ಕನ್ನಡ ಆಗಿರುವುದರಿಂದ ಕನ್ನಡ ಬಳಕೆಯ ಬಗ್ಗೆ ಜಾಗೃತಿ ವಹಿಸಬೇಕಾದ್ದು ಸರ್ಕಾರಿ ಅಧಿಕಾರಿಗಳ ಕರ್ತವ್ಯ. ಆದರೆ ಇಲ್ಲಿ ಬೇಲಿಯೇ ಎದ್ದು ಹೊಲ ಮೇಯ್ದಂತೆ ಇಲಾಖೆ ಅಧಿಕಾರಿಗಳೇ ಕನ್ನಡವನ್ನು ಕಾಲ ಕಸದಂತೆ ಕಂಡಿದ್ದಾರೆ.

–ಸ ರ ಸುದರ್ಶನ, ಅರವಿಂದ ಶರ್ಮ, ಕನ್ನಡ ಹೋರಾಟಗಾರರು

■ ಕಣ ನಿರ್ಮಿಸಲು ರೈತರಿಗೆ ಸೋಮಾರಿತನವೇ?

ಮಾನ್ಯರೆ

'ಸರ್ ಕಣ ಮಾಡಕ್ಕೆ ಎಷ್ಟು ಖರ್ಚಾಗ್ತಿತ್ತು. ಇವತ್ತೆಲ್ಲಾ 2–3 ಸಾವಿರ, ಸೋಮಾರಿತನ ಮಾಡ್ಕಂಡು ರೋಡ್‌ನಲ್ಲಿ ರಾಗಿ, ಹುರುಳಿ ಆಕ್ಕಂಡ್ರೆ ಪೊಲೀಸ್ರು ಬೈತಾರೆ. ಅದ್ಕೆ ನಮ್ಮೂರಲ್ಲಿ ಇರುವ ಖಾಸಗಿ ಕಣದಲ್ಲಿ ಗಂಟೆಗೆ 800ರೂ ಟ್ರ್ಯಾಕ್ಟರ್ ಬಾಡಿಗೆ ಕೊಟ್ಟು ಒಕ್ಕಣೆ ಮಾಡುತ್ತಿದ್ದೇನೆ'. ಇದು ಮುರುಡುಗಳ್ಳಿಯ ರೈತ ಸಿದ್ದರಾಜು ಎನ್ನುವವರು ಪತ್ರಿಕೆಯೊಂದರಲ್ಲಿ ಕಣ ಮಾಡದೆ ರಸ್ತೆಯಲ್ಲಿ ಒಕ್ಕಣೆ ಮಾಡುವ ರೈತರನ್ನು ಕುರಿತು ಹೇಳಿರುವ ಮಾತುಗಳು. ಇತ್ತೀಚೆಗೆ ಮತ್ತೊಮ್ಮೆ ರಸ್ತೆಯಲ್ಲಿ ಹಾಕಿದ್ದ ಹುರುಳಿ ಕಣಕ್ಕೆ ಸಿಕ್ಕಿ ಕಾರೊಂದು ಬಿಳಿಗೆರೆ ಸಮೀಪ ಬೆಂಕಿಗಾಹುತಿಯಾದ ಹಿನ್ನೆಲೆಯಲ್ಲಿ ಮತ್ತೆ ಕಾಟಾಚಾರಕ್ಕೆ ಪೊಲೀಸ್ ಇಲಾಖೆ ಮತ್ತು ಜಿಲ್ಲಾಡಳಿತ ಚುರುಕಾದಂತೆ ನಟಿಸುತ್ತಿವೆ.

ಹಲವಾರು ವರ್ಷಗಳಿಂದಲೂ ಈ ಸಮಸ್ಯೆ ಗ್ರಾಮೀಣ ರಸ್ತೆಗಳಲ್ಲಿ ಸವಾಲಾಗಿ ಪರಿಣಮಿಸಿದೆ. ಇಂತಹ ಘಟನೆ ನಡೆದಾಗ ಆ ಪ್ರದೇಶದ ಸುತ್ತಮುತ್ತ ಒಂದೆರಡು ದಿನ ಗಸ್ತು ನಡೆಸಿ ಮತ್ತೆ ಪೊಲೀಸರು ಯಥಾಸ್ಥಿತಿಗೆ ಮರಳುತ್ತಾರೆ. ಇದು ನಡೆದುಕೊಂಡು ಬಂದಿರುವ ಹಾದಿ. ಆದರೆ ಇದರಿಂದ ಅಮಾಯಕರು ಪ್ರಾಣ ತೆರುವಂತಾಗಿದೆ.

ಸುಮಾರು 40 ವರ್ಷದ ಹಿಂದಿನ ಮಾತು. ನಮ್ಮ ಮನೆಯಲ್ಲಿ 2–3 ಗದ್ದೆಗಳಲ್ಲಿ ಭತ್ತ ಒಕ್ಕಣೆ ಮಾಡಲು ಆಯಾಯ ಗದ್ದೆಗಳಲ್ಲೇ ಕಣ ನಿರ್ಮಾಣ ಮಾಡಿ ಅಲ್ಲಿಯೇ ಒಕ್ಕಣೆ ಮಾಡಲಾಗುತ್ತಿತ್ತು. ಹಾಗೆಯೇ ರಾಗಿ, ಜೋಳ, ಹುರುಳಿಯನ್ನು ಒಕ್ಕಣೆ ಮಾಡಲು ನಮ್ಮ ಮನೆಯ ಹಿತ್ತಲಿನಲ್ಲಿಯೇ ಕಣ ಮಾಡಿ ಅದನ್ನು ಗುಂಡು ಹೊಡೆದು ಅಥವಾ, ಎತ್ತು, ಹಸುಗಳನ್ನು ಕಟ್ಟಿ ಗಾಣದ ಮಾದರಿಯಲ್ಲಿ ಸುತ್ತು ಹೊಡೆಸಿ ಒಕ್ಕಣೆ ಮಾಡಲಾಗುತ್ತಿತ್ತು ಹಾಗೂ 2–3 ಮನೆಗಳವರ ಆಡು –ಕುರಿಗಳನ್ನು ತಂದು ಕಣದಲ್ಲಿ ಗಂಟೆ ಗಟ್ಟಲೇ ಸುತ್ತು ಹೊಡೆಸಿ ಹುರುಳಿಯ ಒಕ್ಕಣೆ ಮಾಡಲಾಗುತ್ತಿತ್ತು.

ನಂತರದಲ್ಲಿ ಕಣ ನಿರ್ಮಿಸದ ಸಣ್ಣಪುಟ್ಟ ರೈತರು ಕೂಡ ಬಂದು ನಮ್ಮ ಕಣದಲ್ಲಿಯೇ ಒಕ್ಕಣೆ ಮಾಡಿಕೊಂಡು ಹೋಗುತ್ತಿದ್ದರು. ಇದು ಅಂದಿನ ಹಳ್ಳಿಗಳಲ್ಲಿನ ರೈತರ ಒಕ್ಕಣೆಯ ಹಿನ್ನೋಟವಷ್ಟೆ.

ಇತ್ತೀಚಿನ ವರ್ಷಗಳಲ್ಲಿ ನಾವು ಯಾವುದಾದರು ಊರಿನಲ್ಲಿ ಮದುವೆ, ಸಮಾರಂಭ, ಇನ್ನಿತರ ಕಾರ್ಯಗಳಿಗೆ ಹೋಗುವಾಗ ಹಳ್ಳಿಗಳ ಪ್ರವೇಶಕ್ಕೂ ಮೊದಲು ಸ್ವಾಗತಿಸುವುದೇ ಇಂತಹ ಹಲವಾರು ರಸ್ತೆ ಕಣಗಳು! ರಸ್ತೆಯ ಅಂಗುಲವನ್ನೂ ಬಿಡದೆ ಸುಮಾರು ಒಂದೂವರೆ ಅಡಿಯಷ್ಟು ದಪ್ಪದ ಹುಲ್ಲು, ಸತ್ತೆಯನ್ನು ಹರಡಿರುತ್ತಾರೆ. ಇದು ಕಾದ ವಾಹನ ದ ಸೈಲೆನ್ಸರ್‌ಗೆ ಆಪತ್ತಾಗಿ ಪರಿಣಮಿಸುತ್ತದೆ.

ಇದೇ ಕಾರಣದಿಂದ ನೂರಾರು ಅವಘಡಗಳು ಘಟಿಸಿವೆ. ಆದ್ದರಿಂದ ಇನ್ನು ಮುಂದಾದರು ರೈತರು 2–3 ಜನ ಒಟ್ಟಾಗಿ ಸೇರಿ ತಮ್ಮದೇ ಜಮೀನು, ಹಿತ್ತಲಿನಲ್ಲಿ ಕಣ ನಿರ್ಮಿಸಿ ಒಕ್ಕಣೆ ಮಾಡಿಕೊಳ್ಳುವ ಬಗ್ಗೆ ಚಿಂತಿಸಲಿ. ಹಾಗೆಯೇ ಪೊಲೀಸರು ರಸ್ತೆಯಲ್ಲಿ ಒಕ್ಕಣೆ ಮಾಡುವುದನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಲು ಕ್ರಮ ವಹಿಸಲಿ ಹಾಗೂ ಸರ್ಕಾರ ಆಯಾ ಗ್ರಾಮ ಪಂಚಾಯಿತಿಯ ಪಿಡಿಒಗಳನ್ನು ಜವಾಬ್ದಾರರನ್ನಾಗಿಸಿ ಆಯಾ ಊರಿನಲ್ಲಿ ಒಕ್ಕಣೆ ಮಾಡದಂತೆ ಕ್ರಮ ವಹಿಸಲಿ. ದಂಡ ಹಾಕುವ, ಕ್ರಿಮಿನಲ್ ಪ್ರಕರಣ ದಾಖಲಿಸಲು ಜಿಲ್ಲಾಡಳಿತ ಪಿಡಿಒಗಳಿಗೆ ಅಧಿಕಾರ ನೀಡಲಿ. ಇದಕ್ಕೂ ಮೊದಲು ಗ್ರಾಮಸ್ಥರಿಗೆ ಅರಿವು ಮೂಡಿಸಿ ಮನವೊಲಿಸುವ ಕೆಲಸವೂ ಆಗಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ಭಾರತೀಯ ಷೇರು ಪೇಟೆಗೆ ಹರ್ಷ ತಂದ ವರ್ಷ 2023

ದಲಾಲ್ ಸ್ಟ್ರೀಟ್ ಹೂಡಿಕೆದಾರರಿಗೆ 2023 ಅತ್ಯಂತ ಲಾಭದಾಯಕ ವರ್ಷವಾಗಿ ಮುಕ್ತಾಯಗೊಂಡಿದೆ. ಹೂಡಿಕೆದಾರರ ಸಂಪತ್ತಿನಲ್ಲಿ ರೂ. 81.91 ಲಕ್ಷ ಕೋಟಿಯಷ್ಟು ಭಾರಿ ವೃದ್ಧಿಯಾಗಿದೆ. 2022 ರಲ್ಲಿ ಹೂಡಿಕೆದಾರರ ಸಂಪತ್ತಿನಲ್ಲಿ ರೂ.1 6.38 ಲಕ್ಷ ಕೋಟಿ (ಶೇ.4.44) ವೃದ್ಧಿಯಾಗಿತ್ತು. 2023 ರಲ್ಲಿ ಮೂವತ್ತು ಷೇರುಗಳ ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) 11399.52 (ಶೇ.18.73) ಅಂಕಗಳಷ್ಟು ಜಿಗಿತ ದಾಖಲಿಸಿತ್ತು. ಬಿಎಸ್‌ಇಯಲ್ಲಿ ನೋಂದಾಯಿತ (ಲಿಸ್ಟೆಡ್) ಕಂಪನಿಗಳ ಮಾರುಕಟ್ಟೆ ಬಂಡವಾಳೀಕರಣವು (ಮಾರ್ಕೆಟ್ ಕ್ಯಾಪಿಟಲೈಸೇಷನ್) ರೂ.81.91 ಲಕ್ಷ ಕೋಟಿ ಏರಿಕೆಯಾಗಿ ಹೂಡಿಕೆದಾರರ ಒಟ್ಟು ಸಂಪತ್ತಿನಲ್ಲಿ ರೂ. 36428846.25 ಕೋಟಿಯಷ್ಟು ಏರಿಕೆಯಾಗಿರುವುದು ಇದುವರೆಗಿನ ಸಾರ್ವಕಾಲಿಕ ದಾಖಲೆಯಾಗಿದೆ. ಕಳೆದ ಹತ್ತು ವರ್ಷಗಳಿಂದ ಕೇಂದ್ರದಲ್ಲಿ ಭ್ರಷ್ಟಾಚಾರ, ಹಗರಣ ರಹಿತ, ಪಾರದರ್ಶಕ ಸ್ಥಿರ ಸರ್ಕಾರ, ಬಲಿಷ್ಠವಾಗಿರುವ ದೇಶೀಯ ಸ್ಥೂಲ ಆರ್ಥಿಕ ಮೂಲಭೂತ ಅಂಶಗಳು. ಜಾಗತಿಕ ಆರ್ಥಿಕತೆಯನ್ನು ಹಿಂದಿಕ್ಕಿ ವೇಗದಲ್ಲಿ ಪ್ರಗತಿಯತ್ತ ಸಾಗುತ್ತಿರುವ ದೇಶದ ಆರ್ಥಿಕತೆ, ಭಾರತೀಯ ರಿಸರ್ವ್ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದಲ್ಲಿ ನಿಗದಿಪಡಿಸಿದ ಜಿಡಿಪಿಯ ಬೆಳವಣಿಗೆಯ ದರ ಶೇ.7ನ್ನು ಮೀರಿ ಶೇ.7.3 ಏರಿಕೆಯಾಗಬಹುದೆಂದು ಅಂದಾಜು ಮಾಡಿರುವುದು ವಿದೇಶಿ ವಿನಿಮಯ ಸಂಗ್ರಹವು ದಾಖಲೆ 623.20 ಶತಕೋಟಿ ಡಾಲರ್ ತಲುಪಿರುವುದು. ಉತ್ತೇಜನಕಾರಿ ಕಾರ್ಪೋರೇಟ್ ಗಳಿಕೆ. ದೇಶದ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆಯು ಅಕ್ಟೋಬರ್ ತಿಂಗಳಲ್ಲಿ ಶೇ. 11.7 ರಷ್ಟು ತಲುಪಿರುವುದು. ಅಮೇರಿಕದ ಫೆಡರಲ್ ಬ್ಯಾಂಕ್‌ನ ಬಡ್ಡಿ ದರ ಇಳಿಕೆಯಿಂದಾಗಿ ಬರುತ್ತಿರುವ ಆಶಾದಾಯಕ ಸಂಕೇತಗಳು. ಚೀನಿ ಆರ್ಥಿಕತೆಯಲ್ಲಿ ಉಂಟಾಗಿರುವ ಹಿಂಜರಿತ, ಇತ್ತೀಚಿನ ಚುನಾವಣೆಗಳಲ್ಲಿ ಬಿಜೆಪಿ ಗಳಿಸಿದ ಯಶಸ್ಸಿನಿಂದ ಲೋಕಸಭಾ ಚುನಾವಣೆಯಲ್ಲೂ ಬಿಜೆಪಿ ಮತ್ತೆ ಅಧಿಕಾರಕ್ಕೇರುವ ಮೂಲ ಸ್ಥಿರ ಸರ್ಕಾರ ಹಾಗೂ ಪ್ರಸ್ತುತ ನೀತಿಗಳು ಮುಂದುವರಿಯುವ ಸಾಧ್ಯತೆಗಳು ಷೇರು ಮಾರುಕಟ್ಟೆಯಲ್ಲಿ ವಿಶ್ವಾಸ ಹೆಚ್ಚಿಸಿದೆ. ಭಾರತದ ಸುಸ್ಥಿರ ಆರ್ಥಿಕತೆಯಿಂದ ಆಕರ್ಷಿತಗೊಂಡಿರುವ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಕಳೆದ ವರ್ಷ 1.99 ಲಕ್ಷ ಕೋಟಿ ರೂ. ಮೌಲ್ಯದ ಷೇರು ಖರೀದಿಸಿರುವುದು. ಇದರಿಂದಾಗಿ ಪರಿಣತ ಬ್ರೋಕಿಂಗ್ ಸಂಸ್ಥೆಗಳು ಮುಂದಿನ ಕೆಲವು ತಿಂಗಳುಗಳಲ್ಲಿ ಮುಂಬೈ ಷೇರು ಮಾರುಕಟ್ಟೆ ಸೂಚ್ಯಂಕ ಒಂದು ಲಕ್ಷದ ಗಡಿ ದಾಟಬಹುದೆಂದು ಭವಿಷ್ಯ ನುಡಿದಿದ್ದಾರೆ.

ಭಾರತದ ಷೇರು ಮಾರುಕಟ್ಟೆ ತನ್ನ ಸಾಮರ್ಥ್ಯದ ನಿರ್ವಹಣೆಯಿಂದಾಗಿ ಜಾಗತಿಕ ವಲಯದಲ್ಲಿ ವಿಶ್ವಾಸಾರ್ಹ ಹೂಡಿಕೆ ಮಾರುಕಟ್ಟೆಯ ಸ್ಥಾನ ಪಡೆದಿದೆ. ಭಾರತೀಯ ಉದ್ಯಮಗಳು 2023 ರಲ್ಲಿ ಅಸಾಮಾನ್ಯ ಸಾಧನೆಯನ್ನು ಮಾಡಿದ್ದಾರೆ. ಭಾರತದ ಪ್ರಮುಖ ಷೇರು ವಿನಿಮಯ ಕೇಂದ್ರಗಳಲ್ಲಿನ ಲಿಸ್ಟೆಡ್ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ 4 ಟ್ರಿಲಿಯನ್ ಅಮೇರಿಕನ್ ಡಾಲರ್‌ನ ಗುರಿ ಮುಟ್ಟಿದೆ. ಬಿಎಸ್‌ಇಯಲ್ಲಿ 2021 ಮೇ ತಿಂಗಳಲ್ಲಿ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳೀಕರಣದ ಮೌಲ್ಯ 3 ಟ್ರಿಲಿಯನ್ ಡಾಲರ್ ದಾಖಲಾಗಿತ್ತು. ಮುಂದಿನ ಕೇವಲ ಎರಡೂವರೆ ವರ್ಷಗಳಲ್ಲಿ 4 ಟ್ರಿಲಿಯನ್ ಡಾಲರ್ ದಾಟಿರುವುದು ಭಾರತದ ಆರ್ಥಿಕತೆಯು ಬಲವಾಗಿರುವುದನ್ನು ತೋರಿದೆ. ಈ ರೀತಿಯ ಬೆಳವಣಿಗೆ ಭಾರತದಲ್ಲಿ ಬೃಹತ್ ಉದ್ಯಮಗಳ ಸ್ಥಾಪನೆ ಮತ್ತು ಆರ್ಥಿಕ ನೀತಿಯನ್ನು ರೂಪಿಸಲು ಅವಕಾಶ ನೀಡಲಿದೆ. ಕಳೆದ ವರ್ಷ ಡಿಸೆಂಬರ್ 28 ರಂದು ಬಿಎಸ್‌ಇಯು 72484 ಅಂಕಗಳಷ್ಟು ಜಿಗಿದು ಗರಿಷ್ಠ ದಾಖಲೆ ಸ್ಥಾಪಿಸಿತ್ತು. ಬಿಎಸ್‌ಇ ಸೂಚ್ಯಂಕವು ಕಳೆದ ವರ್ಷ ಎಂಟು ತಿಂಗಳು ಲಾಭ ದಾಖಲಿಸಿದರೆ, ನಾಲ್ಕು ತಿಂಗಳು ಇಳಿಕೆ ಕಂಡಿತ್ತು. ಗಳಿಕೆ ದೃಷ್ಟಿಯಿಂದ ನವೆಂಬರ್, ಡಿಸೆಂಬರ್ ಹೂಡಿಕೆದಾರರಿಗೆ ಅತ್ಯಂತ ಯಶಸ್ವಿ ತಿಂಗಳುಗಳಾಗಿವೆ.

2013ರವರೆಗೆ ಷೇರುಮಾರುಕಟ್ಟೆಯಲ್ಲಿ ಚಿಲ್ಲರೆ ಹೂಡಿಕೆದಾರರು ಅತೀ ಹೆಚ್ಚು ಹೊಡೆತ ನಷ್ಟಕ್ಕೆ ಒಳಗಾಗುತ್ತಿದ್ದರು. ಮಾರುಕಟ್ಟೆಯಲ್ಲಿ ನಿರಂತರವಾಗಿದ್ದ ಅನಿಶ್ಚಿತತೆಯಿಂದ ಸದಾ ಆತಂಕದಲ್ಲಿರುತ್ತಿದ್ದರು. ದುರ್ಬಲ ಸರಕಾರ, ಕುಂಠಿತಗೊಂಡ ಆರ್ಥಿಕ ಬೆಳವಣಿಗೆ ಹಗರಣಗಳು, ಷೇರು ಮಾರುಕಟ್ಟೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿದ್ದವು. ಬ್ರೋಕರ್‌ಗಳ ಆಟದಿಂದ ಕೆಲವೊಂದು ಷೇರುಗಳ ಅಸಹಜ ಏರಿಳಿತಗಳಿಂದಾಗಿ ಚಿಲ್ಲರೆ ಹೂಡಿಕೆದಾರರು ನಿರಂತರವಾಗಿ ನಷ್ಟಕ್ಕೊಳಗಾಗುತ್ತಿದ್ದರು. ಈ ಕಾರಣದಿಂದ ದೇಶದಲ್ಲಿ 2013 ಮಾರ್ಚ್‌ನಲ್ಲಿ ಷೇರು ವ್ಯವಹಾರ ನಡೆಸಲು ಅಗತ್ಯವಿದ್ದ ಡಿಮ್ಯಾಟ್ ಖಾತೆಗಳ ಸಂಖ್ಯೆ ಕೇವಲ 2.1 ಕೋಟಿ ಇತ್ತು. 2014 ರಲ್ಲಿ ಮೋದಿ ಸರಕಾರ ಅಧಿಕಾರಕ್ಕೆ ಬರುವುದರೊಂದಿಗೆ ದೇಶದ ಆರ್ಥಿಕ ಕ್ಷೇತ್ರದಲ್ಲಿ ಸಮಗ್ರ ಬದಲಾವಣೆಯ ಗಾಳಿ ಬೀಸತೊಡಗಿತು. ಸರಕಾರದ ಹರಣ ಮುಕ್ತ ಅಭಿವೃದ್ಧಿ ಕೇಂದ್ರಿತ ನೀತಿಯಿಂದ ಆರ್ಥಿಕತೆಗೆ ಸಂಬಂಧಿತ ಎಲ್ಲಾ ವಲಯಗಳಲ್ಲಿ ಧನಾತ್ಮಕ



ಬದಲಾವಣೆ ಪರ್ವ ಆರಂಭವಾಯಿತು. ಸಾರ್ವಜನಿಕ ಬ್ಯಾಂಕುಗಳು ನಷ್ಟದಿಂದ ಲಾಭ ಗಳಿಸಲಾರಂಭಿಸಿದವು. ಮೂಲಸೌಕರ್ಯಗಳಲ್ಲಿ ಭಾರೀ ಪ್ರಮಾಣದಲ್ಲಿ ವೃದ್ಧಿಯಾದವು. ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಿಗೆ ಭಾರಿ ಉತ್ತೇಜನ, ಪ್ರೋತ್ಸಾಹ ನೀಡಲಾಯಿತು. ಇದರಿಂದ ಹೆಚ್‌ಎಎಲ್, ಬಿಇಎಲ್, ಬಿಹೆಚ್‌ಇಎಲ್, ಬಿಇಎಂಎಲ್, ಎನ್‌ಎಂಡಿಸಿ, ಐಡಿಸಿ ಮೊದಲಾದ ಸಾರ್ವಜನಿಕ ವಲಯದ ಕಂಪನಿಗಳ ವ್ಯವಹಾರದಲ್ಲಿ ಭಾರಿ ಏರಿಕೆ ಆರಂಭವಾಯಿತು. 2013ರವರೆಗೆ ಈ ಕ್ಷೇತ್ರದ ಷೇರುಗಳ ಖರೀದಿಗೆ ನಿರುತ್ಸಾಹ ತೋರುತ್ತಿದ್ದ ಹೂಡಿಕೆದಾರರು ಪ್ರಸ್ತುತ ಇವುಗಳ ಷೇರುಗಳನ್ನು ಭಾರಿ ಪ್ರಮಾಣದಲ್ಲಿ ಖರೀದಿಸುತ್ತಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ಉಂಟಾಗಿರುವ ಧನಾತ್ಮಕ ಪರಿಣಾಮಗಳಿಂದ ಭಾರಿ ಸಂಖ್ಯೆಯಲ್ಲಿ ಚಿಲ್ಲರೆ ಹೂಡಿಕೆದಾರರು ಷೇರು ಮಾರುಕಟ್ಟೆ ಪ್ರವೇಶಿಸುತ್ತಿದ್ದಾರೆ. 2023 ಅಗಸ್ಟ್ ಅಂತ್ಯಕ್ಕೆ ಡಿಮ್ಯಾಟ್ ಖಾತೆದಾರರ ಸಂಖ್ಯೆ 12.7 ಕೋಟಿಗೆ ತಲುಪಿದೆ. ಕೇವಲ 2023 ರಲ್ಲೇ 31 ಮಿಲಿಯನ್ ಹೊಸ ಡಿಮ್ಯಾಟ್ ಖಾತೆಗಳು ತೆರೆಯಲ್ಪಟ್ಟಿರುವುದು ಒಂದು ದಾಖಲೆಯಾಗಿದೆ.

ದೇಶದಲ್ಲಿ ಷೇರು ವ್ಯವಹಾರ ನಡೆಸಲು ಎರಡು ಪ್ರಾಥಮಿಕ ಸ್ಟಾಕ್ ಮಾರುಕಟ್ಟೆಗಳಿವೆ. ಈ ಎರಡರಲ್ಲೇ ಹೆಚ್ಚಿನ ವಹಿವಾಟು ನಡೆಯುತ್ತವೆ. ಇವುಗಳೆಂದರೆ **ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್ (ಬಿಎಸ್‌ಇ) ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ (ಎನ್‌ಎಸ್‌ಇ).**

ಬಿಎಸ್‌ಇ 1875 ರಿಂದ ಅಸ್ತಿತ್ವದಲ್ಲಿರುವ ಭಾರತ ಮಾತ್ರವಲ್ಲ ವಿಶ್ವದ ಅತ್ಯಂತ ಹಳೆಯ ಹಾಗೂ ಪ್ರತಿಷ್ಠಿತ ಕೆಲವೇ ಷೇರು ಮಾರುಕಟ್ಟೆಗಳಲ್ಲಿ ಒಂದೆನಿಸಿದೆ. ಇದು ಮುಂಬೈನ ದಲಾಲ್ ಸ್ಟ್ರೀಟ್‌ನಲ್ಲಿದೆ. ಹತ್ತಿ ವ್ಯಾಪಾರಿ ಪ್ರೇಮ್‌ಚಂದ್ ರಾಯ್ ಚಂದ್ ಎಂಬುವರು 1875 ರಲ್ಲಿ ಇದನ್ನು ಆರಂಭಿಸಿದರು. ಇದು ಏಷ್ಯಾದ ಅತ್ಯಂತ ಹಳೆಯ ಮತ್ತು ವಿಶ್ವದ ಹತ್ತನೇ ಹಳೆಯ ಷೇರು ಮಾರುಕಟ್ಟೆಯಾಗಿದೆ. 1850 ರ ದಶಕದಲ್ಲಿ ಇದು ಸ್ಟಾಕ್ ಬ್ರೋಕರ್‌ಗಳು ಮುಂಬೈ ಟೌನ್‌ಹಾಲ್‌ನ ಬಳಿಯ ಆಲದ ಮರದ ಕೆಳಗೆ ಸಭೆಸೇರಿ ಆರಂಭಿಸಿದರು. 2024 ರಂದು ಬಿಎಸ್‌ಇ ಮಾರುಕಟ್ಟೆ ಬಂಡವಾಳೀಕರಣವು 4.7 ಟ್ರಿಲಿಯನ್ ಡಾಲರ್ ಆಗುವುದರೊಂದಿಗೆ ಜಗತ್ತಿನ ಅತೀ ದೊಡ್ಡ ಷೇರು ವಿನಿಮಯ ಕೇಂದ್ರಗಳಲ್ಲಿ ಒಂದೆನಿಸಿದೆ. ಜೂನ್ 2023ರ ಹೊತ್ತಿಗೆ ಬಿಎಸ್‌ಇ 5657 ಪಟ್ಟಿ (ಲಿಸ್ಟೆಡ್) ಮಾಡಿದ ಕಂಪನಿಗಳನ್ನು ಹೊಂದಿತ್ತು. 1995 ರಲ್ಲಿ ಬಿಎಸ್‌ಇಯೂ ಎಲೆಕ್ಟ್ರಾನಿಕ್ ಟ್ರೇಡಿಂಗ್ ವ್ಯವಸ್ಥೆಗೆ ಬದಲಾಯಿಸಿಕೊಂಡಿತು.

ಎನ್‌ಎಸ್‌ಇಯನ್ನು 1992 ರಲ್ಲಿ ಸ್ಥಾಪಿಸಲಾಯಿತು. ಹಾಗೂ 1994 ರಲ್ಲಿ ತನ್ನ ವಹಿವಾಟನ್ನು ಆರಂಭಿಸಿತು. ಎರಡೂ ವಿನಿಮಯ ಕೇಂದ್ರಗಳು ಒಂದೇ ಮಾದರಿಯ ಕಾರ್ಯ ವಿಧಾನ ಅನುಸರಿಸುತ್ತವೆ. ಎನ್‌ಎಸ್‌ಇಯು 2023 ಮಾರ್ಚ್ 31 ರಂದು 2137 ಪಟ್ಟಿ ಮಾಡಿದ ಸಂಸ್ಥೆಗಳನ್ನು ಹೊಂದಿತ್ತು. ಎರಡೂ ಕೇಂದ್ರಗಳೂ ಒಂದೇ ರೀತಿಯ ವ್ಯವಹಾರ ನಡೆಸುತ್ತಿರುವುದರಿಂದ ಪರಸ್ಪರ ಆರೋಗ್ಯಕರ ಸ್ಪರ್ಧಾತ್ಮಕ ನೆಲೆಯಲ್ಲಿ ವ್ಯವಹಾರ ನಡೆಸುತ್ತಿವೆ.

ಸ್ಟಾಕ್ ಮಾರುಕಟ್ಟೆಯ ಅಭಿವೃದ್ಧಿ ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಹೊಣೆಯನ್ನು ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಎಸ್‌ಇಬಿಐ) ನೀಡಲಾಗಿದೆ. ಇದನ್ನು 1992 ರಲ್ಲಿ ಸ್ವತಂತ್ರ ಪ್ರಾಧಿಕಾರವಾಗಿ ರಚಿಸಲಾಗಿದೆ. ಈ ಪ್ರಾಧಿಕಾರವು ಷೇರು ಪೇಟೆಯನ್ನು ಹಗರಣ ಮುಕ್ತವಾಗಿ ನಡೆಯಲು ಹದ್ದಿನ ಕಣ್ಣಿನಂತೆ ಕಾರ್ಯ ನಿರ್ವಹಿಸುತ್ತಿದೆ. ಯಾವುದೇ ಕಂಪನಿಯ ಷೇರುಗಳಲ್ಲಿ ಅಸಹಜ ಏರಿಳಿತ ಕಂಡು ಬಂದಲ್ಲಿ ಯಾವುದೇ ಕಂಪನಿಯ ನಿಯಮಗಳನ್ನು ಉಲ್ಲಂಘಿಸಿ ವ್ಯವಹರಿಸುವುದು ಕಂಡು ಬಂದರೆ ಅಂತಹ ಕಂಪನಿಗಳಿಗೆ ದಂಡ ವಿಧಿಸುವ, ಷೇರುಗಳನ್ನು ಡಿ–ಲಿಸ್ಟ್ ಮಾಡುವಂತಹ ವ್ಯಾಪಕ ಅಧಿಕಾರಗಳನ್ನು ಹೊಂದಿದೆ. ದೇಶೀಯ ಷೇರು ಪೇಟೆಯಲ್ಲಿ ಮೂರು ವಿಭಾಗಗಳಲ್ಲಿ ಷೇರುಗಳನ್ನು ವರ್ಗೀಕರಿಸಲಾಗಿದೆ. ಅವುಗಳನ್ನು ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಷೇರುಗಳೆಂದು ಕರೆಯುತ್ತಾರೆ.

> **“** 2023 ಭಾರತೀಯ ಷೇರು ಮಾರುಕಟ್ಟೆಗೆ ಹರ್ಷದ ವರ್ಷವಾಗಿದೆ. ಈ ವರ್ಷ ನಿಫ್ಟಿ (ನಿಫ್ಟಿ-50) ಸೂಚ್ಯಂಕ ಶೇ.20 ಏರಿಕೆ ದಾಖಲಿಸಿದರೆ, ಮಿಡ್ ಕ್ಯಾಪ್ ಸೂಚ್ಯಂಕ ಶೇ.44 ಮತ್ತು ಸ್ಮಾಲ್ ಕ್ಯಾಪ್ 100ರ ಸೂಚ್ಯಂಕ ಶೇ.56 ರಷ್ಟು ಏರಿಕೆ ದಾಖಲಿಸಿದೆ. ಹೀಗಿದ್ದರೂ ಮುಂದಿನ ನಾಲ್ಕೈದು ವರ್ಷಗಳ ಕಾಲ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಷೇರುಗಳು ಉತ್ತಮ ಪ್ರದರ್ಶನ ನೀಡಲಿವೆ ಎಂಬುದು ಪರಿಣತರ ಅಭಿಪ್ರಾಯವಾಗಿದೆ.

ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಷೇರುಗಳು: ಮಾರುಕಟ್ಟೆ ಬಂಡವಾಳೀಕರಣದ ಗಾತ್ರವು 20 ಸಾವಿರ ಕೋಟಿ ದಾಟಿರುವ ಮೊದಲ ಒಂದು ನೂರು ಕಂಪನಿಗಳು ಲಾರ್ಜ್ ಕ್ಯಾಪ್ ವರ್ಗದಲ್ಲಿರುತ್ತವೆ. ಮಾ.ಬಂ.ವು ರೂ. 5 ಸಾವಿರದಿಂದ 20 ಸಾವಿರ ಕೋಟಿ ಇರುವ ಒಂದುನೂರ ಒಂದರಿಂದ 250 ಸ್ಥಾನದಲ್ಲಿರುವ ಕಂಪನಿಗಳನ್ನು ಮಿಡ್ ಕ್ಯಾಪ್ ಕಂಪನಿಗಳೆನ್ನಲಾಗುತ್ತದೆ. 5 ಸಾವಿರ ಕೋಟಿ ರೂ. ಒಳಗೆ ಮಾರುಕಟ್ಟೆ ಬಂಡವಾಳವಿರುವ 251ರ ನಂತರದ ಕಂಪನಿಗಳು ಸ್ಮಾಲ್ ಕ್ಯಾಪ್ ವರ್ಗದಲ್ಲಿರುತ್ತವೆ. ಇನ್ನುಳಿದಂತೆ ಬ್ಲೂಚಿಪ್, ಪೆನ್ನಿ ಸ್ಟಾಕ್‌ಗಳು ಮಾರುಕಟ್ಟೆಯಲ್ಲಿ ವ್ಯವಹಾರ ನಡೆಸುತ್ತಿವೆ.

2023 ಭಾರತೀಯ ಷೇರು ಮಾರುಕಟ್ಟೆಗೆ ಹರ್ಷದ ವರ್ಷವಾಗಿದೆ. ಈ ವರ್ಷ ನಿಫ್ಟಿ (ನಿಫ್ಟಿ–50) ಸೂಚ್ಯಂಕ ಶೇ.20 ಏರಿಕೆ ದಾಖಲಿಸಿದರೆ, ಮಿಡ್ ಕ್ಯಾಪ್ ಸೂಚ್ಯಂಕ ಶೇ.44 ಮತ್ತು ಸ್ಮಾಲ್ ಕ್ಯಾಪ್ 100ರ ಸೂಚ್ಯಂಕ ಶೇ.56 ರಷ್ಟು ಏರಿಕೆ ದಾಖಲಿಸಿದೆ. ಹೀಗಿದ್ದರೂ ಮುಂದಿನ ನಾಲ್ಕೈದು ವರ್ಷಗಳ ಕಾಲ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಷೇರುಗಳು ಉತ್ತಮ ಪ್ರದರ್ಶನ ನೀಡಲಿವೆ ಎಂಬುದು ಪರಿಣತರ ಅಭಿಪ್ರಾಯವಾಗಿದೆ.

ಷೇರುಪೇಟೆ ಕುರಿತಾದ ನಂಬಿಕೆಗಳು, ಭ್ರಮೆಗಳು:

ಸಾಮಾನ್ಯವಾಗಿ ಹೊಸದಾಗಿ ಷೇರು ಮಾರುಕಟ್ಟೆ ಪ್ರವೇಶಿಸುವ ಚಿಲ್ಲರೆ ಹೂಡಿಕೆದಾರರು ಷೇರುಗಳ ಮೌಲ್ಯವು ದಿನದಿಂದ ದಿನಕ್ಕೆ ಏರಿಕೆಯಾಗುವುದೆಂಬ ನಂಬಿಕೆಯಿಂದ ಅಧ್ಯಯನ ನಡೆಸದೇ ಅನುಭವಸಕ್ತರಿಂದ ಸಲಹೆ ಪಡೆಯದೇ ಷೇರು ಖರೀದಿಸಿ ನಂತರ ಭ್ರಮನಿರಶನಗೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಷೇರು ಪೇಟೆ ಬಗ್ಗೆ ಕೆಲವು ಪ್ರತೀತಿಗಳಿವೆ. ಕೆಲವರು ಷೇರು ಪೇಟೆಯಲ್ಲಿ ಹೂಡಿಕೆ ಮಾಡುವುದನ್ನು ಕುದುರೆ ಸವಾರಿಗೆ ಹೋಲಿಸುತ್ತಾರೆ. ಪರಿಣತ ಕುದುರೆ ಸವಾರನೊಬ್ಬ ತಾನಿನ್ನು ಕೆಲವೇ ನಿಮಿಷದಲ್ಲಿ ಗುರಿ ತಲುಪಲಿದ್ದೇನೆ ಎಂದು ಭಾವಿಸುತ್ತಿರುವಾಗಲೇ ಅನಿರೀಕ್ಷಿತವಾಗಿ ಕುದುರೆ ಈತನನ್ನು ಕೆಡವಿ ಓಡಿದಂತೆ. ಹೂಡಿಕೆದಾರ ತಾನು ಮಾರಬೇಕಾದ ಬೆಲೆ ಬರಲಿದೆ ಎಂದು ಭಾವಿಸುತ್ತಿರುವಾಗಲೇ ಆ ಸ್ಟಾಕ್ ಬೆಲೆ ಇದ್ದಕ್ಕಿದ್ದಂತೆ ಕುಸಿದು ನಿರಾಶೆಯ ಕೂಪಕ್ಕೆ ತಳ್ಳುತ್ತದೆ. ಇನ್ನೂ ಕೆಲವಾರು ಷೇರು ಮಾರುಕಟ್ಟೆಯು ಹೂಡಿಕೆದಾರರಲ್ಲಿ ಭಾರಿ ಲಾಭದ ಭರವಸೆಯನ್ನು ಸೃಷ್ಟಿಸಿ ಭ್ರಮನಿರಸನಗೊಳಿಸುವ ಹಾವು–ಏಣಿಯ ಆಟದಂತಿದೆ ಎನ್ನುತ್ತಾರೆ. ಇದೇ ರೀತಿ ಷೇರು ಪೇಟೆಯು ಹೂಡಿಕೆದಾರರಲ್ಲಿ ಭಾರಿ ಲಾಭದ ಆಸೆಯ ಬೀಜ ಬಿತ್ತಿ ನಷ್ಟದಲ್ಲಿ ಸಮಾಧಾನಪಡಿಸುವ ಮಾಯಾನಗರಿ ಎನ್ನುತ್ತಾರೆ. ವಾಸ್ತವದಲ್ಲಿ ಅರಿಯದೆ ಮಾಡಿದ ಹೂಡಿಕೆಗಳು ಈ ರೀತಿ ನಷ್ಟದಲ್ಲಿ ಪರ್ಯಾವಸಾನವಾಗುವುದು.

ಷೇರು ಪೇಟೆಯಲ್ಲಿನ ಯಶಸ್ಸಿನ ಸೂತ್ರಗಳು

ಭಾರತೀಯ ಷೇರುಪೇಟೆಯಲ್ಲಿ ಭಾರಿ ಸಂಪತ್ತು ಗಳಿಸಿದವರು ದಿ. ರಾಕೇಶ್ ಜುಂಜನ್‌ವಾಲಾ. ಇವರು ಭಾರತದ ಓರ್ವ ಯಶಸ್ವಿ ಬಿಲಿಯನೇರ್ ಹೂಡಿಕೆದಾರ. ಲೆಕ್ಕ ಪರಿಶೋಧಕ. ಇವರನ್ನು ಭಾರತದ ಷೇರು ಮಾರುಕಟ್ಟೆಯ ಷೇರು ಗೂಳಿ (ಬಿಗ್ ಬುಲ್) ಎನ್ನುತ್ತಿದ್ದರು. 1985 ರಲ್ಲಿ ಕೇವಲ 5000 ಬಂಡವಾಳದೊಂದಿಗೆ ಹೂಡಿಕೆ ಆರಂಭಿಸಿದ ಇವರ ಸಂಪತ್ತು 2022ರಲ್ಲಿ, ನಿಧನದ ವೇಳೆಗೆ 5.8 ಶತಕೋಟಿ ಡಾಲರ್ ನಿವ್ವಳ ಮೌಲ್ಯ ಹೊಂದಿತ್ತು. ನಿಧನದ ಸಮಯ ಇವರು ಜಗತ್ತಿನ 438ನೇ ಶ್ರೀಮಂತ ವ್ಯಕ್ತಿಯಾಗಿದ್ದರು. ಇವರ ಯಶಸ್ಸಿನ ಯೋಜನೆಗಳು ಷೇರು ಪೇಟೆಯಲ್ಲಿ ಪ್ರವಾಹದ ವಿರುದ್ಧ ಈಜಿರಿ ಎಲ್ಲರೂ ಮಾರಾಟ ಮಾಡುವಾಗ ಖರೀದಿಸಿ ಹಾಗೂ ವೈಸ್‌ವರ್ಸಾ. ಆತುರದಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳದಿರಿ. ಅದು ಭಾರಿ ನಷ್ಟಕ್ಕೆ ಕಾರಣವಾಗುವುದು. ಪ್ರತಿ ಸ್ಟಾಕ್ ಮೇಲೆ ಹೂಡಿಕೆ ಮೊದಲು ಸುದೀರ್ಘ ಸಮಯ ತೆಗೆದುಕೊಳ್ಳಿ, ನಷ್ಟಕ್ಕೆ ಸಿದ್ಧರಾಗಿರಿ. ಇದು ಷೇರುಪೇಟೆಯ ಅನಿವಾರ್ಯ ಭಾಗವಾಗಿದೆ. ಭಾವನಾತ್ಮಕ ಹೂಡಿಕೆ ನಷ್ಟಕ್ಕೆ ಕಾರಣವಾಗುವುದು. ಭಾರಿ ಪ್ರಚಾರದಲ್ಲಿರುವ ಕಂಪನಿಗಳನ್ನು ಆಯ್ಕೆ ಮಾಡದಿರಿ. ಷೇರು ಪೇಟೆ ಯಾವತ್ತೂ ಸರಿಯಾಗಿರುತ್ತದೆ. ಅದಕ್ಕೆ ಸಮಯ ನಿಗದಿಪಡಿಸದಿರಿ. ಷೇರು ಮಾರುಕಟ್ಟೆಗೆ ಮಾರ್ಗದರ್ಶನ ಅಥವಾ ಆಜ್ಞಾಪಿಸದಿರಿ. ಇವುಗಳು ದಿ. ರಾಖೇಶ್ ಜುಂಜನ್‌ವಾಲಾರವರು ಕಂಡ ಯಶಸ್ಸಿನ ಸೂತ್ರಗಳಾಗಿದ್ದವು ಎನ್ನಲಾಗುತ್ತಿದೆ.

ಭಾರತೀಯ ಸಂಗೀತ ಪರಂಪರೆಯಲ್ಲಿ ಗುರುಗಳ ಮಾರ್ಗದರ್ಶನವೇ ಮಹತ್ವದ್ದು

ಹಿನ್ನೆಲೆ ಗಾಯಕಿ ಎಂ.ಡಿ.ಪಲ್ಲವಿ



ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಎಂ.ಡಿ.ಪಲ್ಲವಿ ಮಾತನಾಡಿದರು.

ಮೈಸೂರು, ಫೆ.7(ಪಿಎಂ)– ಭಾರತೀಯ ಸಂಗೀತ ಪರಂಪರೆಯಲ್ಲಿ ಗುರುಗಳ ಮಾರ್ಗದರ್ಶನವೇ ಮಹತ್ವ ಪಡೆದಿದ್ದು, ಇಲ್ಲಿ ಆಯಾಯ ಸಂಗೀತ ಪ್ರಕಾರಗಳಿಗೆ ನಿರ್ದಿಷ್ಟ ಪಠ್ಯಪುಸ್ತಕ ಇರುವುದಿಲ್ಲ ಎಂದು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕಿ, ಸಂಗೀತ ನಿರ್ದೇಶಕಿ ಎಂ.ಡಿ.ಪಲ್ಲವಿ ಹೇಳಿದರು.

ಮೈಸೂರಿನ ರಂಗಾಯಣದ ಬಿ.ವಿ. ಕಾರಂತ ರಂಗ ಚಾವಡಿಯಲ್ಲಿ ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಅಧ್ಯಯನ ಪೀಠ, ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಸಂಯುಕ್ತಾಶ್ರಯದಲ್ಲಿ ಫೆ.9ರವರೆಗೆ ಹಮ್ಮಿಕೊಂಡಿರುವ 'ರಂಗಸಂಯುಕ್ತ–ರಂಗಭೂಮಿ, ಅದರ ಪೂರಕ ಕಲೆಗಳು' ಕುರಿತ ಉಪನ್ಯಾಸ ಮಾಲಿಕೆಯಲ್ಲಿ ಬುಧವಾರ 'ಸಂಗೀತ' ಕುರಿತು ಮಾತನಾಡಿದರು.

ಭಾರತೀಯ ಸಂಗೀತ ಪರಂಪರೆಯಲ್ಲಿ ಗುರುಗಳು ಹೇಳಿಕೊಟ್ಟಿದ್ದೇ ಶಿಷ್ಯರಿಗೆ ವೇದ ವಾಕ್ಯ. ಕರ್ನಾಟಕ ಶಾಸ್ತ್ರೀಯ ಸಂಗೀತದ ಸಂಯೋಜನೆ ಸ್ಥಿರ ಮತ್ತು ಸಂಕೀರ್ಣತೆಯಿಂದ ಕೂಡಿರುತ್ತದೆ. ಹಾಗಾಗಿ ಯಾರೇ ಗಾಯಕರು ಈ ಪ್ರಕಾರದಲ್ಲಿ ಹಾಡಿದರೆ ಒಂದೇ ರೀತಿಯಲ್ಲಿ ಗಾಯನ ಪ್ರಸ್ತುತ ಪಡಿಸುತ್ತಾರೆ. ಸ್ವರ, ಅಕ್ಷರ ಮತ್ತು ತಾಳ ಇಲ್ಲಿ ಸ್ಥಿರವಾಗಿರುತ್ತವೆ. ತಾಳ ಬಿಟ್ಟು ಹಾಡಬಹುದು. ಆದರೆ ಸಂಯೋಜನೆ ಇರುವಂತೆಯೇ ಹಾಡಬೇಕು. ಆದರೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಈ ರೀತಿಯಲ್ಲಿ ಇರುವುದಿಲ್ಲ ಎಂದು ಸಭಿಕರ ಪ್ರಶ್ನೆಗಳಿಗೆ ಉತ್ತರಿಸಿದರು.

ಸಂಯೋಜನೆ ಬಿಟ್ಟು ಹಾಡಿದರೆ ಅದು ಕರ್ನಾಟಕ ಶಾಸ್ತ್ರೀಯ ಸಂಗೀತ ವ್ಯಾಪ್ತಿಯನ್ನು ಮೀರಿದಂತಾಗುತ್ತದೆ. ಆಗ ಅದನ್ನು ಒಂದು ಪ್ರಯೋಗಾಶೀಲತೆ ಪರಿಧಿಯಲ್ಲಿ ಗುರುತಿಸಬಹುದೇ ಹೊರತು ಅದು ನಿಖರವಾದ ಕರ್ನಾಟಕ ಶಾಸ್ತ್ರೀಯ ಸಂಗೀತ ಎಂದು ಪರಿಗಣಿತವಾಗದು. ಇದು ಈ ಶಾಸ್ತ್ರೀಯ ಸಂಗೀತದಲ್ಲಿರುವ ಒಂದು ಪದ್ಧತಿಯಾಗಿದೆ ಎಂದು ತಿಳಿಸಿದರು.

ಸಂಗೀತಶಾಸ್ತ್ರಜ್ಞ ಭಾತ್ಖಂಡೆ ಅವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಕಾಲದ ರಚನೆ ನೀಡಿದ್ದು, ಅದರ ಪ್ರಕಾರ ರಾಗಗಳನ್ನು ಬೆಳಗ್ಗೆ, ಮಧ್ಯಾಹ್ನ ಮತ್ತು ಸಂಜೆ ವೇಳೆಗೆಂದು ವಿಂಗಡಿಸಲಾಗಿದೆ. ಅವುಗಳನ್ನು ಆಯಾಯ ಕಾಲದಲ್ಲೇ ಹಾಡಬೇಕೆಂಬ ನಿಯಮವಿದೆ. ಈ ಸೂತ್ರವನ್ನು ಕೆಲವರು ಒಪ್ಪಿದರೆ, ಇನ್ನು ಹಲವರು ಒಪ್ಪುವುದಿಲ್ಲ ಎಂದು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ಫ್ಯೂಷನ್ ಸಂಗೀತವನ್ನು ಸಾಮಾನ್ಯವಾಗಿ ಅಪರೂಪದ ಸಂದರ್ಭದಲ್ಲಿ ಸಾದರ ಪಡಿಸಲಾಗುತ್ತದೆ. ಜೊತೆಗೆ ಈ ಪರಿಕಲ್ಪನೆಯ ವ್ಯಾಖ್ಯಾನದಲ್ಲಿ ಇಂದಿಗೂ ಗೊಂದಲವಿದ್ದು, ಸದ್ಯ ಅದಿನ್ನೂ ನಿವಾರಣೆಯಾಗಿಲ್ಲ. ಆಧುನಿಕ ಮತ್ತು ಸಾಂಪ್ರದಾಯಿಕ ಸಂಗೀತ ಪ್ರಕಾರಗಳ ಮಿಶ್ರಣದಲ್ಲಿ ಪ್ರಸ್ತುತ ಪಡಿಸುವುದು ಇದರ ವಿಶೇಷ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ತಾಳ, ರಾಗ ಸೇರಿದಂತೆ ಒಟ್ಟಾರೆ ಸಂಗೀತ ನಮಗೆ ನಿಲುಕಬೇಕಾದರೆ ನಮ್ಮ ಬುದ್ಧಿಮತ್ತೆ ಅಧಿಕವಾಗಿರಬೇಕೇ? ಎಂಬ ಪ್ರಶ್ನೆಗೆ ಉತ್ತರಿಸಿ, ಹಾಗೆ ಬುದ್ಧಿಮತ್ತೆಯಲ್ಲಿ ಅದನ್ನು ಅಳೆಯಲು ಬರುವುದಿಲ್ಲ. ಇಲ್ಲಿ ಕಲಿಯುವ ಬದ್ಧತೆ ಮುಖ್ಯವಾಗುತ್ತದೆ ಎಂದರು.

ಇಂದು 'ಮತ್ತೊಮ್ಮೆ ಮೋದಿ' ಅಭಿಯಾನಕ್ಕೆ ಚಾಲನೆ

ಮೈಸೂರು,ಫೆ.7(ಪಿಎಂ)– ಮೈಸೂರು ನಗರ ಬಿಜೆಪಿ ವತಿಯಿಂದ ಹಮ್ಮಿಕೊಂಡಿರುವ 'ಮತ್ತೊಮ್ಮೆ ಮೋದಿ' ಅಭಿಯಾನಕ್ಕೆ ಫೆ.8ರಂದು ಬೆಳಗ್ಗೆ 8.30ಕ್ಕೆ ಮೈಸೂರಿನ ವಿವಿ ಮೊಹಲ್ಲಾದ ಕಾಳಿದಾಸ ಮುಖ್ಯ ರಸ್ತೆಯ ಶ್ರೀ ರಾಮಮಂದಿರದ ಎದುರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಚಾಲನೆ ನೀಡಲಿದ್ದಾರೆ.

ಶಾಸಕ ಶ್ರೀವತ್ಸ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಓಬಿಸಿ ರಾಜ್ಯ ಅಧ್ಯಕ್ಷ ರಘು ಕೌಟಿಲ್ಯ, ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಅನಿಲ್ ಥಾಮಸ್, ಮಾಜಿ ಶಾಸಕರೂ ಆದ ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ, ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಸೋಮಶೇಖರ್, ರಾಜು ಸೇರಿದಂತೆ ಪಕ್ಷದ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಬೀಮ್‌ಸ್ಟೆಕ್ ಅಕ್ವಾಟಿಕ್ ಚಾಂಪಿಯನ್ ಶಿಪ್‌ನಲ್ಲಿ ಮೈಸೂರಿನ ತಾನ್ಯಗೆ 2 ಚಿನ್ನದ ಪದಕ



ಮೈಸೂರು, ಫೆ.7(ಎಸ್‌ಪಿಎನ್)– ನವದೆಹಲಿಯ ಎಸ್.ಪಿ ಮುಖರ್ಜಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಅಂತರರಾಷ್ಟ್ರೀಯ ಬೀಮ್‌ಸ್ಟೆಕ್ (BIMSTEC- The Bay of Bengal initiative for Multi-Sectoral Technical and Economic Co-Operation) ಅಕ್ವಾಟಿಕ್ ಚಾಂಪಿಯನ್ ಶಿಪ್‌ನಲ್ಲಿ (ಈಜು ಸ್ಪರ್ಧೆ) ಭಾಗವಹಿಸಿದ್ದ ಮೈಸೂರು ಶಾರದಾ ಪಬ್ಲಿಕ್ ಶಾಲಾ ವಿದ್ಯಾರ್ಥಿನಿ ಹಾಗೂ ಈಜುಪಟು ಎಸ್.ತಾನ್ಯ 200 ಮೀಟರ್ ಬ್ರೆಸ್ಟ್ ಸ್ಟ್ರೋಕ್ ಮತ್ತು 200 ಮೀಟರ್ ವೈಯಕ್ತಿಕ ಮೆಡ್ಲೆಯಲ್ಲಿ 2 ಚಿನ್ನದ ಪದಕಗಳನ್ನು ಗೆಲ್ಲುವ ಮೂಲಕ ಮೈಸೂರಿಗೆ ಕೀರ್ತಿ ತಂದಿದ್ದಾರೆ.

ಇತ್ತೀಚೆಗೆ ಚೆನ್ನೈನಲ್ಲಿ ನಡೆದ ಖೇಲೋ ಇಂಡಿಯಾ ಯೂತ್ ಗೇಮ್ಸ್ 2023 ರ ಪ್ರದರ್ಶನದ ನಂತರ, ಈಜು ಫೆಡರೇಶನ್ ಆಫ್ ಇಂಡಿಯಾ 2024 ರ ವತಿಯಿಂದ ಫೆ7ರಿಂದ 9ರವರೆಗೆ ನವದೆಹಲಿಯಲ್ಲಿ ನಡೆಯುತ್ತಿರುವ BIMSTEC ಅಕ್ವಾಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಎಸ್.ತಾನ್ಯ 200 ಮೀಟರ್ ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ 2:42.94 ಹಾಗೂ 200 ಮೀಟರ್ ವೈಯಕ್ತಿಕ ಮೆಡ್ಲೆ ಸ್ಪರ್ಧೆಯಲ್ಲಿ 2:28.16 ಸೆಕೆಂಡ್‌ಗಳಲ್ಲೇ ಗುರಿ ತಲುಪಿ 2 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಭಾರತೀಯ ಈಜು ತಂಡದ 14 ವರ್ಷದ ಕಿರಿಯ ಬಾಲಕಿ ಎಸ್.ತಾನ್ಯ ಅಂತರರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ 2 ಚಿನ್ನದ ಪದಕಗಳನ್ನು ಗೆದ್ದ ಮೈಸೂರಿನ ಮೊದಲ ಈಜುಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ಚಾಂಪಿಯನ್‌ಶಿಪ್ ಅಂತಿಮ ದಿನವಾದ ಫೆ.9 ರಂದು, ತಾನ್ಯ ಅವರು 400 ಮೀಟರ್ ವೈಯಕ್ತಿಕ ಮೆಡ್ಲೆ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಎಸ್.ತಾನ್ಯ, ಮೈಸೂರಿನ ಜೆ.ಪಿ.ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಈಜುಕೊಳದಲ್ಲಿ, ತರಬೇತುದಾರ ಪಿ.ಪವನ್ ಕುಮಾರ್ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಸವಣ್ಣನವರ ಪೂಜೆಗೆ ಸೀಮಿತಗೊಳಿಸಬಾರದು; ಅವರ ವಚನಗಳಂತೆ ನಾವೆಲ್ಲಾ ಬಾಳಬೇಕು

● ಸಿಎಂ ಸಿದ್ದರಾಮಯ್ಯ ಆಶಯ ● ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದೇಶೀ ಆಟಗಳು; ರಂಗೋಲಿ ಸ್ಪರ್ಧೆ ಉದ್ಘಾಟನೆ



ನಂಜನಗೂಡು, ಫೆ.7– ಈ ಹಿಂದಿನ ನಮ್ಮ ಸರ್ಕಾರದಲ್ಲಿ ಎಲ್ಲಾ ಸರ್ಕಾರಿ ಕಚೇರಿಗಳಲ್ಲೂ ಬಸವಣ್ಣನವರ ಭಾವ ಚಿತ್ರವನ್ನು ಅಳವಡಿಸುವಂತೆ ಆದೇಶ ಹೊರಡಿಸಿದ್ದೆ. ಈಗಿನ ನಮ್ಮ ಸರ್ಕಾರದಲ್ಲಿ ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕನೆಂದು ಘೋಷಿಸಿದ್ದು, ಎಲ್ಲಾ ಸರ್ಕಾರಿ ಕಚೇರಿಗಳ ಬಸವಣ್ಣನವರ ಭಾವಚಿತ್ರಗಳಡಿ ವಿಶ್ವಗುರು ಬಸವಣ್ಣ, ಸಾಂಸ್ಕೃತಿಕ ನಾಯಕ ಎಂದು ನಮೂದಿಸುವಂತೆ ಸುತ್ತೋಲೆ ಹೊರಡಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದಲ್ಲಿ ದೇಸೀ ಆಟಗಳು ಮತ್ತು ರಂಗೋಲಿ ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನ ಬದಲಾವಣೆ ಮಾಡುವ ಪ್ರಯತ್ನ: ಕೆಲವು ಪಟ್ಟಭದ್ರ ಹಿತಾಶಕ್ತಿಗಳು ಸಂವಿಧಾನ ಬದಲಾವಣೆ ಮಾಡುವ ಪ್ರಯತ್ನವನ್ನು ಹಿಂದೆಯೂ ಮಾಡುತ್ತಿದ್ದರು, ಮುಂದೆಯೂ ಕೂಡ ನಡೆಸುತ್ತಲೇ ಇರುತ್ತಾರೆ, ಸಂವಿಧಾನ, ಶಿಕ್ಷಣ ದೊರೆತ ಕಾರಣದಿಂದಲೇ ನಾನು ಸಿಎಂ ಆಗಲು ಸಾಧ್ಯವಾಗಿದೆ. ಆದ್ದರಿಂದ ಶರಣರ ವಚನಗಳು ಇಂದಿಗೂ ಪ್ರಸ್ತುತವಾಗಿವೆ. ಬಸವಣ್ಣನವರ ಹೆಸರೇಳಿಕೊಂಡು ಪೂಜೆ ಮಾಡುವುದಕ್ಕೆ ಸೀಮಿತಗೊಳ್ಳಬಾರದು. ಬದಲಾಗಿ ಬಸವಣ್ಣನವರ ವಚನಗಳಂತೆ ನಡೆದುಕೊಳ್ಳಬೇಕು. ಆದ್ದರಿಂದಲೇ ನಮ್ಮ ಸರ್ಕಾರದಲ್ಲಿ ಬಸವಣ್ಣನವರನ್ನು ವಿಶ್ವಗುರು, ಸಾಂಸ್ಕೃತಿಕ ನಾಯಕನೆಂದು ಘೋಷಿಸಲಾಗಿದೆ. ಈ ಕೆಲಸವನ್ನು ಹಿಂದೆ ಯಾರೂ ಕೂಡ ಮಾಡಲು ಸಾಧ್ಯವಾಗಿಲ್ಲ. ನಮ್ಮ ಸರ್ಕಾರ ಮಾಡಿ ತೋರಿಸಿದೆ ಎಂದರು.

ಸಮಾಜದಲ್ಲಿ ಪರಸ್ಪರ ಪ್ರೀತಿಸುವ ವಾತಾವರಣ ನಿರ್ಮಾಣವಾಗಬೇಕೇ ಹೊರತು ಪರಸ್ಪರ ದ್ವೇಷಿಸುವ ವಾತಾವರಣ ನಿರ್ಮಾಣವಾಗಬಾರದು, ಬಸವಾದಿ ಶರಣರು ಸಮ ಸಮಾಜವನ್ನು ನಿರ್ಮಿಸಬೇಕೆಂದು 12ನೇ ಶತಮಾನದಲ್ಲೇ ಪ್ರಯತ್ನಿಸಿದರು. ಆದರೆ ಪಟ್ಟಭದ್ರ ಹಿತಾಶಕ್ತಿಗಳು ಜಾತಿ, ಜಾತಿ ಮಧ್ಯೆ, ಧರ್ಮ, ಧರ್ಮಗಳ ಮಧ್ಯೆ ಬೆಂಕಿ ಹಚ್ಚುವ ಪ್ರಯತ್ನವನ್ನು ಮಾಡುತ್ತಿರುವ ಕಾರಣ ಅಸಮಾನತೆ ಇನ್ನೂ ದೂರವಾಗಿಲ್ಲ. ಜಾತ್ರೆಗಳು ಎಲ್ಲಾ ಸಮಾಜದವರನ್ನು ಒಂದೆಡೆ ಸೇರಿಸಿ ಸಮಸ್ಯೆಗಳಿಗೆ ಪರಿಹಾರ ಕೊಡುವ ಪ್ರಯತ್ನ ನಡೆಸುತ್ತಿವೆ. ವಿಶ್ವಮಾನವನಾಗಿ ಹುಟ್ಟುವ ಮನುಷ್ಯ ಬೆಳೆಯುತ್ತ ಅಲ್ಪ ಮಾನವನಾಗುತ್ತಾನೆ ಎಂದರು.

ಜಾತೀಯತೆಯಿಂದಾಗಿ ಚಲನ ರಹಿತ ಸಮಾಜ ನಿರ್ಮಾಣವಾಗಿದೆ. ಚಲನೆ ಇಲ್ಲದ ಸಮಾಜದಿಂದ ದೇಶದ ಉದ್ಧಾರ ಸಾಧ್ಯವಿಲ್ಲ, ಶ್ರೇಷ್ಠತೆ ಎಂಬುದು ಜಾತಿಯಿಂದ ನಿಗದಿಯಾಗಲ್ಲ. ಜ್ಞಾನ, ಮನುಷ್ಯತ್ವದಿಂದ ಶ್ರೇಷ್ಠತೆ ನಿಗದಿಯಾಗುತ್ತದೆ. ಬುದ್ಧ, ಬಸವ ಅಂಬೇಡ್ಕರ್ ಹೇಳಿದರೂ ಇನ್ನೂ ಸಮ ಸಮಾನತೆ ತರಲು ಸಾಧ್ಯವಾಗಿಲ್ಲ, ಎಲ್ಲರಿಗೂ ಆರ್ಥಿಕ, ಸಾಮಾಜಿಕ ಶಕ್ತಿ ಬಂದಾಗ ಮಾತ್ರ ಸಮಾನತೆ ಮೂಡಲಿದ್ದು, ಆಗ ಸ್ವಾತಂತ್ರ್ಯಕ್ಕೆ ಅರ್ಥ ಬರಲಿದೆ. ಇದು ನೆರವೇರಬೇಕಾದರೆ ವೈಚಾರಿಕತೆ, ವೈಜ್ಞಾನಿಕತೆಯಿಂದ ಕೂಡಿದ ಶಿಕ್ಷಣ ಎಲ್ಲರಿಗೂ ದೊರಕಬೇಕು ಎಂದರು.

ಸುತ್ತೂರು ಜಾತ್ರೆ ಸೌಹಾರ್ದ ಬದುಕಿಗೆ ಸಾಕ್ಷಿ: ಸುತ್ತೂರು ಶ್ರೀಗಳಿಗೆ ಜಾತ್ರೆಯಲ್ಲಿ ಭಾಗವಹಿಸುತ್ತೇನೆಂದು ಮಾತು ಕೊಟ್ಟಿದ್ದೆ. ಮಾತಿಗೆ ತಪ್ಪಬಾರದು ಎಂಬ ಕಾರಣಕ್ಕೆ ದೆಹಲಿಯಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿದ ನಂತರ ನೇರವಾಗಿ ಇಲ್ಲಿಗೇ ಬಂದಿದ್ದೇನೆ. 6 ಗಂಟೆ ಸಮಯಕ್ಕೆ ಸರಿಯಾಗಿ ಬರುತ್ತೇನೆಂದು ಹೇಳಿದ್ದೆ. ಅದರಂತೆ ಸರಿಯಾದ ಸಮಯದಲ್ಲಿ ಭಾಗಿಯಾಗಿದ್ದೇನೆ. ಸಂತೋಷದಿಂದ ದೇಸೀ ಆಟಗಳನ್ನು, ರಂಗೋಲಿ ಸ್ಪರ್ಧೆಯನ್ನು ಉದ್ಘಾಟಿಸಿದ್ದೇನೆ. ಸುತ್ತೂರು ಜಾತ್ರೆಯಲ್ಲಿ ಎಲ್ಲಾ ಜಾತಿ ಧರ್ಮ, ಭಾಷೆಯವರು ಭಾಗವಹಿಸುವ ಮೂಲಕ ಸೌಹಾರ್ದಮಯ ಬದುಕು ನಡೆಸುವ ಕಾರಣ ಸುತ್ತೂರು ಜಾತ್ರೆ ದೇಶದಲ್ಲಿಯೇ ವಿಶೇಷದಿಂದ ಕೂಡಿದ ಜಾತ್ರೆಯಾಗಿದೆ ಎಂದರು. ಭಾಷಣದ ಆರಂಭದಲ್ಲಿ ಅಲ್ಲಂ ವೀರಭದ್ರಪ್ಪರವರ ಹೆಸರು ಹೇಳುವಾಗ ನೀನು ತಲೆ ಬೋಳಿಸಿರುವುದರಿಂದ ಹೆಸರು ಬೇಗ ಹೊಳೆಯುತ್ತಿಲ್ಲ ಎಂಬ ಹಾಸ್ಯ ಚಟಾಕಿ ಹಾರಿಸಿದರು.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾತನಾಡಿ ಸುತ್ತೂರು ಮಠವು ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ದೇಶ ಗಮನಿಸುವಂತೆ ಸೇವೆ ಮಾಡುತ್ತಿದೆ. ಜೊತೆಗೆ ಜಾತ್ರೆ ಮೂಲಕ ಸಮಾಜದಲ್ಲಿ ಬದಲಾವಣೆಯನ್ನು ತರುವ ಪ್ರಯತ್ನವನ್ನೂ ನಡೆಸುತ್ತಿದೆ. ಅಲ್ಲದೆ ಲಕ್ಷಾಂತರ ಯುವಕರಿಗೆ ಅವಕಾಶ ಕೊಟ್ಟು ಅವರ ಜೀವನಕ್ಕೆ ದಾರಿದೀಪವಾಗಿದ್ದು ಶ್ರೀ ಮಠದ ಸೇವೆ ಹೆಚ್ಚಿನದು ಎಂದರು.

ಧರ್ಮ ಯಾರ ಸ್ವತ್ತಲ್ಲ: ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಮಾತನಾಡಿ ಧಾರ್ಮಿಕತೆ, ಧರ್ಮ, ದೇವರು ಯಾವುದೇ ರಾಜಕೀಯ ಪಕ್ಷದ, ರಾಜಕೀಯ ನಾಯಕರ ವಸ್ತುವಲ್ಲ. ಅದು ಜನರ ಆಯ್ಕೆಯ ಹಕ್ಕು. ಈ ಹಕ್ಕನ್ನು ರಾಜಕೀಯಗೊಳಿಸಿದಾಗ ಸಂವಿಧಾನದ ಆಶಯಕ್ಕೆ ಧಕ್ಕೆ ತಂದಂತೆ. ನಮ್ಮ ಸರ್ಕಾರ ಸಂವಿಧಾನದ ಆಶಯದಂತೆ ಬದುಕು ನಡೆಸುವಂತೆ ಮಾಡಲು 3 ಪ್ರಮುಖ ನಿರ್ಣಯಗಳನ್ನು ಕೈಗೊಂಡಿದೆ. 1 ಬಸವಣ್ಣರನ್ನು ಸಾಂಸ್ಕೃತಿಕ ನಾಯಕನೆಂದು ಘೋಷಿಸಿರುವುದು, 2 ಶಿವಮೊಗ್ಗ ಕ್ರೀಡಾಂಗಣಕ್ಕೆ ಅಲ್ಲಮಪ್ರಭುರವರ ಹೆಸರಿಟ್ಟಿರುವುದು, 3 ಸಂವಿಧಾನದ ಆಶಯಗಳನ್ನು ಜನರಿಗೆ ತಿಳಿಸಿ ಜಾಗೃತಿ ಮೂಡಿಸಲು ಸಂವಿಧಾನ ಜಾಥಗಳನ್ನು ನಡೆಸುತ್ತಿರುವುದು. ಈ ನಿರ್ಣಯಗಳನ್ನು ಮುಖ್ಯಮಂತ್ರಿಗಳು ಕೈಗೊಳ್ಳಲು ಮಠಮಾನ್ಯಗಳ ನಿಲುವು ಸೇವೆಯೇ ಕಾರಣ. ಸುತ್ತೂರು ಜಾತ್ರೆ ಎಲ್ಲಾ ಸಮುದಾಯದವರನ್ನು ಸೇರಿಸುವ ಸೌಹಾರ್ದಮಯ ಕೇಂದ್ರವಾಗಿದೆ, ಜೊತೆಗೆ ಬಡಮಕ್ಕಳಿಗೆ ವಸತಿ, ಅನ್ನ ನೀಡಿ ಶಿಕ್ಷಣ ಒದಗಿಸುತ್ತಿದೆ ಎಂದರು.

ಸಮಾರಂಭದಲ್ಲಿ ಶ್ರೀ ಶಿವರಾತ್ರೀಶ್ವರ ದೇಶೀಕೇಂದ್ರ ಸ್ವಾಮಿಜಿ, ಶ್ರೀಶೈಲ ಅಕ್ಕಮಹದೇವಿ ಚೈತನ್ಯ ಪೀಠದ ತಪೋರತ್ನ ಕರುಣಾದೇವಿ ಮಾತಾ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ಸಚಿವರಾದ ಕೆ.ಜೆ.ಜಾರ್ಜ್, ವೆಂಕಟೇಶ್, ಕೆ.ಸಿ.ಸುಧಾಕರ್, ಮಾಜಿ ಸಚಿವ ಅಲ್ಲಂವೀರಭದ್ರಪ್ಪ, ಮಾಜಿ ಶಾಸಕ ಡಾ. ಯತೀಂದ್ರ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮುಖಂಡರಾದ ಸುನೀಲ್‌ಬೋಸ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಚಂದ್ರಮೌಳಿ, ಡಿ.ಎಸ್.ಸದಾಶಿವಮೂರ್ತಿ ಇದ್ದರು.

ಇರುವುದೆಲ್ಲವಾ ಗ್ಯಾರಂಟಿಗಳಿಗೆ; ಶಾಸಕರ ಹಿಡಿದಿಟ್ಟುಕೊಳ್ಳಲು ಖರ್ಚು ಮಾಡಿದರೆ ಮೆಚ್ಚರಾ ಜನತಾ ಜನಾರ್ಧನರು...!

● ಕಾಂಗ್ರೆಸ್ ದೆಹಲಿ ಚಲೋಗೆ ಪರ್ಯಾಯವಾಗಿ ಬೆಂಗಳೂರಿನಲ್ಲಿ ಬಿಜೆಪಿ ಪ್ರತಿಭಟನೆ
● ಖಾಲಿ ಇರುವ ವಿಧಾನಸೌಧದ ಸಚಿವರ ಕೊಠಡಿಗೆ ಬೀಗ ಜಡಿಯುವ ಯತ್ನ
● ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಬರ, ರೈತರ ಆತ್ಮಹತ್ಯೆ ಭಾಗ್ಯ ಉಚಿತ...!



ಬಿಜೆಪಿ ನಾಯಕರು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು.

ಬೆಂಗಳೂರು, ಫೆ 7(ಕೆಎಂಶಿ)–ಕೇಂದ್ರದ ಮಲತಾಯಿ ಧೋರಣೆ ಖಂಡಿಸಿ ದೆಹಲಿಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಪ್ರತಿಭಟನೆ ನಡೆಸಿ ದರೆ, ಬರ ಪರಿಹಾರ ನೀಡದೆ, ಗ್ಯಾರಂಟಿಗಳಿಗೆ, ಶಾಸಕರ ತೃಪ್ತಿಪಡಿಸಲು ಇರುವ ಹಣವೆಲ್ಲವನ್ನು ದುಂದುವೆಚ್ಚ ಮಾಡಿ ಈಗ ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸವನ್ನು ಸಿದ್ದರಾಮಯ್ಯ ಸರ್ಕಾರ ಮಾಡುತ್ತಿದೆ ಎಂದು ಬಿಜೆಪಿಯ ನಾಯಕರು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿ, ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು.

ಕೆಲಕಾಲ ಗಾಂಧಿ ಪ್ರತಿಮೆ ಬಳಿ ಧರಣಿ ನಡೆಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತಿತರರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ವಿಧಾನಸೌಧ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಅವರನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ನಾಯಕರು, ಸಿದ್ದರಾಮಯ್ಯ ಸರ್ಕಾರ ಐದು ಗ್ಯಾರಂಟಿಗಳ ಜೊತೆಗೆ ಜನರಿಗೆ ನಾಮ ಹಾಕುವ ಗ್ಯಾರಂಟಿ ನೀಡಿದೆ

ಖಜಾನೆ ಖಾಲಿ ಮಾಡಿಕೊಂಡ ಸರ್ಕಾರ ವಿಧಾನಸೌಧಕ್ಕೆ ಬೀಗ ಹಾಕಿಕೊಂಡಿದೆ. ಸರ್ಕಾರ ನಡೆಸುವವರು ದೆಹಲಿಗೆ ಮಜಾ ಮಾಡಲು ಹೋಗಿದ್ದು ಶಕ್ತಿ ಸೌಧ ಖಾಲಿಯಾಗಿದೆ. ತಮಿಳುನಾಡು ಮುಖ್ಯಮಂತ್ರಿ ಅವರನ್ನು ಓಲೈಸಲು ಕಾವೇರಿ ನೀರು ಹರಿಸಿ ಈಗ ಬೆಂಗಳೂರು ನಗರಕ್ಕೆ ಶೇಕಡ 30ರಷ್ಟು ನೀರು ಖೋತಾ ಮಾಡಿದ್ದಾರೆ. ಒಂದೊಂದು ಗ್ಯಾರಂಟಿಗೂ ಸಮಯಾವಕಾಶ ಪಡೆದು ಜನರಿಗೆ ಪಂಗನಾಮ ಹಾಕಿದ್ದಾರೆ. ಈ ನಾಮದ ಗ್ಯಾರಂಟಿಯನ್ನು ಪ್ರತಿಯೊಬ್ಬರಿಗೂ ಮುಟ್ಟಿಸಲು ತಮ್ಮ ಪಕ್ಷದ 80 ಶಾಸಕರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡಿದ್ದಾರೆ ಎಂದು ವ್ಯಂಗ್ಯವಾಡಿದರು.

ಬರ ಪರಿಹಾರ ನೀಡದೇ ಶಾಶಕರ ತೃಪ್ತಿಪಡಿಸಲು ದುಂದುವೆಚ್ಚ: ಬರ ಪರಿಹಾರಕ್ಕೆ ಹಣ ನೀಡದವರು ತಮ್ಮ ಶಾಸಕರನ್ನು ಹಿಡಿದಿಟ್ಟುಕೊಳ್ಳಲು 300 ರಿಂದ 400 ಕೋಟಿ ರೂ. ವೆಚ್ಚ ಮಾಡುತ್ತಿದ್ದಾರೆ. ಅನಾವೃಷ್ಟಿಯಿಂದ ಬೆಳೆ ಕಳೆದುಕೊಂಡ ರೈತರಿಗೆ ಪರಿಹಾರ ನೀಡದ ಸಿದ್ದರಾಮಯ್ಯ ಸರ್ಕಾರ ಮುಸ್ಲೀಮರ ಕಲ್ಯಾಣಕ್ಕೆ ಒಂದು ಸಾವಿರ ಕೋಟಿ ರೂ. ನೀಡುತ್ತಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಬರ ಮತ್ತು ರೈತರ ಆತ್ಮಹತ್ಯೆ ಭಾಗ್ಯ ಉಚಿತ ಎಂದು ಲೇವಡಿ ಮಾಡಿದರು. ದುಡಿದು ತಿನ್ನುವವನಿಗೆ ಕೆಲಸವಿಲ್ಲ, ಕೈಗಾರಿಕೆಗಳಿಗೆ ಸಮರ್ಪಕ ವಿದ್ಯುತ್ ಇಲ್ಲ, ರೈತರ ಭೂಮಿಗೆ ನೀರು ಹರಿಸದ ಈ ಸರ್ಕಾರಕ್ಕೆ ಸಂಪನ್ಮೂಲ ಎಲ್ಲಿಂದ ಕ್ರೂಢೀಕರಣವಾಗಲಿದೆ ಎಂದರು.

ಇರುವ ಹಣವೆಲ್ಲಾ ಗ್ಯಾರಂಟಿ ಯೋಜನೆಗಳಿಗೆ ನೀಡಿ, ಪಕ್ಷಕ್ಕೆ ಲಾಭ ಮಾಡಿಕೊಳ್ಳಲು ಹೊರಟಿರುವ ಸಿದ್ದರಾಮಯ್ಯ, ರಾಜ್ಯದಲ್ಲಿ ಬಿದ್ದಿರುವ ಒಂದೂ ಗುಂಡಿ ಮುಚ್ಚದೆ, ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲದೆ, ಮೋದಿ ಅವರನ್ನು ನಿಂದಿಸಲು ಸರ್ಕಾರಿ ಹಣದಲ್ಲಿ ಜಾತ್ರೆ ಹೊರಟಿದ್ದಾರೆ ಎಂದು ನಿಂದಿಸಿದರು.

ಬರದ ಬೇಗುದಿಯಿಂದ ವಿದ್ಯುತ್, ನೀರು ಖಾಲಿಯಾಗಿದೆ. ಮುಂದಿನ ದಿನಗಳು ಮತ್ತಷ್ಟು ಸಂಕಷ್ಟ ಎದುರಿಸಬೇಕಾಗುತ್ತದೆ, ಇತ್ತ ಗಮನ ಹರಿಸದೆ, ಸಿದ್ದರಾಮಯ್ಯ ಮತ್ತು ಅವರ ಬಳಗ ದೆಹಲಿಯಲ್ಲಿ ರಾಜಕೀಯ ಮಾಡುತ್ತಿದೆ ಎಂದರು. ಮೋದಿ ಅವರು ದೇಶ ಕಟ್ಟಲು ಹೊರಟರೆ, ಕಾಂಗ್ರೆಸ್‌ನವರು ವಿಭಜನೆ ಮಾಡಲು ಹೊರಡುತ್ತಾರೆ. ಇಂತಹವರಿಂದ ಜನ ಬುದ್ಧಿ ಕಲಿಯಬೇಕಿಲ್ಲ. ರೈತರು ಹಾಗೂ ಜನರ ಪಾಲಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಸತ್ತು ಹೋಗಿದೆ, ಆದ್ದರಿಂದ ವಿಧಾನಸೌಧದಲ್ಲಿನ ಸಚಿವರ ಕಚೇರಿಗಳಿಗೆ ಬೀಗ ಹಾಕಲು ಹೋಗುತ್ತಿದ್ದೇವೆ. ರಾಜ್ಯ ಸರ್ಕಾರ ಜನತೆಗೆ ಅನ್ಯಾಯ ಮಾಡಿದೆ. ರೈತರಿಗೆ ಬರ ಪರಿಹಾರ ನೀಡಿಲ್ಲ, ಕೇಂದ್ರದ ವಿರುದ್ಧ ಮಾತನಾಡುತ್ತಿದೆ. ಆರೋಪ ಹೊರಿಸುತ್ತಿದೆ. ಜನರ ಸಮಸ್ಯೆ ಪರಿಹರಿಸುವುದನ್ನು ಬಿಟ್ಟು ಎಲ್ಲ ಜನಪ್ರತಿನಿಧಿಗಳು ದೆಹಲಿಗೆ ಹೋಗಿ ಕುಳಿತಿದ್ದಾರೆ. ರಾಜ್ಯದಲ್ಲಿ ಸರ್ಕಾರ ಇದೆಯಾ? ಅದಕ್ಕಾಗಿಯೇ ವಿಧಾನಸೌಧಕ್ಕೆ ಬೀಗ ಹಾಕಲು ಹೊರಟಿದ್ದೇವೆ ಎಂದರು. ವಿಧಾನಸೌಧದ ಬಳಿ ತೆರಳಿ, ಗೇಟ್‌ಗೆ ಬೀಗ ಹಾಕಲು ಮುಂದಾದಾಗ ಬಿಜೆಪಿ ನಾಯಕರನ್ನು ಪೊಲೀಸರು ವಶಕ್ಕೆ ಪಡೆದರು.

ಬುಡಕಟ್ಟು ಸಮುದಾಯ ಆರ್ಥಿಕ ಸ್ವಾವಲಂಬನೆಗೆ ಕರೆ



15ನೇ ಬುಡಕಟ್ಟು ವಿನಿಮಯ ಕಾರ್ಯಕ್ರಮದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಮೈಸೂರು, ಫೆ.7(ಎಂಕೆ)– ಬುಡಕಟ್ಟು ಸಮುದಾಯದ ಯುವ ಜನತೆ ಪ್ರಜ್ಞಾವಂತರಾಗಿ ಶಿಕ್ಷಣ ಪಡೆದು ಸಮಾಜದ ಮುನ್ನಲೆಗೆ ಬರಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಫಲಾನುಭವಿಗಳಾಗಿ ಆರ್ಥಿಕ ಸ್ವಾವಲಂಬನೆ ಸಾಧಿಸುವಂತೆ ಶಾಸಕ ಜಿ.ಟಿ. ದೇವೇಗೌಡ ಕರೆ ನೀಡಿದರು.

ಭಾರತ ಸರ್ಕಾರ ಯುವಜನ ಹಾಗೂ ಕ್ರೀಡಾ ಸಚಿವಾಲಯ, ಕೇಂದ್ರ ಗೃಹ ಸಚಿವಾಲಯ, ನೆಹರು ಯುವ ಕೇಂದ್ರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ 15ನೇ ಬುಡಕಟ್ಟು ವಿನಿಮಯ ಕಾರ್ಯಕ್ರಮದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಮಾತನಾಡಿದರು. ಬುಡಕಟ್ಟು ಸಮುದಾಯ ಸಾಂಸ್ಕೃತಿಕವಾಗಿ ಸಂಪದ್ಭರಿತವಾಗಿದೆ. ಆದರೆ, ಶಿಕ್ಷಣ ಪಡೆದು ಸಮಾಜದ ಮುನ್ನಲೆಯಲ್ಲಿ ತೀರ ಹಿಂದುಳಿದಿದೆ. ಆದ್ದರಿಂದ ಸಮುದಾಯದ ಯುವ ಜನರು ಹೆಚ್ಚು ಶಿಕ್ಷಣ ಪಡೆಯಲೇಬೇಕು. ಈ ನಿಟ್ಟಿನಲ್ಲಿ ಬುಡಕಟ್ಟು ಸಂಸ್ಕೃತಿ ಉಳಿಸಿಕೊಂಡು ಕಡ್ಡಾಯವಾಗಿ ಪ್ರತಿಯೊಬ್ಬರು ಶಿಕ್ಷಣ ಪಡೆಯುವಂತೆ ಸಲಹೆ ನೀಡಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಸೋಮಣ್ಣ, ನೆಹರು ಯುವ ಕೇಂದ್ರದ ರಾಜ್ಯ ನಿರ್ದೇಶಕ ಎಂ.ಎನ್. ನಟ ರಾಜ್, ಅಭಿಷೇಕ್ ಚವರೆ, ಗಿರಿಜನ ಹಾಡಿಯ ಶ್ರೀಕಾಂತ್, ಎಂ.ಪಿ.ವರ್ಷ, ಚಿನ್ನಗಿರಿ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಊಟಿಯಲ್ಲಿ ಕಟ್ಟಡ ಕುಸಿದು 6 ಮಹಿಳಾ ಕಾರ್ಮಿಕರು ಜೀವಂತ ಸಮಾಧಿ

ಉದಕಮಂಡಲ: ನಿರ್ಮಾಣ ಹಂತದಲ್ಲಿರುವ ಕಟ್ಟಡದ ಪಕ್ಕದಲ್ಲಿರುವ ಮನೆಯೊಂದು ಕುಸಿದ ಪರಿಣಾಮ, ಕೆಲಸ ಮಾಡುತ್ತಿದ್ದ 6 ಮಹಿಳಾ ಕಾರ್ಮಿಕರು ಅವಶೇಷಗಳಡಿ ಸಿಲುಕಿ ಜೀವಂತ ಸಮಾಧಿಯಾಗಿದ್ದಾರೆ.

ಶಕೀಲಾ (30), ಸಂಗೀತಾ (35), ಭಾಗ್ಯಾ (36), ಉಮಾ (35), ಮುತ್ತುಲಕ್ಷ್ಮಿ (36) ಹಾಗೂ ರಾಧಾ (38) ಮೃತರು ಎಂದು ಗುರುತಿಸಲಾಗಿದೆ. ಕಟ್ಟಡದ ಅವಶೇಷಗಳಡಿ ಇನ್ನೂ ಕೆಲವರು ಸಿಲುಕಿರುವ ಶಂಕೆ ಇದೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಾರ್ಮಿಕರು ಎಂದಿನಂತೆ ತಾವು ಕಾರ್ಯ ನಿರ್ವಹಿಸುವ ನಿವೇಶನದಲ್ಲಿ ಮಣ್ಣನ್ನು ತೆಗೆದು, ಸಾಗಿಸುತ್ತಿದ್ದರು. ಆದರೆ ಇದೇ ಸಂದರ್ಭದಲ್ಲಿ ಪಕ್ಕದಲ್ಲಿದ್ದ ಮನೆಯೊಂದು ಏಕಾಏಕಿ ಕುಸಿದಾಗ ಕಾರ್ಮಿಕರು ಅವಶೇಷಗಳ ಅಡಿಯಲ್ಲಿ ಸಿಲುಕಿದರು ಎಂದು ಪೊಲೀಸರು ತಿಳಿಸಿದ್ದಾರೆ.



ಮೈಸೂರು ನಗರಕ್ಕೆ ಭೇಟಿ ನೀಡಿದ ನಿಕಟ ಪೂರ್ವ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರನ್ನು ಮೈಸೂರು ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್ ನಾಗೇಂದ್ರ ಅವರು ಚಾಮುಂಡಿ ಬೆಟ್ಟದಲ್ಲಿ ಸ್ವಾಗತಿಸಿದರು. ಈ ವೇಳೆ ಜಿಲ್ಲಾಧ್ಯಕ್ಷ ಎಲ್.ಆರ್.ಮಹಾದೇವಸ್ವಾಮಿ, ಉಪಾಧ್ಯಕ್ಷ ರಾಜೇಂದ್ರ, ನಗರ ಪ್ರಧಾನ ಕಾರ್ಯದರ್ಶಿ ಗಿರಿಧರ್, ಹಿರಿಯ ಮುಖಂಡ ಮಹದೇವಯ್ಯ, ಇತರರು ಉಪಸ್ಥಿತರಿದ್ದರು.

ಲೋಕಸಮರಕ್ಕೂ ಮುನ್ನ ವಿರೋಧ ಪಕ್ಷಗಳ ಮೈತ್ರಿ ಛಿದ್ರ
'ಇಂಡಿಯಾ' ಒಕ್ಕೂಟಕ್ಕೆ ವಿದಾಯ ಹೇಳಲು RLD ಸಜ್ಜು

ನವದೆಹಲಿ: ಲೋಕಸಭೆ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಇರುವ ಮುನ್ನವೇ ಇಂಡಿಯಾ ಒಕ್ಕೂಟದಿಂದ ಒಂದೊಂದೇ ಪಕ್ಷ ಹೊರಬರುತ್ತಿವೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ, ಪಂಜಾಬ್‌ನಲ್ಲಿ ಆಪ್ ಸ್ವತಂತ್ರವಾಗಿ ಸ್ಪರ್ಧಿಸಲು ತೀರ್ಮಾನ ತೆಗೆದುಕೊಂಡಿವೆ. ನಿತೀಶ್‌ಕುಮಾರ್ ಅವರು ಈಗಾಗಲೇ ಬಿಜೆಪಿ ಮೈತ್ರಿ ಸೇರಿದ್ದಾರೆ. ಇದರ ಬೆನ್ನಲ್ಲೇ, ಇಂಡಿಯಾ ಒಕ್ಕೂಟದಿಂದ ಹೊರಬರಲು ರಾಷ್ಟ್ರೀಯ ಲೋಕದಳವೂ ಸಜ್ಜಾಗಿದೆ ಎಂದು ಹೇಳಲಾಗುತ್ತಿದೆ.

ಉತ್ತರ ಪ್ರದೇಶದ ಆರ್‌ಎಲ್‌ಡಿ ಮುಖಂಡ ಜಯಂತ್ ಚೌಧರಿ ಶೀಘ್ರದಲ್ಲಿ ಬಿಜೆಪಿಯೊಂದಿಗೆ ಕೈಜೋಡಿಸಬಹುದು ಎಂದು ಹೇಳಲಾಗುತ್ತಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ನ್ಯಾಯ ಯಾತ್ರೆಯು ಉತ್ತರ ಪ್ರದೇಶ ತಲುಪುವ ಮೊದಲು ರಾಷ್ಟ್ರೀಯ ಲೋಕದಳವು ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟಕ್ಕೆ ಸೇರುವ ಸಾಧ್ಯತೆ ಇದೆ. ಜಯಂತ್ ಅವರು ಬಿಜೆಪಿಯ ಕೆಲವು ಹಿರಿಯ ನಾಯಕರನ್ನು ಭೇಟಿಯಾಗಿದ್ದಾರೆ. ಅವರ ತಂದೆ ಅಜಿತ್ ಚೌಧರಿ ಅವರ ಜನ್ಮದಿನವಾದ ಫೆಬ್ರವರಿ 12ರಂದು ಬಿಜೆಪಿಯೊಂದಿಗಿನ ಮೈತ್ರಿಯ ಅಧಿಕೃತ ಘೋಷಣೆ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಕಳೆದ ಜನವರಿಯಲ್ಲಿ ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ ಹಾಗೂ ಆರ್‌ಎಲ್‌ಡಿ ಮಧ್ಯೆ ಸೀಟು ಹಂಚಿಕೆ ಕುರಿತು ಮಾತುಕತೆ ನಡೆದಿತ್ತು. ಮೂಲಗಳ ಪ್ರಕಾರ, ಆರ್‌ಎಲ್‌ಡಿಗೆ ಲೋಕಸಭೆಯ ಏಳು ಕ್ಷೇತ್ರಗಳನ್ನು ಬಿಟ್ಟುಕೊಡಲು ಎಸ್‌ಪಿ ಒಪ್ಪಿಕೊಂಡಿತ್ತು ಎನ್ನಲಾಗಿದೆ.

ಆದರೆ, ಈಗ ಆರ್‌ಎಲ್‌ಡಿಯು ಇಂಡಿಯಾ ಒಕ್ಕೂಟ ತೊರೆಯಲು ಸಜ್ಜಾಗಿದ್ದು, ಶೀಘ್ರವೇ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಲಾಗುತ್ತಿದೆ. 4 ಲೋಕಸಭೆ ಮತ್ತು ಒಂದು ರಾಜ್ಯಸಭಾ ಸ್ಥಾನದ ಕುರಿತು ಬಿಜೆಪಿಯೊಂದಿಗೆ ಮಾತುಕತೆ ಅಂತಿಮಗೊಳಿಸಿದೆ ಎಂದು ಹೇಳಲಾಗುತ್ತಿದೆ.

ಬಿಜೆಪಿಯನ್ನು ಶತಾಯ ಗತಾಯ ಸೋಲಿಸಬೇಕು ಎಂಬ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದಿರುವ ಇಂಡಿಯಾ ಒಕ್ಕೂಟವು ಲೋಕಸಭೆ ಚುನಾವಣೆಯ ಮೊದಲೇ ಛಿದ್ರ ಛಿದ್ರವಾಗಿದೆ. ಟಿಎಂಸಿಯು ಲೋಕಸಭೆ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲು ತೀರ್ಮಾನಿಸಿದೆ. ಪಂಜಾಬ್‌ನಲ್ಲಿ ಆಪ್ ಕೂಡ ಮೈತ್ರಿ ಇಲ್ಲದೆಯೇ ಸ್ಪರ್ಧಿಸಲು ಮುಂದಾಗಿದೆ. ಇದರ ಬೆನ್ನಲ್ಲೇ, ನಿತೀಶ್ ಕುಮಾರ್ ಅವರು ಕೂಡ ಮೈತ್ರಿಕೂಟಕ್ಕೆ ವಿದಾಯ ಹೇಳಿರುವುದು ಒಕ್ಕೂಟದ ಒಗ್ಗಟ್ಟಿಗೆ ಭಾರಿ ಪೆಟ್ಟು ಬಿದ್ದಂತಾಗಿದೆ. ಈಗ ಮತ್ತೊಂದು ಪಕ್ಷವು ಒಕ್ಕೂಟ ತೊರೆಯಲು ಸಿದ್ಧತೆ ನಡೆಸಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ.

ಬಂಡೀಪುರ ಕಾಡಂಚಿನ ಗ್ರಾಮಗಳ ಜನರಿಗೆ ಆಂಬುಲೆನ್ಸ್ ಸೇವೆ

● ಹುಲಿ ಸಂರಕ್ಷಣಾ ಫೌಂಡೇಷನ್‌ನಿಂದ ಈ ಸೌಕರ್ಯ ● ದಿನದ 24 ಗಂಟೆಯೂ ಗ್ರಾಮೀಣ ಜನರಿಗೆ ಸೇವೆ ಲಭ್ಯ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಫೆ.7–ದೇಶದಲ್ಲಿಯೇ ಹೆಚ್ಚು ಹುಲಿ ಹಾಗೂ ಆನೆಗಳ ಆವಾಸ ಸ್ಥಾನವಾಗಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳು, ಬುಡಕಟ್ಟು ಸಮುದಾಯದ ಹಾಡಿ ಜನರ ಆರೋಗ್ಯ ಸೇವೆಗಾಗಿ ದಿನದ 24 ಗಂಟೆಯೂ ಆಂಬುಲೆನ್ಸ್ ಸೇವೆ ಆರಂಭಿಸಲಾಗಿದೆ.

ಹುಲಿ ಸಂರಕ್ಷಿತ ಪ್ರದೇಶಕ್ಕೆ 50 ವರ್ಷ ಸಂದಿದ ಸಂಭ್ರಮದಲ್ಲಿ ಬಂಡೀಪುರ ಅಭಯಾರಣ್ಯದ ವತಿಯಿಂದ ವಿವಿಧ ಜನಪರ ಕಾರ್ಯಕ್ರಮ ರೂಪಿಸಲಾಗಿದ್ದು, ಅವುಗಳಲ್ಲಿ 'ಯುವಮಿತ್ರ' ಪ್ರಶಂಸೆಗೆ ಪಾತ್ರವಾಗಿದೆ. ಹಾಡಿ ಹಾಗೂ ಕಾಡಂಚಿನ ಜನರಿಗಾಗಿ ತುರ್ತು ಆರೋಗ್ಯ ಸೇವೆ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹುಲಿ ಸಂರಕ್ಷಣಾ ಪ್ರತಿಷ್ಠಾನದ ಮೂಲಕ ವಿವಿಧ ಸೇವಾ ಕಾರ್ಯ ಹಾಗೂ ಯೋಜನೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದ್ದು, ಅದರ ಭಾಗವಾಗಿ ಎರಡು ಆಂಬುಲೆನ್ಸ್ ಸೇವೆ ಆರಂಭಿಸಲಾಗಿದೆ. ಕಾಡಂಚಿನ ಗ್ರಾಮಗಳ ಅನಾರೋಗ್ಯ ಪೀಡಿತರಿಗೆ ಸಕಾಲಕ್ಕೆ ಆಂಬುಲೆನ್ಸ್ ಸೇವೆ ಭಾರೀ ಪ್ರಶಂಸೆಗೆ ಪಾತ್ರವಾಗಿದೆ.



ಬಂಡೀಪುರದ ಕಾಡಂಚಿನ ಗ್ರಾಮ ಹಾಗೂ ಹಾಡಿ ಜನರಿಗೆ ಆಂಬುಲೆನ್ಸ್ ಸೇವೆ.

53 ಹಾಡಿ–ಗ್ರಾಮಗಳಿಗೆ ನೆರವು: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನಲ್ಲಿ 53 ಹಾಡಿ ಮತ್ತು ಗ್ರಾಮಗಳಿವೆ. ಇವುಗಳಲ್ಲಿ ಬುಡಕಟ್ಟು ಸಮುದಾಯ ಸೇರಿದಂತೆ ಇನ್ನಿತರ ಸಮುದಾಯಗಳ 50ರಿಂದ 70 ಸಾವಿರ ಜನ ವಾಸಿಸುತ್ತಿದ್ದಾರೆ. ಅರಣ್ಯದ ನಡುವೆ ಹಾದು ಹೋಗಿರುವ ರಸ್ತೆಗಳಲ್ಲಿ ರಾತ್ರಿ 9 ಗಂಟೆಯಿಂದ ಬೆಳಗ್ಗೆ 6 ಗಂಟೆವರೆಗೆ ವಾಹನ ಸಂಚಾರಕ್ಕೆ ನಿರ್ಬಂಧವಿರುವುದರಿಂದ ಕಾಡಂಚಿನ ಗ್ರಾಮಗಳ ಜನರಿಗೆ ರಾತ್ರಿ ವೇಳೆ ಆರೋಗ್ಯ ಸಮಸ್ಯೆ ಉಂಟಾದರೆ ಆಸ್ಪತ್ರೆಗೆ ಕರೆದೊಯ್ಯಲು ಕಷ್ಟವಾಗುತ್ತಿತ್ತು. ಇದೀಗ ಅರಣ್ಯ ಇಲಾಖೆ ವತಿಯಿಂದಲೇ ಆಂಬುಲೆನ್ಸ್ ಸೇವೆ ಆರಂಭಿಸಿರುವುದರಿಂದ ಬುಡಕಟ್ಟು ಸಮುದಾಯದ ಮತ್ತು ಕಾಡಂಚಿನ ಗ್ರಾಮಗಳ ಜನರಿಗೆ ವರದಾನವಾಗಿ ಪರಿಣಮಿಸಿದೆ. ಆರಂಭದಲ್ಲಿ ಎರಡು ಆಂಬುಲೆನ್ಸ್ ಸೇವೆ ಆರಂಭಿಸಲಾಗಿದ್ದು, ಒಂದು ಮಂಗಲ, ಎಲ್ಚೆಟ್ಟಿ, ಚಿಕ್ಕ ಎಲ್ಚೆಟ್ಟಿ, ಜಕ್ಕಳ್ಳಿ ಸೇರಿದಂತೆ ಇನ್ನಿತರ ಗ್ರಾಮ ಮತ್ತು ಹಾಡಿ ಜನರ ಸೇವೆಗೆ ಮೀಸಲಾಗಿದ್ದರೆ, ಮತ್ತೊಂದನ್ನು ಮದ್ದೂರು ಕಾಲೋನಿಯಲ್ಲಿರಿಸಲಾಗಿದ್ದು, ಆ ಭಾಗದಲ್ಲಿ 25 ಹಾಡಿಗಳ ಜನರ ಸೇವೆಗೆ ಕಾಯ್ದಿರಿಸಲಾಗಿದೆ ಈ ಎರಡೂ ಆಂಬುಲೆನ್ಸ್‌ನಲ್ಲಿ ಆಕ್ಸಿಜನ್ ಸಿಲಿಂಡರ್ ವ್ಯವಸ್ಥೆ ಹಾಗೂ ತುರ್ತು ಚಿಕಿತ್ಸೆ ಬೇಕಾದ ಔಷಧಿ ಇಡಲಾಗಿದೆ. ರಾತ್ರಿ ವೇಳೆ ಮಾತ್ರ ಈ ಆಂಬುಲೆನ್ಸ್‌ನಲ್ಲಿ ನರ್ಸ್ ಕಾರ್ಯ ನಿರ್ವಹಿಸಲಿದ್ದು, ಹಗಲಿನ ವೇಳೆ ನುರಿತ ಚಾಲಕ ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಗುಂಡ್ಲುಪೇಟೆ, ಮೈಸೂರು ಅಥವಾ ಚಾಮರಾಜನಗರಕ್ಕೆ ಕರೆದೊಯ್ಯಲಿದ್ದಾರೆ.

ಶಾಶ್ವತ ಕಾರ್ಯಕ್ರಮ: ಹುಲಿ ಸಂರಕ್ಷಣಾ ಫೌಂಡೇಷನ್ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವತಿಯಿಂದಲೇ ನಡೆಸುತ್ತಿರುವ ಸಂಸ್ಥೆಯಾಗಿದ್ದು, ಆಂಬುಲೆನ್ಸ್ ಸೇವೆಯನ್ನು ಶಾಶ್ವತವಾಗಿ ಮುಂದುವರೆಸುವ ಆಲೋಚನೆ ಇದೆ. ಆರಂಭದಲ್ಲೇ ಆಂಬುಲೆನ್ಸ್ ಸೇವೆಗೆ ಪ್ರಶಂಸೆ ವ್ಯಕ್ತವಾಗಿರುವುದರಿಂದ ಹಾಗೂ ಜನರ ಬೇಡಿಕೆಗೆ ಅನುಗುಣವಾಗಿ ಸೇವೆ ಮುಂದುವರೆಸಲು ನಿರ್ಧರಿಸಲಾಗಿದೆ. ಇದಕ್ಕೆ ಬೇಕಾಗುವ ಅನುದಾನವನ್ನು ಹುಲಿ ಸಂರಕ್ಷಣಾ ಫೌಂಡೇಷನ್ ಭರಿಸಲಿದೆ.

ಬಂಡೀಪುರಕ್ಕೆ ಹುಲಿ, ಬುಡಕಟ್ಟು ಸಮುದಾಯ ಎರಡು ಕಣ್ಣುಗಳಿದ್ದಂತೆ



ಹುಲಿ ಮತ್ತು ಬುಡಕಟ್ಟು(ಟೈಗರ್ ಅಂಡ್ ಟ್ರೈಬ್ಸ್) ಸಮುದಾಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಎರಡು ಕಣ್ಣುಗಳಿದ್ದಂತೆ. ಇವರ ಹಿತ ಕಾಯ್ದರೆ ಬಂಡೀಪುರ ಅರಣ್ಯ ಸಂಪದ್ಭರಿತವಾಗಿರುತ್ತದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸುತ್ತಮುತ್ತಲಿರುವ 53 ಹಾಡಿರುವ ಬುಡಕಟ್ಟು ಸಮುದಾಯ ಹಾಗೂ ಕಾಡಂಚಿನ ಗ್ರಾಮಗಳಲ್ಲಿರುವ ಜನರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಇಲಾಖೆ ವತಿಯಿಂದ ಎರಡು ಆಂಬುಲೆನ್ಸ್ ಸೇವೆ ಆರಂಭಿಸಲಾಗಿದೆ. ಕಾಡಂಚಿನ ಗ್ರಾಮಗಳ ಜನರಿಗೆ ಆರೋಗ್ಯ ಸೇವೆ ಒದಗಿಸಲು ಕನಿಷ್ಠ 5 ಆಂಬುಲೆನ್ಸ್ ಸೇವೆ ಒದಗಿಸುವ ಗುರಿ ಹೊಂದಲಾಗಿತ್ತು. ಅದರಲ್ಲಿ ಈಗ ಆರಂಭಿಕ ಹಂತದಲ್ಲಿ 2 ಆಂಬುಲೆನ್ಸ್ ಸೇವೆ ಆರಂಭಿಸಲಾಗಿದೆ. ಈಗಾಗಲೇ ವಿವಿಧ ಹಾಡಿ ಮತ್ತು ಕಾಡಂಚಿನ ಗ್ರಾಮಗಳ ಅನಾರೋಗ್ಯ ಪೀಡಿತರನ್ನು ಸಕಾಲಕ್ಕೆ ಆಸ್ಪತ್ರೆಗೆ ಕರೆದೊಯ್ಯು ಸೇವೆ ನಡೆಸುತ್ತಿವೆ. ಹುಲಿ ಸಂರಕ್ಷಣಾ ಫೌಂಡೇಷನ್ ವತಿಯಿಂದ ವಿವಿಧ ಸೇವಾ ಕಾರ್ಯ ನಡೆಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ 1.25 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಅದರಲ್ಲಿ ಆಂಬುಲೆನ್ಸ್ ಸೇವೆ ಆರಂಭಿಸಲಾಗಿದ್ದು, ಹಾಡಿ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಆರ್‌ಓ ಪ್ಲಾಂಟ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಹಿಂದೆ ಗ್ರಾಮಸ್ಥರಿಗೆ ಅಡುಗೆ ಅನಿಲ ಸಂಪರ್ಕ ನೀಡಲಾಗಿತ್ತು. ಕೆಲವರಿಗೆ ವರ್ಷಕ್ಕೆ ಮೂರು ಸಿಲಿಂಡರ್ ಉಚಿತವಾಗಿ ಕೊಡುತ್ತಿದ್ದೇವೆ. ಸಾಕಷ್ಟು ಮಂದಿಗೆ ಬಿತ್ತನೆ ಬೀಜವನ್ನು ಪೂರೈಸಲಾಗುತ್ತಿದೆ.

–ಡಾ.ಪಿ.ರಮೇಶ್‌ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಮೈಸೂರು ಮಿತ್ರ
ಗುರುವಾರ 8 ಫೆಬ್ರವರಿ 2024

ಮಾ.3, ಮಂಡ್ಯದಲ್ಲಿ ಪಲ್ಸ್ ಪೋಲಿಯೋ

ಮಂಡ್ಯ,ಫೆ.7– ಜಿಲ್ಲೆಯಲ್ಲಿ ಮಾರ್ಚ್ 3ರಂದು ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಪೋಷಕರು ತಪ್ಪದೇ ತಮ್ಮ 0–5 ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಕೊಡಿಸುವಂತೆ ಜಿಲ್ಲಾಧಿಕಾರಿ ಡಾ.ಕುಮಾರ್ ಮನವಿ ಮಾಡಿದ್ದಾರೆ.

ತಮ್ಮ ಕಚೇರಿಯ ಸಭಾಂಗಣದಲ್ಲಿ ಪಲ್ಸ್ ಪೋಲಿಯೋ 2023–24ರ ಕಾರ್ಯಕ್ರಮ ಕುರಿತು ಜಿಲ್ಲಾ ಮಟ್ಟದ ಚಾಲನ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಮಾ.3 ರಿಂದ 6 ರವರೆಗೆ ನಡೆಯುವ ಕಾರ್ಯಕ್ರಮದಲ್ಲಿ ಮಾ.3ರಂದು ಆರೋಗ್ಯ ಇಲಾಖೆ ತೆರೆಯುವ ಲಸಿಕಾ ಬೂತ್‌ನಲ್ಲಿ ನೀಡಲಾಗುವುದು. ಮಾ.4 ರಿಂದ 6 ವರೆಗೆ ಮನೆ ಮನೆಗೆ ಭೇಟಿ ನೀಡಿ ಲಸಿಕೆ ಪಡೆಯದಿರುವ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ನೀಡಲು ವ್ಯವಸ್ಥೆಯನ್ನು ಸಿದ್ಧತೆ ಮಾಡಿಕೊಳ್ಳಿ ಎಂದರು.

ಈ ಹಿಂದೆ ಎಷ್ಟು ಬಾರಿ ಪೋಲಿಯೋ ಲಸಿಕೆ ನೀಡಿದರು ಸಹ ಹೆಚ್ಚುವರಿಯಾಗಿ ಪೋಲಿಯೋ ಲಸಿಕೆಯನ್ನು ಹಾಕಿಸಬೇಕು. ಜಿಲ್ಲೆಯಲ್ಲಿ ಯಾವುದೇ ಮಕ್ಕಳು (5 ವರ್ಷದೊಳಗಿನ) ಪೋಲಿಯೋ ಲಸಿಕೆಯಿಂದ ವಂಚಿತರಾಗಬಾರದು. ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಕಾರ್ಯಕ್ರಮದ ವ್ಯಾಪಕ ಪ್ರಚಾರವಾಗಬೇಕು. ಜಿಲ್ಲೆಯಲ್ಲಿರುವ



ಅಧಿಕಾರಿಗಳ ಸಭೆ ನಡೆಸಿದ ಜಿಲ್ಲಾಧಿಕಾರಿ ಡಾ.ಕುಮಾರ್.

ಹಳ್ಳಿಗಳಲ್ಲಿ, ಅಸ್ವಸ್ಥ ಕುಟುಂಬಗಳು, ಕೂಲಿ ಕಾರ್ಮಿಕರುಗಳ ಮನೆ ಮನೆಗೆ ಅಂಗನವಾಡಿ ಕಾರ್ಯಕರ್ತೆಯರು ಭೇಟಿ ನೀಡಿ ಲಸಿಕೆ ಹಾಕಿಸಲು ತಿಳಿಸಬೇಕು. ಹೊರ ರಾಜ್ಯದಿಂದ ಕಬ್ಬು ಕಡಿಯಲು ಬಂದಿರುವ ಕುಟುಂಬಗಳಿಗೆ ಹಾಗೂ ವಲಸೆ ಕಾರ್ಮಿಕರ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಲು ಹೆಚ್ಚಿನ ನಿಗಾ ವಹಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಪಲ್ಸ್ ಪೋಲಿಯೋ ಕಾರ್ಯಕ್ರಮವು ನಡೆಯುವ ಎಲ್ಲಾ ಶಾಲೆಗಳಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯಸ್ಥರು ಜನಸಾಮಾನ್ಯರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದರು.

ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಚೆಸ್ಕಾಂ(ವಿದ್ಯುಚ್ಛಕ್ತಿ ಮಂಡಳಿ), ಪ್ರಾದೇಶಿಕ ಸಾರಿಗೆ ಇಲಾಖೆ, ವಾರ್ತಾ ಇಲಾಖೆ, ಪೌರಾಡಳಿತ ಇಲಾಖೆ, ಇತರೆ ಸ್ವಯಂಸೇವಾ ಸಂಸ್ಥೆಗಳು, ಸರ್ಕಾರಿ ಹಾಗೂ ಖಾಸಗಿ ನರ್ಸಿಂಗ್ ಶಾಲೆಗಳು ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಪಲ್ಸ್ ಪೋಲಿಯೋ ಕಾರ್ಯಕ್ರಮದ ಯಶಸ್ಸಿಗೆ ಸಹಕಾರ ನೀಡಬೇಕೆಂದು ತಿಳಿಸಿದರು.

ತಾಲೂಕು ಮಟ್ಟದ ಪಲ್ಸ್ ಪೋಲಿಯೋ ಕಾರ್ಯಕ್ರಮದ ಟಾಸ್ಕ್ ಫೋರ್ಸ್ ಕಮಿಟಿ ಸಭೆಯನ್ನು ತಾಲೂಕು ಆರೋಗ್ಯ ಅಧಿಕಾರಿಗಳು ನಿಗದಿತ ಅವಧಿ ಒಳಗೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಡಿಎಚ್‌ಒ ಡಾ.ಮೋಹನ್ ಮಾತನಾಡಿ, ಕಳೆದ ಬಾರಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮದಲ್ಲಿ 1,27, 563 ಮಕ್ಕಳಿಗೆ ಲಸಿಕೆ ನೀಡಿ ಶೇ 106.35 ಸಾಧನೆ ಮಾಡಲಾಗಿದೆ ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿ ಎಂ.ಬಾಬು, ನಿವೃತ್ತ ಆರೋಗ್ಯಾಧಿಕಾರಿ ಡಾ.ಮರೀಗೌಡ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಸೋಮಶೇಖರ್, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಎಂ.ಎನ್. ಆಶಾಲತಾ, ಮಲೇರಿಯಾ ನಿಯಂತ್ರಣ ಅಧಿಕಾರಿ ಡಾ.ಕಾಂತರಾಜು, ಆರ್‌ಸಿಹೆಚ್‌ಒ ಡಾ.ಅನಿಲ್‌ಕುಮಾರ್, ದಂತ ವೈದ್ಯಾಧಿಕಾರಿ ಡಾ.ಅರುಣಾನಂದ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಉಪಾಧ್ಯಕ್ಷೆ ಮೀರಾ ಶಿವಲಿಂಗಯ್ಯ ಉಪಸ್ಥಿತರಿದ್ದರು.

ಚಂದ್ರವನದಲ್ಲಿ 'ಚಂದ್ರವನ ಸಿರಿ' ಪ್ರಶಸ್ತಿ ಸ್ವೀಕರಿಸಿದ ಮಾಜಿ ಸಿಎಂ ಎಸ್.ಎಂ.ಕೃಷ್ಣ

ಶ್ರೀರಂಗಪಟ್ಟಣ, ಫೆ.7– ಮಾಜಿ ರಾಜ್ಯಪಾಲರು ಹಾಗೂ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಪಟ್ಟಣ ಹೊರವಲಯದ ಚಂದ್ರವನ ಆಶ್ರಮಕ್ಕೆ ಆಗಮಿಸಿ ಚಂದ್ರವನ ಸಿರಿ ಪ್ರಶಸ್ತಿ ಸ್ವೀಕರಿಸಿದರು.

ಆಶ್ರಮದ ಪೀಠಾಧಿಪತಿ ತ್ರಿನೇತ್ರ ಮಹಂತ ಶಿವಯೋಗಿಸ್ವಾಮೀಜಿ ಎಸ್.ಎಂ.ಕೃಷ್ಣ ಅವರಿಗೆ ಪ್ರಶಸ್ತಿ ನೀಡಿ ಮಾತನಾಡಿ, ನಮ್ಮ 25ನೇ ವರ್ಷದ ಪಟ್ಟಾಧಿಕಾರದ ಸಮಾರೋಪ ಸಮಾರಂಭಕ್ಕೆ ಈ ರಾಜಕೀಯ ದಿಗ್ಗಜರನ್ನು ಕರೆಸಬೇಕೆಂಬ ಆಶಯವನ್ನು ಹೊಂದಿದ್ದು, ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮಕ್ಕೆ ಬರಲಾಗದೇ, ಎಸ್.ಎಂ.ಕೃಷ್ಣ ಅವರು ಇಂದು ಆಶ್ರಮಕ್ಕೆ ಆಗಮಿಸಿದ್ದು ತಮಗೆ ಬಹಳ ಸಂತೋಷವಾಗಿದೆ ಎಂದರು.

ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ವೇಳೆ ಬರಗಾಲದಲ್ಲೂ ಎಂದೂ ವಿಚಲಿತರಾಗದೇ ಶಾಂತಚಿತ್ತ ಸಮಾಧಾನದಿಂದ ಎಲ್ಲರಿಗೂ ಉತ್ತರ ಕೊಡುತ್ತಿದ್ದರು. ಅನೇಕ ಸವಾಲುಗಳನ್ನು ಜಾಣ್ಮೆಯಿಂದ ಎದುರಿಸಿದರು. ಈ ಕಾರ್ಯಕ್ರಮಕ್ಕೆ ಆಗಮಿಸಿದ ಇವರು ಶತಾಯುಷಿಗಳಾಗಲೆನ್ನುವುದೇ ನಮ್ಮ ಹಾರೈಕೆ ಎಂದರು.

ಎಸ್.ಎಂ.ಕೃಷ್ಣ ಮಾತನಾಡಿ, ನಾವು ಅಂದು ಸಮಾರೋಪ ಸಮಾರಂಭಕ್ಕೆ ಅಗಮಿಸಲು



ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಚಂದ್ರವನ ಆಶ್ರಮದಲ್ಲಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿಯಿಂದ 'ಚಂದ್ರವನ ಸಿರಿ' ಪ್ರಶಸ್ತಿ ಸ್ವೀಕರಿಸಿದರು.

ಸಾಧ್ಯವಾಗಲಿಲ್ಲ. ಆದ್ದರಿಂದ ಎಲ್ಲಾ ಪೂಜ್ಯರುಗಳಲ್ಲಿ ಕ್ಷಮೆ ಕೋರುತ್ತೇನೆ ಎಂದರು.

ಹಿರಿಯ ಶ್ರೀಗಳಿಂದಾಗಿ ಆಶ್ರಮ ಸ್ಫೂರ್ತಿದಾಯಕವಾಗಿ ಬೆಳವಣಿಗೆಯಾಗಿದೆ ವಿಶ್ವವ್ಯಾಪಿಯಾದ ಯೋಗಾಸನವನ್ನು ತಾವೂ ಕೂಡ ಹಿಂದೆ ಮಾಡುತ್ತಿದ್ದು ಇಂದು ಆರಾಮದಾಯಕವಾದ ಜೀವನವನ್ನು ನೀಡಿದ್ದರಿಂದ, ಇಂದಿನ ಯುವ ಪೀಳಿಗೆಯು ಯೋಗದ ಬಗ್ಗೆ ತಿಳಿದುಕೊಂಡು ಅವರೆಲ್ಲರೂ ಯೋಗವನ್ನು ಮಾಡಬೇಕು ಎಂದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಎಸ್.ಎಂ.ಕೃಷ್ಣರವರು ಶ್ರೀಮಠದ ಬಗೆಗಿನ ಅಂತರಾಳದ ಮಾತನ್ನು ಹೇಳಿದ್ದಾರೆ. ಮುತ್ಸದ್ಧಿ ರಾಜಕಾರಣಿಗಳಾದ ಇವರು ಚಂದ್ರವನ ಆಶ್ರಮಕ್ಕೆ ಆಗಮಿಸಿದ್ದು ಎಲ್ಲ ಭಕ್ತಾದಿಗಳಿಗೆ ಬಹಳ ಸಂತೋಷವಾಗಿದೆ ಎಂದರು.

ಬಿಜೆಪಿ ಮುಖಂಡ ಇಂಡವಾಳು ಎಸ್. ಸಚ್ಚಿದಾನಂದ, ಅರವಿಂದ್.ಎಸ್.ಸಿ., ಟಿ.ಪಿ. ಶಿವಕುಮಾರ್, ಇಂಜಿನಿಯರ್ ನಾಗೇಶ್, ನಾಗಣ್ಣ, ಕೃಷ್ಣಪ್ಪ, ಮುಕುಂದ ಇತರರಿದ್ದರು.

ಗರ್ಭಿಣಿಯರು, ಬಾಣಂತಿಯರ ಪ್ರತಿಭಟನೆ



ಗರ್ಭಿಣಿ, ಬಾಣಂತಿಯರು, ಪೋಷಕರು ಪ್ರತಿಭಟನೆ ನಡೆಸಿದರು.

ಪಾಂಡವಪುರ: ಪಟ್ಟಣದ ಕೃಷ್ಣಾನಗರದಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಹಾಗೂ ಗರ್ಭಿಣಿ, ಬಾಣಂತಿಯರಿಗೆ ಆಹಾರ ಹಾಗೂ ಫುಡ್‌ಕಿಟ್‌ಗಳನ್ನು ಸರಿಯಾಗಿ ವಿತರಿಸುತ್ತಿಲ್ಲ ಎಂದು ಆರೋಪಿಸಿ ಗರ್ಭಿಣಿಯರು, ಬಾಣಂತಿಯರು, ಪೋಷಕರು ಬುಧವಾರ ಪ್ರತಿಭಟನೆ ನಡೆಸಿದರು.

ಕೃಷ್ಣಾನಗರದಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಜಮಾಯಿಸಿದ ಪೋಷಕರು, ಗರ್ಭಿಣಿಯರು, ಬಾಣಂತಿಯರು ಅಂಗನವಾಡಿ ಕಾರ್ಯಕರ್ತೆ ಮೋಕ್ಷ ಅವರನ್ನು ತರಾಟೆಗೆ ತೆಗೆದುಕೊಂಡರು. ಕೇಂದ್ರದಲ್ಲಿ ಮಕ್ಕಳಿಗೆ ಇರಬೇಕಾದ ಯಾವುದೇ ಮೂಲಸೌಕರ್ಯಗಳು ಇಲ್ಲ. ಮಕ್ಕಳು ಬಳಕೆ ಮಾಡುವ ನೀರು ಕಲುಷಿತಗೊಂಡಿದೆ, ನೀರಿನ ಟ್ಯಾಂಕ್‌ನಲ್ಲಿ ಕಸ ತುಂಬಿಕೊಂಡು ಕಲುಷಿತಗೊಂಡಿದ್ದರೂ ಇಲ್ಲಿ ಕಾರ್ಯಕರ್ತೆ, ಸಹಾಯಕಿ ಸ್ವಚ್ಛಗೊಳಿಸಿಲ್ಲ. ಮಕ್ಕಳು ಇಂತಹ ಕಲುಷಿತ ನೀರನ್ನೇ ಬಳಕೆ ಮಾಡಿ ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ ಎಂದು ಕಿಡಿಕಾರಿದರು.

ಒಂದು ವೇಳೆ ಈ ತಿಂಗಳ ಫುಡ್ ಪಡೆದುಕೊಳ್ಳದೆ ಹೋದರೆ ಮುಂದಿನ ತಿಂಗಳಿಗೆ ಆ ಫುಡ್ ಅನ್ನು ನಮಗೆ ಕೊಡೋದಿಲ್ಲ. ಅಂಗನವಾಡಿ ಮಕ್ಕಳಿಗೆ ನವೆಂಬರ್ ತಿಂಗಳಿಂದಲೂ ಮೊಟ್ಟೆ ಕೊಟ್ಟಿಲ್ಲ. ಅಡುಗೆಗೆ ಬಳಕೆ ಮಾಡುವ ತರಕಾರಿಗಳು ಕೊಳೆತ ಸ್ಥಿತಿಯಲ್ಲಿರುತ್ತವೆ. ಅಂತಹ ಅಶುದ್ಧ ತರಕಾರಿಗಳನ್ನು ತಂದು ಮಕ್ಕಳಿಗೆ ಅಡುಗೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಪೋಷಕರಾದ ಅನಿತಾ, ಮಂಜುಳಾ, ರಾಣಿ, ಜಯಶ್ರೀ, ಆರತಿ, ಸೌಮ್ಯ, ಆಶಾ ಹಲವರು ಹಾಜರಿದ್ದರು.

ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಸಾಕಾರಗೊಳಿಸಿದ ಪ್ರಧಾನಿಗೆ ಪತ್ರ ಅಭಿಯಾನ

ಮಂಡ್ಯ,ಫೆ.7– ಕೋಟ್ಯಾಂತರ ಹಿಂದೂ ಭಕ್ತರ ಕನಸಾಗಿದ್ದ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಲೋಕಾರ್ಪಣೆ ಹಾಗೂ ಶ್ರೀ ರಾಮ ಚಂದ್ರ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಅತ್ಯಂತ ಯಶಸ್ವಿಯಾಗಿ ನಡೆದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರಮೋದಿ ಅವರಿಗೆ ಜಿಲ್ಲಾದ್ಯಂತ ಹಿಂದೂ ಭಕ್ತರು ಪತ್ರ ಅಭಿಯಾನ ಆರಂಭಿಸಿದ್ದಾರೆ.

ನಗರದ ಪ್ರಧಾನ ಅಂಚೆ ಕಚೇರಿ ಬಳಿ ಜಮಾಯಿಸಿದ ಹಿಂದೂ ಕಾರ್ಯಕರ್ತರು ಪ್ರಧಾನಮಂತ್ರಿಗೆ ಜಿಲ್ಲಾದ್ಯಂತ 10 ಸಾವಿರಕ್ಕೂ ಹೆಚ್ಚು ಪತ್ರಗಳನ್ನು ಬರೆಯುವ ಅಭಿಯಾನಕ್ಕೆ ಚಾಲನೆ ನೀಡಿದರು. ಹಿಂದೂ ಪರಿವಾರದ ಮುಖಂಡ ಸಿ.ಟಿ.ಮಂಜುನಾಥ್ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೋಟ್ಯಾಂತರ ಭಕ್ತರ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ಕನಸು ನನಸಾಗಿದೆ. ಹೋರಾಟ ಸಂಘರ್ಷಗಳಿಗೆ ಫಲ ಸಿಕ್ಕಿದೆ. ಶತಮಾನಗಳ ಕನಸು ನನಸಾಗಿದೆ ಎಂದು ಹೇಳಿದರು.

ತಮ್ಮ ದಕ್ಷ ನೇತೃತ್ವ ಬದ್ಧತೆ, ಸಕಾಲಿಕ ನಿರ್ಣಯಗಳೇ ಇಂಥ ಐತಿಹಾಸಿಕ ಯಶಸ್ಸಿಗೆ ಕಾರಣ, ಅದಕ್ಕಾಗಿ ತಮಗೆ ಅಭಿನಂದನೆಗಳು. ಇದೀಗ ಅಭಿಯಾನಕ್ಕೆ ಚಾಲನೆ ನೀಡಿದ್ದು, ಫೆ.14ರವರೆಗೂ ಅಭಿಯಾನ ಮುಂದುವರಿಯುತ್ತದೆ. ಸಮಾಜದ ಗಣ್ಯರು, ಮಠಾಧೀಶರು, ರಾಜ್ಯೋತ್ಸವ, ನಾಡೋಜ ಪುರಸ್ಕೃತರು, ಪದ್ಮಭೂಷಣ, ಪದ್ಮವಿಭೂಷಣ, ಖೇಲ್‌ರತ್ನ ವಿಜೇತರು ಎಲ್ಲರೂ ಕೂಡ ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದು, ಪ್ರಧಾನಿ ನರೇಂದ್ರಮೋದಿಯವರಿಗೆ ಪತ್ರ ಬರೆಯುವ ಮೂಲಕ ಸಾರ್ವಜನಿಕರು ಹಾಗೂ ಗಣ್ಯರು ಸೇರಿದಂತೆ ಸಮಸ್ತ ಭಾರತೀಯರು ಅವರ ಕೈ ಬಲಪಡಿಸಲು ಅವರಿಗೆ ಪ್ರೋತ್ಸಾಹ ನೀಡಲು ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಪ್ರಧಾನ ಕಾರ್ಯದರ್ಶಿ ವಿವೇಕ್, ಮುಖಂಡರಾದ ಹೊಸಹಳ್ಳಿ ಶಿವು, ಮಾದರಾಜ ಅರಸ್, ಶಿವಕುಮಾರ್, ಕೆಂಪಯ್ಯ, ಪ್ರಸನ್ನ ಕುಮಾರ್, ಮಹಾಂತಪ್ಪ, ಅಭಿಷೇಕ್, ನಂದೀಶ್, ಸುರೇಶ ಭಾಗವಹಿಸಿದ್ದರು.



ಮಂಡ್ಯದಲ್ಲಿ ಹಿಂದೂಪರ ಕಾರ್ಯಕರ್ತರು ಪತ್ರ ಅಭಿಯಾನ ನಡೆಸಿದರು.

ನಾಳೆ ಜಿಲ್ಲೆಯ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ, ಫೆ7– ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರ ಮತ್ತು ಕೋಲಕಾರನದೊಡ್ಡಿ ವಿದ್ಯುತ್ ವಿತರಣಾ ಕ್ರೇಂದ್ರಗಳಲ್ಲಿ ತ್ರೈಮಾಸಿಕ ಕಾರ್ಯ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ಫೆ.9 ರಂದು ಬೆಳಿಗ್ಗೆ 9 ರಿಂದ ಸಂಜೆ 6ರ ವರೆಗೆ ನಗರದ ಕೆಲವೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಕೊಲಕಾರನದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದ ತಗ್ಗಹಳ್ಳಿ, ಕೋಲಕಾರನದೊಡ್ಡಿ, ಹೆಮ್ಮಿಗೆ, ಸೂನಗನಹಳ್ಳಿ, ಪುರ, ಲೋಕಸರ, ಹಲುವಾಡಿ, ಕಮ್ನಾಯಕನಹಳ್ಳಿ, ಟಿ.ಮಲ್ಲಿಗೆರೆ, ಕಬ್ಬನಹಳ್ಳಿ, ತಿಮ್ಮನಹೊಸೂರು, ಬಿ. ಹೊಸೂರು, ಗೋಪನಹಳ್ಳಿ ಯಡಗನಹಳ್ಳಿ, ಮಾದರಹಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳು ಹಾಗೂ ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರದ ಕೆರಗೋಡು, ದೊಡ್ಡಗರುಡನಹಳ್ಳಿ, ಬಿಳಿದೇಗಲು, ಮುದಗಂದೂರು, ಮಾರಗೌಡನಹಳ್ಳಿ, ಬಿ.ಹೊಸೂರು, ಹಂಪಾಪುರ, ಕಲ್ಮಂಟಿದೊಡ್ಡಿ, ಸೌದೇನಹಳ್ಳಿ, ಬೆಟ್ಟಹಳ್ಳಿ, ಬೀಚನಹಳ್ಳಿ, ಪುರದಕೊಪ್ಪಲು, ಎಂ. ಹೊನ್ನೇನಹಳ್ಳಿ, ಬಿದರಕಟ್ಟೆ, ಬೆನ್ನಹಟ್ಟಿ, ಹನುಗನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಫೆ.16, ಸವಿತಾ ಮಹರ್ಷಿ ಜಯಂತಿ

ಮಂಡ್ಯ, ಫೆ.7– ಮಂಡ್ಯ ಜಿಲ್ಲಾಡಳಿತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಇವರ ಸಹಯೋಗದೊಂದಿಗೆ 2023–24ನೇ ಸಾಲಿನ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮವನ್ನು ಕರ್ನಾಟಕ ಸಂಘದಲ್ಲಿ ಫೆ.16 ರಂದು ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಕೃಷಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ವಿಧಾನಸಭಾ ಕ್ಷೇತ್ರದ ಶಾಸಕ ಪಿ. ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ ಅಂಬರೀಶ್, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಎಚ್.ಟಿ.ಮಂಜು, ಕೆ.ಎಂ.ಉದಯ್, ವಿಧಾನಪರಿಷತ್ ಸದಸ್ಯರದ ಮರಿತಿಬ್ಬೇಗೌಡ, ಮಧು ಜಿ. ಮಾದೇಗೌಡ, ದಿನೇಶ್ ಗೂಳಿಗೌಡ ಭಾಗಗಹಿಸಲಿದ್ದಾರೆ.

ಕರ್ನಾಟಕದ ಇಂದಿನ ದುಸ್ಥಿತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಣ

• ಲೋಕಸಭೆಯಲ್ಲಿ ಸಂಸದ ಪ್ರತಾಪ್ ಸಿಂಹ ವಾಗ್ದಾಳಿ • ಪ್ರಧಾನಿ ಮೋದಿ ರಾಜ್ಯಕ್ಕೆ ಕೇಳಿದ್ದೆಲ್ಲಾ ಕೊಡುವ ಕಾಮಧೇನು • ಸರಿಯಾದ ಆಡಳಿತ ನಡೆಸಲಾಗದೇ ವೈಫಲ್ಯಗಳಿಗೆಲ್ಲಾ ಕೇಂದ್ರದತ್ತ ಬೆರಳು ಮಾಡಿ ತೋರಿಸಲಾಗುತ್ತಿದೆ • ಸಂಸತ್‌ನಲ್ಲಿ ಕನ್ನಡದಲ್ಲೇ ಭಾಷಣ ಮಾಡಿದ ಪ್ರತಾಪ್ ಸಿಂಹ

ನವದೆಹಲಿ, ಫೆ.7–ಪ್ರಧಾನಿ ನರೇಂದ್ರ ಮೋದಿಯವರು ಕರ್ನಾಟಕಕ್ಕೆ ಕೇಳುವುದನ್ನೆಲ್ಲಾ ಕೊಡುವ ಕಾಮಧೇನುವಾದರೆ, ಇರುವುದನ್ನೆಲ್ಲಾ ಲೂಟಿ ಮಾಡಿ ರಾಜ್ಯವನ್ನು ಬರಿದು ಮಾಡುವ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿರುವುದೇ ಕರ್ನಾಟಕದ ಇಂದಿನ ದುಸ್ಥಿತಿಗೆ ಕಾರಣ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಸಂಸತ್‌ನಲ್ಲಿ ಗುಡುಗಿದರು.

ಸ್ಪೀಕರ್ ಸ್ಥಾನದಲ್ಲಿದ್ದ ಎನ್.ಕೆ.ಪ್ರೇಮಚಂದ್ರನ್ ಅವರು ಪ್ರತಾಪ್ ಸಿಂಹ ಅವರಿಗೆ ಬಜೆಟ್ ಮೇಲೆ ಮಾತನಾಡಲು ಅವಕಾಶ ನೀಡಿದಾಗ, ತಾವು ತಮ್ಮ ಮಾತೃಭಾಷೆ ಕನ್ನಡದಲ್ಲೇ ಮಾತನಾಡುವುದಾಗಿ ಹೇಳಿ, ಸುಮಾರು 13 ನಿಮಿಷಗಳ ಕಾಲ ಕನ್ನಡದಲ್ಲೇ ಮಾತನಾಡಿದ ಪ್ರತಾಪ್ ಸಿಂಹ, ಮೋದಿ ಪ್ರಧಾನಿಯಾದ ನಂತರ ಕರ್ನಾಟಕಕ್ಕೆ ನೀಡಿರುವ ಅನುದಾನ, ರಾಜ್ಯದ ಅಭಿವೃದ್ಧಿ, ಬರ ಪರಿಹಾರ ವಿತರಣೆ, ರಾಜ್ಯ ಕಾಂಗ್ರೆಸ್ ಸರ್ಕಾರದ ವೈಫಲ್ಯತೆ ಮುಂತಾದವುಗಳ ಬಗ್ಗೆ ಸುದೀರ್ಘವಾಗಿ ಮಾತನಾಡಿದರು.

ವಿಧಾನಸಭೆ ಚುನಾವಣೆಗೂ ಮುನ್ನ ಕಾಂಗ್ರೆಸ್ಸಿಗರು ಟೂರಿಂಗ್ ಟಾಕೀಸ್‌ನಂತೆ ಹಳ್ಳಿ–ಹಳ್ಳಿಗೂ ತೆರಳಿ ಶೇ.40ರಷ್ಟು ಕಮಿಷನ್, ಪಿಎಸ್‌ಐ ಹಗರಣ, ಬಿಟ್ ಕಾಯಿನ್ ಹಗರಣ ಎಂದೆಲ್ಲಾ ಬಿಜೆಪಿ ವಿರುದ್ಧ ಆರೋಪಗಳ ಸುರಿಮಳೆಗೈದು ಗೆದ್ದು ಬಂದರು. ರಾಜ್ಯದಲ್ಲಿ ಕಾಂಗ್ರೆಸ್‌ನೊಂದಿಗೆ ಬರ ಪರಿಸ್ಥಿತಿಯೂ ಕಾಲಿಟ್ಟು, ಎಲ್ಲಾ ಅಣೆಕಟ್ಟುಗಳು ಬರಿದಾಗುವ ಪರಿಸ್ಥಿತಿ ನಿರ್ಮಾಣವಾಯಿತು. 'ಸಂಕಷ್ಟಕ್ಕೆಲ್ಲಾ ಶನೇಶ್ವರನೇ ಕಾರಣ' ಎಂಬಂತೆ ಕಾಂಗ್ರೆಸ್‌ನವರು ಸರಿಯಾದ ರೀತಿಯಲ್ಲಿ ಸರ್ಕಾರ ನಡೆಸಲಾಗದಿದ್ದರೆ ಕೇಂದ್ರದ ಕಡೆ ಬೆರಳು ತೋರಿಸುತ್ತಿದ್ದಾರೆ. ರಾಜ್ಯದ ಬರ ಪರಿಸ್ಥಿತಿ ಹಾಗೂ ಅಣೆಕಟ್ಟುಗಳು ಬರಿದಾಗಿರುವ ಬಗ್ಗೆ ಸಿಡಬ್ಲ್ಯು ಎಂಆರ್‌ಸಿ ಮುಂದೆ ಸಮಸ್ಯೆಯನ್ನು ಸರಿಯಾಗಿ ಹೇಳಿ ನ್ಯಾಯ ಪಡೆಯುವ ಬದಲು ಅದಕ್ಕೂ ಕೂಡ ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಬೇಕು ಎಂದು ಕೇಂದ್ರವನ್ನು ಅವಲಂಬನೆ ಮಾಡಿದರು. ಇಂಡಿಯಾ ಮೈತ್ರಿಕೂಟ ಮಾಡಿಕೊಂಡು ಬೆಂಗಳೂರಿನಲ್ಲಿ ತಮಿಳುನಾಡು ಮುಖ್ಯಮಂತ್ರಿ ಸ್ಟ್ಯಾಲಿನ್ ಕೈ–ಕೈ ಹಿಡಿದವರು ಅವರಿಗೆ ಒಂದು ಫೋನ್ ಮಾಡಿ ಕರ್ನಾಟಕದ ಪರಿಸ್ಥಿತಿಯನ್ನು ಹೇಳಿ, ನೀರು ಬಿಡುವಂತೆ ಒತ್ತಾಯಿಸಬೇಡಿ ಎನ್ನುವ ಧೈರ್ಯ ಮಾಡಲಿಲ್ಲ. ಆದರೆ ಮಾತೆತ್ತಿದರೆ ಪ್ರಧಾನಿ ಮೋದಿ ಅವರನ್ನು ಸದಾ ಕಾಲ ಬೈಯ್ಯುವುದೇ ಕೆಲಸ ಮಾಡಿಕೊಂಡು ಬಂದಿದ್ದಾರೆ ಎಂದು ಆರೋಪಿಸಿದರು.

ಇಂದು ಕರ್ನಾಟಕಕ್ಕೆ ತೆರಿಗೆ ಹಂಚಿಕೆಯಲ್ಲಿ ತೊಂದರೆಯಾಗಿದೆ ಎಂದು ಜಂತರ್–ಮಂತರ್‌ಗೆ ಅವರ ಟೂರಿಂಗ್ ಟಾಕೀಸ್ ತಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಮೋದಿ ಪ್ರಧಾನಿಯಾಗುವ 2014ಕ್ಕೂ ಮುನ್ನ ಕರ್ನಾಟಕದಲ್ಲಿ 6760 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಇತ್ತು. ನಂತರದ 10 ವರ್ಷದಲ್ಲಿ 1 ಲಕ್ಷದ 16 ಸಾವಿರದ 444 ಕೋಟಿ ರೂ. ವೆಚ್ಚದಲ್ಲಿ 13,650 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲಾಗಿದೆ. ಬೆಂಗಳೂರಿನಲ್ಲಿ ಸ್ಯಾಟಲೈಟ್ ಟೌನ್, ರಿಂಗ್ ರಸ್ತೆ ಬರುತ್ತಿದೆ. ಸಬರ್ಬನ್ ಟ್ರೈನ್ ಕೊಡಲಾಗಿದೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ನಿರ್ಮಾಣ ಮಾಡಲಾಗಿದೆ. ಒಟ್ಟಾರೆ ಕರ್ನಾಟಕಕ್ಕೆ 1.50 ಲಕ್ಷ ಕೋಟಿ ರೂ. ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ ರೈಲ್ವೆ ಪ್ರಾಜೆಕ್ಟ್‌ಗಳು ಬಂದಿವೆ ಎಂದು ಹೇಳಿದರು.

2014ಕ್ಕೂ ಮುನ್ನ ಕರ್ನಾಟಕಕ್ಕೆ 800 ಕೋಟಿ ಬರುತ್ತಿತ್ತು ಆದರೆ ಕೇಂದ್ರದ ಒಂದೇ ಬಜೆಟ್‌ನಲ್ಲಿ 7 ಸಾವಿರ ಕೋಟಿ ರೂ. ಕೊಡಲಾಗಿದೆ. ಪ್ರತೀ ಬಜೆಟ್‌ನಲ್ಲೂ ಕರ್ನಾಟಕಕ್ಕೆ 5 ಸಾವಿರ ಕೋಟಿಗಿಂತ ಹೆಚ್ಚು ಹಣವನ್ನು ಕೊಡಲಾಗುತ್ತಿದೆ. ಮಹಾರಾಷ್ಟ್ರದಿಂದ 6.14 ಲಕ್ಷ ಕೋಟಿ ರೂ., ದೆಹಲಿಯಿಂದ 2.15 ಲಕ್ಷ ಕೋಟಿ, ಕರ್ನಾಟಕದಿಂದ 2.05 ಲಕ್ಷ ಕೋಟಿ ಹಾಗೂ ತಮಿಳುನಾಡಿನಿಂದ 1.06 ಲಕ್ಷ ಕೋಟಿ, ನೇರ ತೆರಿಗೆ ಕೇಂದ್ರಕ್ಕೆ ಬರುತ್ತಿದೆ. ಅದರಲ್ಲೂ ಮಹಾರಾಷ್ಟ್ರ ಮತ್ತು ದೆಹಲಿಯಿಂದ ಶೇ.50ರಷ್ಟು ನೇರ ತೆರಿಗೆ ಬರುತ್ತಿದೆ. ಆದರೆ ತೆರಿಗೆ ಹಂಚಿಕೆಯಲ್ಲಿ ಕೇಂದ್ರದಿಂದ ಅನ್ಯಾಯವಾಗಿದೆ ಎಂದು ಕರ್ನಾಟಕ ಸರ್ಕಾರ ಬಿಟ್ಟು ಬೇರೆ ಯಾರೂ ಹೇಳಿಲ್ಲ. 14 ಮತ್ತು 15ನೇ ಹಣಕಾಸು ಆಯೋಗದಲ್ಲಿ ಪ್ರತಿಯೊಂದು ರಾಜ್ಯದ ಪ್ರತಿನಿಧಿ ಹಾಗೂ ಮುಖ್ಯಮಂತ್ರಿ ಇರುತ್ತಾರೆ. ಅದರಂತೆ ಕರ್ನಾಟಕ ಮುಖ್ಯಮಂತ್ರಿಗಳ ನಿಯೋಗವೂ ಇತ್ತು. ಆಯೋಗದ ಸಭೆಯಲ್ಲಿ ತೆರಿಗೆ ಹಂಚಿಕೆ ಯಾವತ್ತೂ ತಕರಾರು ಎತ್ತದ ಇವರು, ಈಗ ಚುನಾವಣೆ ಬಂದಿದೆ ಎಂಬ ಕಾರಣಕ್ಕೆ ತಕರಾರು ಎತ್ತಿದ್ದಾರೆ ಎಂದು ಆರೋಪಿಸಿದರು.

ಟೂರಿಂಗ್ ಟಾಕೀಸ್: ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬಂದು 7 ತಿಂಗಳಾದರೂ ಯಾವುದೇ ಕೆಲಸವಾಗಿಲ್ಲ. ಬರೀ ಗ್ಯಾರಂಟಿ ಸ್ಕೀಂ ಎಂದು ಡಂಗೂರ ಹೊಡೆದುಕೊಂಡು ಟೂರಿಂಗ್ ಟಾಕೀಸ್‌ನಂತೆ ಸುತ್ತಿದ್ದ ಇವರಿಗೆ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ 28ಕ್ಕೆ 28 ಸ್ಥಾನವನ್ನು ಬಿಜೆಪಿ ಹಾಗೂ ಪ್ರಧಾನಿ ಮೋದಿಯವರಿಗೆ ಕರ್ನಾಟಕದ ಜನ ಕೊಡುತ್ತಾರೆ ಎಂದು ಗೊತ್ತಿದೆ. ಈ ಕಾರಣಕ್ಕಾಗಿಯೇ ಈಗ ಜಂತರ್–ಮಂತರ್‌ನಲ್ಲಿ ಬಂದು ಕುಳಿತಿದ್ದಾರೆ ಎಂದು ಹೇಳಿದರು. 2004 ರಿಂದ 14ರವರೆಗೆ ಕರ್ನಾಟಕಕ್ಕೆ 3,233 ಕೋಟಿ ರೂ ಎನ್‌ಡಿಆರ್‌ಎಫ್ ಫಂಡ್‌ನಿಂದ ಬಂದಿತ್ತು. ಆದರೆ ಮೋದಿಯವರು 11,603 ಕೋಟಿ ರೂ ನೀಡಿದ್ದಾರೆ ಈ ಬಾರಿ ರಾಜ್ಯ ಸರ್ಕಾರವು 34 ಸಾವಿರ ಕೋಟಿ ರೂ. ನಷ್ಟವಾಗಿದೆ ಎಂದು ಅಂದಾಜು ಮಾಡಿ 17 ಸಾವಿರ ಕೋಟಿ ರೂ. ಕೇಂದ್ರ ಸರ್ಕಾರ ಕೊಡಬೇಕು ಎಂದು ಪಟ್ಟಿ ಕಳುಹಿಸಿದೆ ಎಂದ ಪ್ರತಾಪ್ ಸಿಂಹ, ಎನ್‌ಡಿಆರ್‌ಎಫ್ ತಂಡ ಪರಿಶೀಲಿಸಿ ಹಣ ಕೊಡುವವರೆಗೂ ರಾಜ್ಯದ ಪಾಲಿನ 17 ಸಾವಿರ ಕೋಟಿ ರೂ. ರೈತರಿಗೆ ಕೊಡಬೇಕಿತ್ತು ಆದರೆ ಸಿದ್ದರಾಮಯ್ಯ ಸರ್ಕಾರ ಜ.7ರಂದು ಕೇವಲ 105 ಕೋಟಿ ರೂ. ಮಾತ್ರ ಬಿಡುಗಡೆ ಮಾಡಿದೆ ಎಂದು ಆರೋಪಿಸಿದರು. ಕೇಂದ್ರವು ಎಲ್ಲಾ ರಾಜ್ಯಗಳಿಗೂ ಏಕ ಕಾಲಕ್ಕೆ ಹಣ ಬಿಡುಗಡೆ ಮಾಡುತ್ತದೆ ಎಂಬುದು ಗೊತ್ತಿದ್ದರೂ ಕೂಡ ರಾಜಕಾರಣ ಮಾಡುವುದಕ್ಕಾಗಿ ಜಂತರ್–ಮಂತರ್‌ನಲ್ಲಿ ಬಂದು ಕುಳಿತ್ತಿದ್ದಾರೆ ಎಂದು ಕುಟುಕಿದರು.

ಮೇಕೆದಾಟುವಿನಲ್ಲಿ ಅಣೆಕಟ್ಟು ಕಟ್ಟಿ ಬೆಂಗಳೂರಿಗೆ ಕುಡಿಯುವ ನೀರು ಒದಗಿಸುವ ಯೋಜನೆ ನನೆಗುದಿಗೆ ಬಿದ್ದಿದೆ. ಈ ಯೋಜನೆಗೆ ತಮಿಳುನಾಡು ಸರ್ಕಾರ ತಡೆಯೊಡ್ಡಿದೆ. ತೊಂದರೆ ಕೊಡುತ್ತಿರುವುದು ಸ್ಟ್ಯಾಲಿನ್. ಆದರೆ ಸಿದ್ದರಾಮಯ್ಯ ಬಯ್ಯುತ್ತಿರುವುದು ಮೋದಿಜೀ ಅವರನ್ನು. ಸ್ಟ್ಯಾಲಿನ್‌ಗೆ ಫೋನ್ ಮಾಡಿ ತೊಂದರೆ ಕೊಡಬೇಡಿ ಎಂದು ಸಿದ್ದರಾಮಯ್ಯ ಹೇಳಬಹುದಿತ್ತು. ಆದರೆ ಅವರು ಹಾಗೆ ಮಾಡುತ್ತಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ರೂ. ಮಂಜೂರಾಗಿದೆ. ಅದಕ್ಕೆ ಡಿಪಿಆರ್ ಮಾಡಿ ಡ್ಯಾಂ ಎತ್ತರಿಸುವುದನ್ನು ಡಿಸೈನ್ ಮಾಡಿ ಜಲಶಕ್ತಿ ಸಚಿವರಿಂದ ಅನುಮತಿ ಪಡೆದು ಟೆಂಡರ್ ಕರೆದು ಏಜೆನ್ಸಿ ನಿಗದಿಪಡಿಸಿದ ಮೇಲೆ ಹಣ ಬಿಡುಗಡೆಯಾಗುತ್ತದೆ. ಆದರೆ ಕಮಿಷನ್ ಪಡೆಯಬೇಕೆಂಬ ಉದ್ದೇಶದಿಂದ ಇದ್ಯಾವುದೇ ಪ್ರಕ್ರಿಯೆಗಳು ನಡೆಯದಿದ್ದರೂ, ಕಾಂಗ್ರೆಸ್ಸಿಗರು ಹಣ ಬಿಡುಗಡೆ ಮಾಡಬೇಕು ಎಂದು ಕೇಳುತ್ತಿದ್ದಾರೆ.

1956ರಲ್ಲಿ ಜವಾಹರಲಾಲ್ ನೆಹರು ಅವರು ಫ್ರೀಟ್ ಈಕ್ವಲೈಸೇಷನ್ ಸಿಸ್ಟಂ ತಂದರು. ಕರ್ನಾಟಕದ ರಾಯಚೂರಿನಲ್ಲಿರುವ ವಿದ್ಯುತ್ ಸ್ಥಾವರಕ್ಕೆ ಬಿಹಾರ, ಜಾರ್ಖಂಡ್, ಒರಿಸ್ಸಾ ಮುಂತಾದೆಡೆಯಿಂದ ಕಲ್ಲಿದ್ದಲು ಬರುತ್ತದೆ. ಇದರಿಂದಾಗಿ ಉತ್ತರದಿಂದ ದಕ್ಷಿಣಕ್ಕೆ ಅನುಕೂಲವಾಗುತ್ತದೆ. ಆದರೆ ಇದು ಗೊತ್ತಿದ್ದರೂ ಕೂಡ ಕಾಂಗ್ರೆಸ್‌ನವರು ನೆಹರು ತಂದ ಪಾಲಿಸಿಯನ್ನು ಮರೆತು ದಕ್ಷಿಣದಿಂದ ಉತ್ತರಕ್ಕೆ ಲಾಭ ಎನ್ನುತ್ತಿದ್ದಾರೆ. 15ನೇ ಹಣಕಾಸು ಆಯೋಗದಲ್ಲಿ ಪ್ರತಿಯೊಂದು ರಾಜ್ಯದ ಜನಸಂಖ್ಯೆ, ಭೂ ವಿಸ್ತೀರ್ಣ ಮುಂತಾದವುಗಳ ಆಧಾರದ ಮೇಲೆ ಹಣ ಹಂಚಿಕೆ ಮಾಡಲಾಗುತ್ತದೆ ಎಂಬ ಜ್ಞಾನವಿದ್ದರೂ ಕೂಡ 14 ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಅವರು ಪ್ರತಿ ನಿತ್ಯ ಸುಳ್ಳು ಹೇಳುತ್ತಾ ಜನರ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಆರೋಪಿಸಿದರು.

ಇದಕ್ಕೂ ಮುನ್ನ ಪ್ರತಾಪ್ ಸಿಂಹ 'ಕರಾಗ್ರೇ ವಸತೇ ಲಕ್ಷ್ಮೀ ಕರ ಮಧ್ಯೆ ಸರಸ್ವತಿ, ಕರಮೂಲೇ ಸ್ಥಿತೇ ಗೌರೀ ಪ್ರಭಾತೇ ಕರ ದರ್ಶನಮ್' ಎಂಬ ಶ್ಲೋಕದ ಮೂಲಕ ತಮ್ಮ ಮಾತನ್ನು ಆರಂಭಿಸಿದರು. ದೇಶ ಸಮೃದ್ಧಿಯಾಗಿ ಬೆಳೆಯಬೇಕಾದರೆ, ಬಲಿಷ್ಠವಾಗಬೇಕಾದರೆ, ಲಕ್ಷ್ಮಿ, ಸರಸ್ವತಿ, ದುರ್ಗೆ ಮೂವರೂ ಪ್ರಮುಖರಾಗುತ್ತಾರೆ. ಪ್ರಧಾನಿ ಮೋದಿಯವರು 2014ರಲ್ಲಿ ಪ್ರಧಾನಿಯಾದ ನಂತರ ಈ ಮೂವರಿಗೂ ಸಮಾನವಾದ ಪ್ರಾಮುಖ್ಯತೆ ನೀಡಿ ದೇಶ ಮುನ್ನಡೆಸುತ್ತಿದ್ದಾರೆ. ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣದಲ್ಲಿ ದಾಖಲೆ ಪ್ರಮಾಣದ ಜಿಎಸ್‌ಟಿ ಸಂಗ್ರಹವಾಗುತ್ತಿದೆ ಎಂದು ಹೇಳಿದ್ದಾರೆ. ದೇಶದಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಹೊಂದಿದರೆ ತೆರಿಗೆ ಸಂಗ್ರಹ ಹೆಚ್ಚಾಗುತ್ತದೆ. ನಿತಿನ್ ಗಡ್ಕರಿ ನೇತೃತ್ವದಲ್ಲಿ ಪ್ರತಿಯೊಂದು ರಾಜ್ಯದಲ್ಲೂ ಸಾವಿರಾರು ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದೆ. ಇದರಿಂದ ಅಭಿವೃದ್ಧಿಗೆ ಪೂರಕವಾದ ವಾತಾವರಣ ಉಂಟಾಗಿ ಹೆಚ್ಚಿನ ಉದ್ಯೋಗ ಹಾಗೂ ಕೈಗಾರಿಕೆ ಸೃಷ್ಟಿಯಾಗಿದೆ. ಹೀಗಾಗಿ ತೆರಿಗೆ ರೂಪದಲ್ಲಿ ಲಕ್ಷ್ಮಿ ಒಲಿದು ಬಂದಿದ್ದಾಳೆ ಎಂದರು.

ಶಿಕ್ಷಣ ಕ್ಷೇತ್ರ ಆಮೂಲಾಗ್ರ ಬದಲಾವಣೆ


ಮೋದಿ ಬಂದ ನಂತರ 7 ಹೊಸ ಐಐಟಿ, 7 ಹೊಸ ಐಐಎಂ, 15 ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, 390 ವಿಶ್ವವಿದ್ಯಾಲಯಗಳು ಹಾಗೂ ಸ್ಕಿಲ್ ಡೆವಲಪ್‌ಮೆಂಟ್‌ಗೆ ವಿಶೇಷವಾಗಿ ಸಚಿವಾಲಯ ಸ್ಥಾಪನೆ ಮಾಡಿರುವುದಲ್ಲದೆ, ಹಳೇ ಶಿಕ್ಷಣ ನೀತಿಯಿಂದ ಜೀವನಕ್ಕೆ ಉಪಯೋಗವಾಗುವುದಿಲ್ಲ ಎಂಬುದನ್ನು ಮನಗಂಡು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ತರುವ ಮೂಲಕ ಆಮೂಲಾಗ್ರ ಬದಲಾವಣೆ ತಂದಿದ್ದಾರೆ ಎಂದು ಸರಸ್ವತಿ ಬಗ್ಗೆ ವಿವರಿಸಿದರು.

ದುರ್ಗೆ ಅಂದರೆ ಕೇವಲ ಮಿಲಿಟರಿ ಮೈಟ್ ಮಾತ್ರವಲ್ಲ ಎಂದ ಅವರು, 2014ಕ್ಕೂ ಮುನ್ನ ಯಾವಾಗಲೂ ಪಾಕಿಸ್ತಾನ್ ನಮಗೆ ಸಮಸ್ಯೆಯಾಗೇ ಇತ್ತು. ಆದರೆ ಈಗ ಪಾಕ್ ಬಿಕಾರಿಯಾಗುವ ಸ್ಥಿತಿ ತಲುಪಿದೆ. ಹೀಗಾಗಿ ನಮಗೆ ಪಾಕಿಸ್ತಾನದಿಂದ ಯಾವುದೇ ಬೆದರಿಕೆ ಇಲ್ಲ. ನಾವು ಚೈನಾದವರಿಗೂ ಸೆಡ್ಡು ಹೊಡೆದು ನಿಂತಿದ್ದೇವೆ. ಗಲ್ವಾನ್ ಆಗಲೀ, ತೊಕ್ಲಾನ್ ಇರಬಹುದು. ಪ್ರತಿಯೊಂದರಲ್ಲೂ ಚೈನಾವನ್ನು ಹಿಮ್ಮೆಟ್ಟಿ ಕಳುಹಿಸುವ ಮೂಲಕ ನಮ್ಮ ಶಕ್ತಿಯನ್ನು ತೋರಿಸಿದ್ದೇವೆ. ಮಿಲಿಟರಿ ಮೈಟ್ ಮಾತ್ರವಲ್ಲದೆ ಮೋದಿ ಬಂದ ನಂತರ ಜನರ ಶಕ್ತಿಯೂ ಹೆಚ್ಚಾಗಿದೆ. ಜಲ ಜೀವನ್ ಮಿಷನ್ ಮೂಲಕ ಪ್ರತಿಯೊಂದು ಗ್ರಾಮದಲ್ಲೂ ನಲ್ಲಿ ಮೂಲಕ ಕುಡಿಯುವ ನೀರು ದೊರೆಯುತ್ತಿದೆ. ಉಜ್ವಲ ಯೋಜನೆಯಡಿ 17 ಕೋಟಿ ಗ್ಯಾಸ್ ಸಂಪರ್ಕ ಕೊಡುವ ಮೂಲಕ ತಾಯಂದಿರಿಗೆ ಶಕ್ತಿ ಕೊಡಲಾಗಿದೆ. ದೇಶಾದ್ಯಂತ ಶೌಚಾಲಯ ಮತ್ತು ಮನೆಗಳನ್ನು ಕಟ್ಟುವ ಕೆಲಸ ನಡೆಯುತ್ತಿದೆ. 17ನೇ ಸಂಸತ್‌ನ ಕೊನೆಯ ಮಧ್ಯಂತರ ಬಜೆಟ್ ಅನ್ನು ನಿರ್ಮಲಾ ಸೀತಾರಾಮನ್ ಮಳೆಯ ರೀತಿಯಲ್ಲಿ ಮಂಡಿಸಿದ್ದಾರೆ. ಅವರ ಬಜೆಟ್ ದೇಶಕ್ಕೆ ಸರಿಯಾದ ದಿಕ್ಕನ್ನು ತೋರಿಸುವ ಬಜೆಟ್ ಆಗಿದೆ ಎಂದು ಶ್ಲಾಘಿಸಿದರು.

ಕ್ಷೇತ್ರಾಭಿವೃದ್ಧಿ ಬಗ್ಗೆ ಸಂಸದ ಪ್ರತಾಪ್ ಸಿಂಹರಿಂದ ಅಮಿತ್ ಶಾಗೆ ರಿಪೋರ್ಟ್ ಕಾರ್ಡ್ ಸಲ್ಲಿಕೆ

ಮೈಸೂರು,ಫೆ.7(ಪಿಎಂ)– ನವದೆಹಲಿಯಲ್ಲಿ ಬುಧವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ ಸಂಸದ ಪ್ರತಾಪ್ ಸಿಂಹ, ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡ ಅಭಿವೃದ್ಧಿ ಹಾಗೂ ಪ್ರಗತಿಯಲ್ಲಿರುವ ಅಭಿವೃದ್ಧಿ ಕಾರ್ಯಗಳ ವರದಿ ಒಳಗೊಂಡಿರುವ 'ರಿಪೋರ್ಟ್ ಕಾರ್ಡ್ (ಪ್ರಗತಿಯ ವರದಿ)' ಸಲ್ಲಿಸಿದರು.

2014ರಿಂದ ತಮ್ಮ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕೇಂದ್ರ ಗೃಹ ಸಚಿವರಿಗೆ ಸಂಸದ ಪ್ರತಾಪ್ ಸಿಂಹ ವಿವರಿಸಿದರು. ಆ ಭಾಗದ ಜನತೆಗೆ ಇದರಿಂದ ಪ್ರಯೋಜನವಾಗಿದೆ. ಇಡೀ ಕ್ಷೇತ್ರ ವ್ಯಾಪ್ತಿಯ ಜನಜೀವನದ ಬದುಕು ಸುಧಾರಣೆಗೆ ಈ ಅವಧಿಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಮಹತ್ವ ಕೊಡುಗೆಯಾಗಿವೆ. ಇಂತಹ ಕೆಲಸ ಕಾರ್ಯಗಳಿಂದ ಸದರಿ ಭಾಗದಲ್ಲಿ ಆರ್ಥಿಕ ಬೆಳವಣಿಗೆಗೆ ವೇಗ ದೊರೆತಿದೆ. ಇನ್ನು ಅನೇಕ ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿವೆ ಎಂದು ಸಂಸದರು ತಿಳಿಸಿದರು. ಇದೇ ವೇಳೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಉಪಸ್ಥಿತರಿದ್ದರು ಎಂದು ಸಂಸದರ ಕಚೇರಿ ಪ್ರಕಟಣೆ ತಿಳಿಸಿದೆ.



ಬ್ರ್ಯಾಂಡೆಡ್ ಕಂಪನಿ ಹೆಸರಿನಲ್ಲಿ ನಕಲಿ ಉತ್ಪನ್ನ ಮಾರಾಟ ; ಟೆಕ್ಸ್‌ಟೈಲ್ಸ್ ಮೇಲೆ ಸಿಸಿಬಿ ದಾಳಿ

ಮೈಸೂರು,ಫೆ.7(ಪಿಎಂ)– ಬ್ರ್ಯಾಂಡೆಡ್ ಕಂಪನಿಯೊಂದರ ಹೆಸರಿನಲ್ಲಿ ನಕಲಿ ಉತ್ಪನ್ನ ಮಾರಾಟ ಮಾಡುತ್ತಿದ್ದ ಟೆಕ್ಸ್‌ಟೈಲ್ಸ್ ಮೇಲೆ ದಾಳಿ ನಡೆಸಿದ ಸಿಸಿಬಿ ಪೊಲೀಸರು, ಲಕ್ಷ ರೂ. ಮೌಲ್ಯದ ಟವಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಫೆ.1ರಂದು ಬ್ರ್ಯಾಂಡೆಡ್ ಕಂಪನಿಯೊಂದರ ಹೆಸರಿನಲ್ಲಿ ನಕಲಿ ಉತ್ಪನ್ನ ಮಾರಾಟ ಮಾಡುತ್ತಿರುವ ಬಗ್ಗೆ ಕಂಪನಿಯ ಅಧಿಕಾರಿಗಳು ನೀಡಿದ ಮಾಹಿತಿ ಮೇರೆಗೆ ಮಂಡಿ ಪೊಲೀಸ್ ಠಾಣಾ ವ್ಯಾಪ್ತಿಯ ಮಯೂರ್ ಟೆಕ್ಸ್‌ಟೈಲ್ ಮೇಲೆ ದಾಳಿ ನಡೆಸಲಾಯಿತು.

ಈ ವೇಳೆ ಬ್ರ್ಯಾಂಡೆಡ್ ಕಂಪನಿಯ (ವೆಲ್‌ಸ್ಪನ್ ಗ್ಲೋಬಲ್ ಬ್ರ್ಯಾಂಡ್ಸ್ ಲಿಮಿಡೆಡ್) ಹಕ್ಕು ಸ್ವಾಮ್ಯತೆಯನ್ನು ಉಲ್ಲಂಘಿಸಿ ಸಾರ್ವಜನಿಕರಿಗೆ ಮಾರಾಟ ಮಾಡಲು ಅಕ್ರಮವಾಗಿ ದಾಸ್ತಾನು ಮಾಡಿದ್ದ ಲಕ್ಷ ರೂ. ಬೆಲೆಬಾಳುವ 210 ನಕಲಿ ಟವಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಬಗ್ಗೆ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಫೆ.22, ಯುವ ಸಂಪರ್ಕ ಸಭೆ

ಮಂಡ್ಯ, ಫೆ.7– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ ಹಾಗೂ ಕೌಶಲ್ಯ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಫೆ.22 ರಂದು ಯುವ ಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲೆಯಲ್ಲಿರುವ ಆಸಕ್ತ ಯುವಜನರಿಗೆ ಇಲಾಖೆಯ ಯೋಜನೆಗಳು, ಯುವ ಸಂಘಗಳ ರಚನೆ ಹಾಗೂ ನಿರ್ವಹಣೆ ಕುರಿತು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ನೀಡಲಾಗುವುದು. ಸರ್ಕಾರದಿಂದ ನೋಂದಣಿ ಆಗಿರುವ 15 ರಿಂದ 29 ವರ್ಷದೊಳಗಿನ ಯುವಕ–ಯುವತಿಯರ ಸಂಘಗಳು ಹಾಗೂ ಜಿಲ್ಲೆಯಲ್ಲಿರುವ ಆಸಕ್ತ ಯುವಕ, ಯುವತಿಯರು ತಮ್ಮ ಹೆಸರುಗಳನ್ನು ಫೆ.19ರೊಳಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯನ್ನು ಖುದ್ದಾಗಿ ಅಥವಾ ಭರತ್‌ರಾಜ್ ಸಿ.ಬಿ. ಮೊ: 9916644007 ಮತ್ತು ಹೇಮಂತ್ ಕುಮಾರ್ ಮೊ: 88678 26416 ಅನ್ನು ದೂರವಾಣಿ ಮೂಲಕ ಸಂಪರ್ಕಿಸಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದಾಗಿದೆ.

ಸಾರ್ವತ್ರಿಕ ಚುನಾವಣೆಗೂ ಮುನ್ನ ಬಲೂಚಿಸ್ತಾನದಲ್ಲಿ ಸ್ಫೋಟ: 25ಕ್ಕೂ ಅಧಿಕ ಮಂದಿ ಸಾವು

ನವದೆಹಲಿ: ಪಾಕಿಸ್ತಾನದ ಸಾರ್ವತ್ರಿಕ ಚುನಾವಣೆಗೂ ಒಂದು ದಿನ ಮುನ್ನ ಬಲೂಚಿಸ್ಥಾನದ ಪ್ರಾಂತ್ಯದಲ್ಲಿ ಎರಡು ಬಾಂಬ್ ಸ್ಫೋಟ ಸಂಭವಿಸಿದ್ದು, 25 ಮಂದಿ ಸಾವನ್ನಪ್ಪಿದ್ದಾರೆ. ಪಿಶಿನ್ ಜಿಲ್ಲೆಯಲ್ಲಿ ಪಕ್ಷೇತರ ಅಭ್ಯರ್ಥಿ ಕಚೇರಿ ಎದುರು ಮೊದಲ ಸ್ಫೋಟ ಸಂಭವಿಸಿದ್ದು 17 ಮಂದಿ ಸಾವನ್ನಪ್ಪಿದ್ದರು. ಇದಾದ ಕೆಲವೇ ಗಂಟೆಗಳಲ್ಲಿ ಮತ್ತೊಂದು ಸ್ಫೋಟ ಸಂಭವಿಸಿದ್ದು, ಖಿಲ್ಲಾ ಸೈಫ್ ಉಲ್ಲಾಹ್ ಜಿಲ್ಲೆಯಲ್ಲಿ 8 ಮಂದಿ ಸಾವನ್ನಪ್ಪಿದ್ದಾರೆ. 2 ಸ್ಫೋಟಗಳಲ್ಲಿ ಹಲವು ಮಂದಿ ಗಾಯಗೊಂಡಿದ್ದಾರೆ.

ಹಿರಿಯ ಪೊಲೀಸ್ ಅಧಿಕಾರಿ ಅಬ್ದುಲ್ಲಾ ಝುಫ್ರಿ ಮಾತನಾಡಿ, ಪಕ್ಷೇತರ ಅಭ್ಯರ್ಥಿ ಅಸ್ಫಂದ್ಯರ್ ಖಾನ್ ಕಾಕರ್ ನಿವಾಸದ ಎದುರು ಬ್ಯಾಗ್ ನಲ್ಲಿ ಬಾಂಬ್ ಇಟ್ಟು ಸ್ಫೋಟಿಸಲಾಗಿದೆ. 5 ಮಂದಿ ಸ್ಥಿತಿ ಗಂಭೀರವಾಗಿದೆ ಎಂದು ತಿಳಿಸಿದ್ದಾರೆ.

ಒಂದನೇ ಪುಟದಿಂದ

ಕಾಂಗ್ರೆಸ್ ದೇಶ ವಿಭಜಿಸುವ ಯತ್ನ

ಮಾಡುತ್ತಿದೆ. ದೇಶ ಎದುರಿಸುತ್ತಿದ್ದ ಸಮಸ್ಯೆಗಳ ಬಗ್ಗೆ ಕಾಂಗ್ರೆಸ್‌ಗೆ ಅರಿವು ಇತ್ತು. ಆದರೆ ಅದನ್ನು ಬಗೆಹರಿಸುವುದಕ್ಕೆ ಏನನ್ನೂ ಮಾಡಲಿಲ್ಲ ಎಂದು ಮೋದಿ ಆರೋಪಿ ಸಿದ್ದಾರೆ. ನಾನು ರಾಜ್ಯಸಭೆ, ಲೋಕಸಭೆಯಲ್ಲಿ ಅವರ ಮಾತು ಕೇಳಿದಾಗಲೆಲ್ಲಾ, ಕಾಂಗ್ರೆಸ್ ಹಾಗೂ ಅವರ ಚಿಂತನೆಗಳು ಅಪ್ರಸ್ತುತವಾಗಿದೆ ಎಂಬ ನನ್ನ ನಂಬಿಕೆ ಬಲಿಷ್ಠವಾಗುವುದು ಮುಂದುವರೆದಿದೆ. ಚಿಂತನೆಗಳು ಅಪ್ರಸ್ತುತ ವಾದಂತೆ ಅವರು ತಮ್ಮ ಕೆಲಸವನ್ನು ಹೊರಗುತ್ತಿಗೆ ನೀಡಿದ್ದಾರೆ. ಇಷ್ಟು ದೊಡ್ಡ ಪಕ್ಷ, ದೇಶವನ್ನು ದಶಕಗಳ ಕಾಲ ಆಳಿದ್ದ ಕಾಂಗ್ರೆಸ್ ಪಕ್ಷ ಇಂದು ಕುಸಿದಿದೆ. ಇದರಿಂದ ನಮಗೆ ಸಂತೋಷವಾಗಿಲ್ಲ. ನಮಗೆ ಸಹಾನುಭೂತಿ ಇದೆ, ರೋಗಿಯೇ ಸುಧಾರಣೆ ಬಯಸದೇ ಇದ್ದಾಗ ವೈದ್ಯರೇನು ಮಾಡಲು ಸಾಧ್ಯ ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ 40 ಸ್ಥಾನಗಳಾದರೂ ಬರಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಪ್ರಧಾನಿ ಕಾಂಗ್ರೆಸ್ ಬಗ್ಗೆ ವ್ಯಂಗ್ಯವಾಡಿದ್ದಾರೆ.

ಕಾಂಗ್ರೆಸ್ ತನ್ನ ಕುಟುಂಬಕ್ಕೆ ಮಾತ್ರ 'ಭಾರತ ರತ್ನ' ನೀಡಿತ್ತು: ಕಾಂಗ್ರೆಸ್ ಸರ್ಕಾರ ನೀತಿ ಪಾರ್ಶ್ವವಾಯುವಿಗೆ ಹೆಸರುವಾಸಿಯಾಗಿತ್ತು ಎಂದು ಆರೋಪಿ ಸಿರುವ ಪ್ರಧಾನಿ ಮೋದಿ, ಕಾಂಗ್ರೆಸ್ ಅವಧಿಯಲ್ಲಿ ಭಾರತದ ಆರ್ಥಿಕತೆಯು ದುರ್ಬಲವಾಗಿತ್ತು ಎಂದು ದೋಷಾ ರೋಪಣೆ ಮಾಡಿದ್ದಾರೆ.

ಕಾಂಗ್ರೆಸ್ ಅವಧಿಯ 10 ವರ್ಷದ ಆಡಳಿತಕ್ಕೂ ತಮ್ಮ ಅವಧಿಯ 10 ವರ್ಷದ ಆಡಳಿತಕ್ಕೂ ಹೋಲಿಕೆ ಮಾಡಿರುವ ಪ್ರಧಾನಿ ಮೋದಿ, ನಮ್ಮ 10 ವರ್ಷಗಳ ಆಡಳಿತಾವಧಿಯನ್ನು ದೊಡ್ಡ ಹಾಗೂ ದೃಢ ನಿರ್ಧಾರಗಳಿಗಾಗಿ ನೆನಪಿಸಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ.

ಅಧಿಕಾರದ ದಾಹ ಹೊಂದಿದ್ದ ಕಾಂಗ್ರೆಸ್, ಬಹಿರಂಗವಾಗಿ ಪ್ರಜಾಪ್ರಭುತ್ವದ ಕತ್ತು ಹಿಸುಕಿತ್ತು, ರಾತ್ರೋರಾತ್ರಿ ಪ್ರಜಾಸತ್ತಾತ್ಮಕ ವಾಗಿ ಚುನಾಯಿತ ಸರ್ಕಾರಗಳನ್ನು ಕಾಂಗ್ರೆಸ್ ವಿಸರ್ಜಿಸಿತ್ತು. ಅಷ್ಟೇ ಅಲ್ಲದೇ ಸಂವಿಧಾನದ ಶಿಷ್ಟಾಚಾರಗಳನ್ನು ಜೈಲಿಗೆ ಹಾಕಿತ್ತು. ಪತ್ರಿಕೆಗಳಿಗೆ ಬೀಗ ಹಾಕಲು ಯತ್ನಿಸಿತ್ತು.

ಕಾಂಗ್ರೆಸ್ ಒಬಿಸಿಗೆ ಯಾವತ್ತೂ ಸಂಪೂರ್ಣ ಮೀಸಲಾತಿ ನೀಡಲಿಲ್ಲ, ಸಾಮಾನ್ಯ ವರ್ಗದ ಬಡವರಿಗೆ ಮೀಸಲಾತಿ ನೀಡದ ಕಾಂಗ್ರೆಸ್, ಬಾಬಾ ಸಾಹೇಬರನ್ನು ಭಾರತ ರತ್ನಕ್ಕೆ ಅರ್ಹರೆಂದು ಎಂದಿಗೂ ಪರಿಗಣಿಸಲಿಲ್ಲ. ತಮ್ಮ ಕುಟುಂಬಕ್ಕೆ ಮಾತ್ರ ಭಾರತ ರತ್ನ ನೀಡುತ್ತಲೇ ಬಂದಿತ್ತು. ಇಂತಹ ಕಾಂಗ್ರೆಸ್ ಈಗ ನಮಗೆ ಸಾಮಾಜಿಕ ನ್ಯಾಯದ ಬಗ್ಗೆ ಪಾಠ ಹೇಳಿಕೊಡುತ್ತಿದ್ದಾರೆ. ನಾಯಕರಾಗಿ ಯಾವುದೇ ಗ್ಯಾರಂಟಿ ಇಲ್ಲದವರು ಮೋದಿಯವರ ಖಾತರಿಯ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ ಎಂದು ಮೋದಿ ಕಾಂಗ್ರೆಸ್ ವಿರುದ್ಧ ಟೀಕಾ ಪ್ರಹಾರ ನಡೆಸಿದರು.

ಕಾಂಗ್ರೆಸ್ ಒಬಿಸಿ ವಿರೋಧಿ: ಕಾಂಗ್ರೆಸ್ ಯಾವಾಗಲೂ ದಲಿತರು, ಹಿಂದುಳಿದವರು, ಬುಡಕಟ್ಟು ಜನಾಂಗದವರ ವಿರುದ್ಧವಾಗಿದೆ ಎಂದು ಆರೋಪಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಈ ಸಂಬಂಧ ಮುಖ್ಯಮಂತ್ರಿಗಳಿಗೆ ಜವಾಹರಲಾಲ್ ನೆಹರು ಬರೆದಿದ್ದ ಪತ್ರವನ್ನು ಉಲ್ಲೇಖಿಸಿದರು. 1961ರ ಜೂನ್ 27, ರಂದು ಜವಾಹರಲಾಲ್ ನೆಹರು ಅವರು ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ 'ಹಿಂದುಳಿದ ವರ್ಗಗಳಿಗೆ ಉತ್ತಮ ಶಿಕ್ಷಣವನ್ನು ನೀಡುವ ಮೂಲಕ ಅವರನ್ನು ಸಬಲೀಕರಣಗೊಳಿಸಬೇಕಾಗಿದೆ, ಆದರೆ, ಜಾತಿ ಆಧಾರಿತ ಉದ್ಯೋಗಗಳನ್ನು ಮೀಸಲಿಡುವ ಮೂಲಕ ಅಲ್ಲ' ಎಂದು ಬರೆದಿರುವುದನ್ನು ಮೋದಿ ಓದಿದರು.

ಕಾಂಗ್ರೆಸ್ ಬ್ರಿಟಿಷ್ ನೆರಳಿನಲ್ಲೇ ಆಡಳಿತ ನಡೆಸಿತು. ಗುಲಾಮಿ ಮಾನಸಿಕತೆಯಿಂದ ಹೊರಬರುವ ಪ್ರಯತ್ನ ಮಾಡಲೇ ಇಲ್ಲ ಎಂದ ಮೋದಿ, ಬ್ರಿಟಿಷರಿಂದ ನೀವು ಪ್ರಭಾವಿತರಾಗಿಲ್ಲದಿದ್ದರೆ ಇದುವರೆಗೆ ಬ್ರಿಟಿಷರು ಮಾಡಿದ ಕಾನೂನಿನಲ್ಲೇ ದೇಶ ಮುನ್ನಡೆಸಿದ್ದೇಕೆ? ನೀವು ಬ್ರಿಟಿಷರಿಂದ ಪ್ರಭಾವಿತರಾಗಿದ್ದರೆ, ವಾಹನಗಳಲ್ಲಿ ಕೆಂಪು ಗೂಟದ ಲೈಟ್ ನಿಲ್ಲಿಸಲಿಲ್ಲ ಯಾಕೆ? ರಾಜಪಥವನ್ನು ಕರ್ತವ್ಯಪಥ ಮಾಡಲು ಇಷ್ಟು ವರ್ಷ ಬೇಕಾಯಿತೆ? ನೀವು ಬ್ರಿಟಿಷರಿಂದ ಪ್ರಭಾವಿತರಾಗಿಲ್ಲ ಎಂದಾದರೆ, ಅಂಡಮಾನ್ ನಿಕೋಬಾರ್‌ನಲ್ಲಿ ಬ್ರಿಟಿಷರ ಧ್ವಜ ಯಾಕೆ ಇಡಲಾಗಿತ್ತು. ಭಾರತ 'ಮದರ್ ಆಫ್ ಡೆಮಾಕ್ರಸಿ' ಎಂದೇ ಗುರುತಿಸಿಕೊಂಡಿದೆ. ಆದರೆ ಇದನ್ನು ಜಗತ್ತಿಗೆ ಹೇಳಲು ನಿಮ್ಮನ್ನು ತಡೆದವರು ಯಾರು? ಎಂದು ಕಾಂಗ್ರೆಸ್ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ನೇರ ವಾಗ್ದಾಳಿ ನಡೆಸಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 40 ಸ್ಥಾನಗಳನ್ನು ದಾಟುವುದಿಲ್ಲ ಎಂಬ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರ ಇತ್ತೀಚಿನ ಹೇಳಿಕೆಯನ್ನು ಉಲ್ಲೇಖಿಸಿದ ಮೋದಿ ನೀವು 40 ಸ್ಥಾನಗಳನ್ನು ನಿಮ್ಮೊಂದಿಗೆ ಇಟ್ಟುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ ಎಂದರು. ಮಲ್ಲಿಕಾರ್ಜುನ ಖರ್ಗೆ ಅವರ '400 ಪಾರ್' ಹೇಳಿಕೆಗೆ ವ್ಯಂಗ್ಯವಾಡಿದ ಅವರು ಖರ್ಗೆ ಭಾಷಣವನ್ನು ಕೇಳುತ್ತಿದ್ದಂತೆ ನನಗೆ ಅವರಿಗೆ ಇಷ್ಟು ಮಾತನಾಡುವ ಸ್ವಾತಂತ್ರ್ಯ ಹೇಗೆ ಸಿಕ್ಕಿತು? ಎಂದು ಆಶ್ಚರ್ಯವಾಯಿತು. ಆಗ ಆ ಇಬ್ಬರು ಕಮಾಂಡರ್‌ಗಳು ಇಲ್ಲದಿರುವುದನ್ನು ನಾನು ಗಮನಿಸಿದೆ. ಖರ್ಗೆಜೀ ಅವರು ಐಸಾ ಮೌಕಾ ಫಿರ್ ಕಹಾನ್ ಮಿಲೇಗಾ (ಅಂತಹ ಅವಕಾಶ ಯಾವಾಗ ಬರುತ್ತದೆ) ಎಂದು ಯೋಚಿಸಿದರು. ಸಮಯ ಸಿಕ್ಕಾಗ ಬೌಂಡರಿ ಮತ್ತು ಸಿಕ್ಸರ್‌ಗಳನ್ನು ಬಾರಿಸಿದರು ಎಂದು ಮೋದಿ ವ್ಯಂಗ್ಯವಾಡಿದರು.

ಒಂದು ಪೈಸೆ ಬಾಕಿ ಉಳಿಸಿಕೊಂಡಿಲ್ಲ

ಭಾಷೆ ದೇಶವನ್ನು ದಾರಿ ತಪ್ಪಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು. 13 ಬಾರಿ ಬಜೆಟ್ ಮಂಡಿಸಿರುವ ಸಿಎಂ ಸಿದ್ದರಾಮಯ್ಯರಿಗೆ ಸಾರ್ವಜನಿಕ ಹಣಕಾಸು ವೆಚ್ಚ ತಿಳಿದಿದೆ ಎಂದು ಭಾವಿಸಿದ್ದೆ. ಆದರೆ ಅವರು ಬರೀ ಸುಳ್ಳು ಹೇಳುತ್ತಿದ್ದಾರೆ ಎಂದರು.

ಕಾಂಗ್ರೆಸ್ ನಾಯಕರ ಹೇಳಿಕೆ ಕುಚೇಷ್ಟೆಯಿಂದ ಕೂಡಿದೆ. ವಾಸ್ತವಿಕ ಅಂಶಗಳನ್ನು ಹೇಳದೆ ವಿತ್ತೀಯ ಹಕ್ಕುಗಳ ಬಗ್ಗೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ. 15 ನೇ ಹಣಕಾಸು ಆಯೋಗದ ಅವಧಿಯಲ್ಲಿ ರಾಜ್ಯಕ್ಕೆ ಆದ ಲಾಭಗಳನ್ನು ಉಲ್ಲೇಖಿಸಿಲ್ಲ. ಕೆಲವು ಕಾಲ್ಪನಿಕ ನಷ್ಟಗಳನ್ನು ಮಾತ್ರ ಹೇಳುತ್ತಿದ್ದಾರೆ. ಕೇಂದ್ರ ಹಂಚುವ ಪ್ರತಿ ರಾಜ್ಯದ ಪಾಲು ಆಯೋಗದಿಂದ ಆಯೋಗಕ್ಕೆ ವ್ಯತ್ಯಾಸವಾಗುತ್ತದೆ. ರಾಜ್ಯಗಳ ಮೇಲೆ ಬೀರುವ ಎಲ್ಲಾ ಅಂಶಗಳನ್ನು ಪರಿಗಣಿಸಿ ಆಯೋಗ ಶಿಫಾರಸ್ಸುಗಳನ್ನು ಮಾಡುತ್ತದೆ ಎಂದು ಸ್ಪಷ್ಟಪಡಿಸಿದರು.

ನಿರ್ಮಲಾ ಲೆಕ್ಕಾಚಾರ: 1–4ನೇ ಆಯೋಗದ ಐದು ವರ್ಷಗಳ ನಿಗದಿತ ಅವಧಿಯಲ್ಲಿ ಕರ್ನಾಟಕವು 1,51,309 ಕೋಟಿ ರೂ. ತೆರಿಗೆ ಹಂಚಿಕೆ ಪಡೆದಿದೆ. ಪ್ರಸ್ತುತ 15ನೇ ಹಣಕಾಸು ಅವಧಿಯ ಮೊದಲ ನಾಲ್ಕು ವರ್ಷಗಳಲ್ಲಿ, ಅಂದರೆ ಮಾರ್ಚ್, 2024ರ ವೇಳೆಗೆ ಕರ್ನಾಟಕವು ಈಗಾಗಲೇ 1,29,854 ಕೋಟಿ ರೂ.ಗಳನ್ನು ಸ್ವೀಕರಿಸಿದೆ. ಭಾರತ ಸರ್ಕಾರವು ಮಧ್ಯಂತರ ಬಜೆಟ್‌ನಲ್ಲಿ 44,485 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಯೋಜಿಸಿದೆ. ಹಣಕಾಸು ವರ್ಷ 2024–25 ಸೇರಿ ಐದು ವರ್ಷಗಳಲ್ಲಿ ಒಟ್ಟು 1,74,339 ಕೋಟಿ ರೂಪಾಯಿ ಕರ್ನಾಟಕ ಪಡೆದಂತಾಗಲಿದೆ ಎಂದು ಸ್ಪಷ್ಟಪಡಿಸಿದರು. ಕರ್ನಾಟಕವು 14ನೇ ಆಯೋಗದ ಅವಧಿಗಿಂತ 15ನೇ ಅವಧಿಯ ಮೊದಲ ಐದು ವರ್ಷಗಳಲ್ಲಿ ಗಣನೀಯವಾಗಿ ಹೆಚ್ಚು ಮೊತ್ತವನ್ನು ಪಡೆದಿದೆ. ತನ್ನ ನಷ್ಟದ ಸುಳ್ಳು ಹೇಳಿಕೆಯನ್ನು ಬಲಗೊಳಿಸಲು ಕಾಂಗ್ರೆಸ್ ಸರಕಾರ ಯತ್ನಿಸುತ್ತಿದೆ.. ಕರ್ನಾಟಕ ಸರ್ಕಾರ ಮುಂದಿನ 2 ಹಣಕಾಸು ವರ್ಷಗಳ ಅಂದರೆ 2024–25 ಮತ್ತು 2025–26ರ ಕೊರತೆಗಳನ್ನು ಸಹ ಸೇರಿಸಿದೆ. 15ನೇ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಮತ್ತೊಂದು ದಕ್ಷಿಣ ರಾಜ್ಯ ಕೇರಳವು ಕೂಡ ಆದಾಯ ಕೊರತೆ ಅನುದಾನವನ್ನು ಪಡೆದಿದೆ ಎಂದು ಹೇಳಿದರು.

ವಿಪತ್ತು ನಿರ್ವಹಣೆಗೆ 6,196 ಕೋಟಿ ರೂ.: ಇನ್ನೊಂದೆಡೆ, ಬಿಜೆಪಿ ಆಡಳಿತದ ರಾಜ್ಯಗಳಾದ ಉತ್ತರ ಪ್ರದೇಶ, ಮಧ್ಯ ಪ್ರದೇಶ, ಗುಜರಾತ್ ಮತ್ತು ಬಿಹಾರ ಯಾವುದೇ ಆದಾಯ ಕೊರತೆ ಅನುದಾನವನ್ನು ಪಡೆದಿಲ್ಲ. ಯಾವುದೇ ಪ್ರದೇಶ ಅಥವಾ ಅಧಿಕಾರದಲ್ಲಿರುವ ಪಕ್ಷದ ವಿರುದ್ಧ ಕೇಂದ್ರ ಸರ್ಕಾರ ತಾರತಮ್ಯ ಮಾಡಿಲ್ಲ. 50 ವರ್ಷಗಳ ಬಡ್ಡಿ ರಹಿತ ಸಾಲವನ್ನು ಕಲ್ಪಿಸುವ ಯೋಜನೆಯನ್ನು ಕೇಂದ್ರ ತಂದಿದೆ. ಕರ್ನಾಟಕಕ್ಕೆ ಭಾರತ ಸರ್ಕಾರವು 6,280 ಕೋಟಿ ರೂ ಬಡ್ಡಿ ರಹಿತ ಸಾಲ ನೀಡಿದೆ. ಕರ್ನಾಟಕವು 15ನೇ ಹಣಕಾಸು ಅವಧಿಯಲ್ಲಿ ಇದುವರೆಗಿನ ವಿಪತ್ತು ನಿರ್ವಹಣೆಗೆ 6,196 ಕೋಟಿ ರೂಪಾಯಿ ಕೇಂದ್ರದಿಂದ ಪಡೆದುಕೊಂಡಿದೆ ಎಂದು ವಿವರಿಸಿದರು. ಈ ಮೂಲಕ ಕರ್ನಾಟಕ ಕಾಂಗ್ರೆಸ್ ಸರ್ಕಾರಕ್ಕೆ ಚಾಟಿ ಬೀಸಿದರು.

ತೆರಿಗೆ ನೀಡಿಲ್ಲ ಎಂದು ಜಾಹೀರಾತು ನೀಡಲು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದೆ. ಜಾಹೀರಾತಿನಲ್ಲಿ ಸುಳ್ಳು ಮಾಹಿತಿಯನ್ನು ನೀಡಲಾಗಿದೆ. ಅನುದಾನವನ್ನೇ ನೀಡಿಲ್ಲ ಎಂದು ಸುಳ್ಳು ಹೇಳಲಾಗುತ್ತಿದೆ. ವಿಶೇಷ ಅನುದಾನವನ್ನು ನೀಡಲು ಹಣಕಾಸು ಆಯೋಗ ಶಿಫಾರಸು ಮಾಡಿಲ್ಲ. ಅದಾಗ್ಯೂ ಅದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಕಾಂಗ್ರೆಸ್‌ಗೆ ತನ್ನ ಗ್ಯಾರಂಟಿಗಳನ್ನು ಈಡೇರಿಸಲು ಸಾಧ್ಯವಿಲ್ಲ ಎಂದು ತಿಳಿದಿದೆ. ಹೀಗಾಗಿ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಮತ್ತು ಜನರ ಗಮನವನ್ನು ಬೇರೆಡೆ ಸೆಳೆಯಲು ಸುಳ್ಳು ವಾದ ಮಂಡಿಸುತ್ತಿದೆ ಎಂದರು. ಇದರ ಜೊತೆಗೆ ಪ್ರತ್ಯೇಕತಾವಾದಿ ಮನಸ್ಥಿತಿಯನ್ನು ಕರ್ನಾಟಕದ ಕಾಂಗ್ರೆಸ್ ಸರ್ಕಾರ ಹೊಂದಿದೆ ಎಂದು ದೂರಿದರು.

ಬುಡಕಟ್ಟು ಪಂಗಡದ ಪಟ್ಟಿಗೆ ಇತರೆ ಸಮುದಾಯಗಳ ಸೇರ್ಪಡೆ ಹಿನ್ನೆಲೆ

ಮೂಲ ಆದಿವಾಸಿಗಳಿಗೆ ಒಳಮೀಸಲಾತಿಗೆ ಪದ್ಮಶ್ರೀ ಪುರಸ್ಕೃತ ಸೋಮಣ್ಣ ಆಗ್ರಹ

● 15ನೇ ಬುಡಕಟ್ಟು ವಿನಿಯಮ ಕಾರ್ಯಕ್ರಮ ● ಆದಿವಾಸಿ ಮಕ್ಕಳಿಗೆ ಪ್ರತ್ಯೇಕ ವಿವಿ ಸ್ಥಾಪನೆಗೂ ಒತ್ತಾಯ ● ಸೌದೆ ತರಲು ಕಾಡಿಗೆ ಹೋದವರ ಜೈಲಿಗಟ್ಟಿದ್ದಾರೆ; ವಿಷಾದ



ವಿವಿಧ ರಾಜ್ಯಗಳಿಂದ ಆಗಮಿಸಿರುವ ಬುಡಕಟ್ಟು ಸಮುದಾಯದ ಯುವ ಜನರನ್ನು ಕಾಣಬಹುದು.



ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಬುಧವಾರ ನಡೆದ '15ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ'ವನ್ನು ಪದ್ಮಶ್ರೀ ಪುರಸ್ಕೃತ ಬುಡಕಟ್ಟು ಸಮುದಾಯ ಹೋರಾಟಗಾರ ಸೋಮಣ್ಣ ಉದ್ಘಾಟಿಸಿದರು.

ಮೈಸೂರು,ಫೆ.7(ಎಂಟಿವೈ)– ಇತ್ತೀಚಿನ ದಿನಗಳಲ್ಲಿ ಬುಡಕಟ್ಟು ಪಂಗಡದ ಪಟ್ಟಿಗೆ ಆದಿವಾಸಿಗಳಲ್ಲದ ಸಮುದಾಯಗಳನ್ನು ಸೇರಿಸಲಾಗಿದೆ. ಆದರೆ, ಮೂಲ ಆದಿವಾಸಿಗಳಿಗೆ ನ್ಯಾಯ ಒದಗಿಸಲು ಒಳ ಮೀಸಲಾತಿ ಕಲ್ಪಿಸಬೇಕು ಎಂದು ಪದ್ಮಶ್ರೀ ಪುರಸ್ಕೃತ ಬುಡಕಟ್ಟು ಸಮುದಾಯ ಹೋರಾಟಗಾರ ಸೋಮಣ್ಣ ಒತ್ತಾಯಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ '15ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಇಂದಿಗೂ ಬುಡಕಟ್ಟು ಸಮುದಾಯ ಸಂಕಷ್ಟದಲ್ಲಿಯೇ ಇದೆ. ಸರ್ಕಾರದ ಸವಲತ್ತುಗಳು ಪರಿಣಾಮಕಾರಿಯಾಗಿ ತಲುಪುತ್ತಿಲ್ಲ. ಅರಣ್ಯ ಪ್ರದೇಶದಿಂದ ಒಕ್ಕಲೆಬ್ಬಿಸಿರುವ ಬುಡಕಟ್ಟು ಸಮುದಾಯಗಳಿಗೆ ಸರಿಯಾಗಿ ಪುನರ್ವಸತಿ ಕಲ್ಪಿಸಿಲ್ಲ. ಬುಡಕಟ್ಟು ಸಮುದಾಯದ ಯುವಕರಿಗೆ ಉದ್ಯೋಗ ಸಿಗುತ್ತಿಲ್ಲ. ಸರ್ಕಾರ ಬುಡಕಟ್ಟು ಸಮುದಾಯದ ಪಟ್ಟಿಗೆ ಅನ್ಯ ಸಮುದಾಯವನ್ನು ಸೇರಿಸಿದೆ. ಯಾವ ಮಾನದಂಡವನ್ನು ಇಟ್ಟುಕೊಂಡು ಇತರೆ ಸಮುದಾಯವನ್ನು ಸೇರಿಸಿದೆಯೋ ಅರ್ಥವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮೂಲ ಆದಿವಾಸಿಗಳ ಹಿತಕಾಯಲು ಕ್ರಮ ಕೈಗೊಳ್ಳಬೇಕು. ಅದಕ್ಕಾಗಿ ಮೂಲ ಆದಿವಾಸಿಗಳಿಗೆ ಒಳ ಮೀಸಲಾತಿ ಕಲ್ಪಿಸಬೇಕು. ಆದಿವಾಸಿ ಮಕ್ಕಳು ಉನ್ನತ ಶಿಕ್ಷಣ ಪಡೆಯಲು ಪ್ರತ್ಯೇಕ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕು. ಸಂಶೋದನೆಗೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಅರಣ್ಯ ಹಕ್ಕು ಕಾಯ್ದೆ ಜಾರಿಗೊಳಿಸಿ: ವನ್ಯಜೀವಿ ಕಾಯ್ದೆ ಮುಂದಿಟ್ಟುಕೊಂಡು ಅರಣ್ಯ ಪ್ರದೇಶದಿಂದ ಈ ಹಿಂದೆ ಒಕ್ಕಲೆಬ್ಬಿಸಿರುವ ಬುಡಕಟ್ಟು ಸಮುದಾಯದ ಜನರಿಗೆ ನ್ಯಾಯಯುತವಾಗಿ ಪುನರ್ವಸತಿ ಕಲ್ಪಿಸದೇ ಇರುವುದರಿಂದ 1989ರಲ್ಲಿ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಿ, ಹೋರಾಟ ಮಾಡಿದ ನಮಗೆ ಜಯ ಸಿಕ್ಕಿದೆ. ನ್ಯಾಯಾಲಯ ನೀಡಿರುವ ಆದೇಶದಲ್ಲಿ 35 ಅಂಶಗಳನ್ನು ಉಲ್ಲೇಖಿಸಲಾಗಿದೆ. ಈ ಅಂಶವುಳ್ಳ ಆದೇಶ ಹಾಗೂ ಅರಣ್ಯ ಹಕ್ಕು ಕಾಯ್ದೆ ಜಾರಿಗೊಳಿಸಿದರೆ ಸಾವಿರಾರು ಬುಡಕಟ್ಟು ಜನರ ಮನೆಯಲ್ಲಿ ದೀಪ ಉರಿಯುತ್ತದೆ. ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಇಂದಿಗೂ ಮೂಲ ಅರಣ್ಯ ಆದಿವಾಸಿ ಜನರು ತಾಪಂ, ಜಿ.ಪಂ ಸದಸ್ಯರಾಗಿ ಆಯ್ಕೆಯಾಗಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರಗಳು ಬುಡಕಟ್ಟು ಸಮುದಾಯದ ಹಿತ ಕಾಯಲು ಅರಣ್ಯ ಹಕ್ಕು ಕಾಯ್ದೆ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಸಾಕಷ್ಟು ಜನ ನೊಂದಿದ್ದಾರೆ: ವೈಲ್ಡ್ ಲೈಫ್ ಆಕ್ಟ್ ಜಾರಿಗೆ ತಂದು ಅರಣ್ಯದಿಂದ ಆದಿವಾಸಿಗಳನ್ನು ಒಕ್ಕಲೆಬ್ಬಿಸಿದ ನಂತರ, ಸೌದೆ ತರಲು ಕಾಡಿಗೆ ಹೋದ ಬುಡಕಟ್ಟು ಜನರ ಮೇಲೆ ಆನೆ ದಂತ, ಗಂಧ ಕದಿಯಲು ಬಂದಿದ್ದಾನೆ ಎಂದು ಕೇಸ್ ಹಾಕಲಾಗಿದೆ. ಇದರಿಂದ ಅನೇಕರು ಜೈಲು ಪಾಲಾಗಿದ್ದಾರೆ ಎಂದು ವಿಷಾದಿಸಿದರು.

ಆದಿವಾಸಿಗಳು ಜಮೀನ್ದಾರರಾಗಬೇಕು: ಸೌದೆ ತರಲು ಹೋದ ಆದಿವಾಸಿಗಳ ಮೇಲೆ ಸುಳ್ಳು ಕೇಸ್ ಹಾಕಿ ಜೈಲಿಗೆ ಹಾಕಿದ್ದು, ಅವರಿಗೆ ಜಾಮೀನು ನೀಡಲು ಜಮೀನ್ದಾರರು ಹಿಂದೇಟು ಹಾಕುತ್ತಿದ್ದರು. ಆ ಕಾರಣದಿಂದ ನಾವು 4 ದಶಕದ ಹಿಂದೆ ಆದಿವಾಸಿಗಳು ಜಮೀನುದಾರರಾಗಬೇಕು ಎಂದು ಹೋರಾಟ ಆರಂಭಿಸಿದೆವು. ಆ ಹೋರಾಟದ ಫಲವಾಗಿ ಇಂದು 7 ಸಾವಿರ ಎಕರೆ ಜಮೀನು ಆದಿವಾಸಿಗಳ ಒಡೆತನದಲ್ಲಿದೆ. ಅಲ್ಲದೆ ಬುಡಕಟ್ಟು ಸಮುದಾಯದ ಜನ ಇರುವ ಊರಿಗೆ ಕುಡಿಯುವ ನೀರಿನ ವ್ಯವಸ್ಥೆ, ಅಂಗನವಾಡಿ, ಶಾಲೆ ನಿರ್ಮಾಣಕ್ಕಾಗಿ ಹೋರಾಟ ನಡೆಸಿದ್ದೇವೆ ಎಂದು ತಮ್ಮ ಹೋರಾಟದ ಹಾದಿಯನ್ನು ಮೆಲುಕು ಹಾಕಿದರು.

ಗುರಿ ಇಟ್ಟುಕೊಂಡು ಸಾಧನೆ ಮಾಡಿ: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಹಾಡಿ ಹಾಗೂ ಸಮಾಜದ ಮುಖ್ಯವಾಹಿನಿಯಿಂದ ದೂರವುಳಿದಿರುವ ಬುಡಕಟ್ಟು ಸಮುದಾಯದ ಮಕ್ಕಳು ಶಿಕ್ಷಣ ಪಡೆಯಲು ಮುಂದಾಗಬೇಕು. ಸರ್ಕಾರದ ಸವಲತ್ತು ಬಳಸಿಕೊಂಡು ಉನ್ನತ ಶಿಕ್ಷಣ ಪಡೆಯಬೇಕು. ಜೀವನದಲ್ಲಿ ದೊಡ್ಡ ಗುರಿಯಿಟ್ಟುಕೊಂಡು ಅದನ್ನು ಸಾಕಾರಗೊಳಿಸಿಕೊಳ್ಳಲು ಕಠಿಣ ಪರಿಶ್ರಮ ಪಡುವಂತೆ ಸಲಹೆ ನೀಡಿದರು.

ಕೆಲವರು ಸಂಕುಚಿತ ಮನೋಭಾವದಿಂದ ಜನರೊಂದಿಗೆ ಬೆರೆಯುವುದಿಲ್ಲ. ಸಮಾಜದ ಮುಖ್ಯವಾಹಿನಿಗೆ ಬರುವುದಿಲ್ಲ. ಇದರಿಂದ ಸಾಧನೆ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮದಲ್ಲಿ ದೇಶದ ಬೇರೆ ಬೇರೆ ರಾಜ್ಯಗಳಿಂದ ಆಗಮಿಸಿರುವ ಬುಡಕಟ್ಟು ಸಮುದಾಯ ಯುವ ಜನರು ಮೈಸೂರಿನ ವಿವಿಧ ಸ್ಥಳಕ್ಕೆ ಹೋದಾಗ ಅಲ್ಲಿನ ಇತಿಹಾಸ ತಿಳಿದುಕೊಳ್ಳಬೇಕು. ಸ್ಥಳೀಯ ಕಲೆಯನ್ನು ಗೌರವಿಸಬೇಕು. ಮೈಸೂರು ಜಿಲ್ಲೆ, ಹಿಮಪಾತವಾಗುವ ವಾತಾವರಣ ಬಿಟ್ಟು ಉಳಿದ ಎಲ್ಲಾ ವಾತಾವರಣವನ್ನು ಒಳಗೊಂಡಿದೆ. ತಲಕಾಡಿಗೆ ಹೋದರೆ ಮರುಭೂಮಿಯಂತೆ ಭಾಸವಾಗುತ್ತಿದೆ. ದೇಶದಲ್ಲಿಯೇ ಅತಿ ಹೆಚ್ಚು ಹುಲಿ, ಆನೆ ಇರುವ ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯವೂ ಮೈಸೂರಿನ ಸಮೀಪವೇ ಇದೆ ಎಂದು ವಿವರಿಸಿದರು.

ನೆಹರು ಯುವ ಕೇಂದ್ರದ ಪ್ರಾದೇಶಿಕ ನಿರ್ದೇಶಕ ಎಂ.ಎನ್.ನಟರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ನಕ್ಸಲ್ ಪೀಡಿತ ರಾಜ್ಯಗಳಾದ ಜಾರ್ಖಂಡ್, ಒರಿಸ್ಸಾ, ಬಿಹಾರ, ಮಧ್ಯಪ್ರದೇಶದಿಂದ 100 ಮಂದಿ ಬುಡಕಟ್ಟು ಸಮುದಾಯದ ಯುವತಿಯರು, 100 ಮಂದಿ ಯುವಕರು ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮಕ್ಕೆ ಮೈಸೂರಿಗೆ ಆಗಮಿಸಿದ್ದಾರೆ. ಫೆ.12ರವರೆಗೂ ಮೈಸೂರಿನಲ್ಲಿಯೇ ಇದ್ದು, ಇಲ್ಲಿನ ಕಲೆ, ಸಂಸ್ಕೃತಿ ಬಗ್ಗೆ ತಿಳಿದುಕೊಳ್ಳಲಿದ್ದಾರೆ. ಅಲ್ಲದೆ, ಸ್ಥಳೀಯ ಪ್ರವಾಸಿ ತಾಣ, ಇನ್ಫೋಸಿಸ್, ಡೀಡ್ ಸೇರಿದಂತೆ ಇನ್ನಿತರ ಸಂಸ್ಥೆಗಳಿಗೂ ತೆರಳಿ ಮಾಹಿತಿ ಪಡೆದುಕೊಳ್ಳಲಿದ್ದಾರೆ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಡೀಡ್ ಸಂಸ್ಥೆಯ ಮುಖ್ಯಸ್ಥ ಡಾ.ಶ್ರೀಕಾಂತ್ ಮಾತನಾಡಿದರು. ಆದಿವಾಸಿ ಮುಖಂಡ ಪಿ.ಕೆ.ರಾಮು, ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಅಭಿಷೇಕ್ ಚವರೆ, ಯುವ ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮದ್ಯದ ಅಂಗಡಿ ತೆರವಿಗೆ ಆಗ್ರಹಿಸಿ ರೈತಸಂಘ ಪ್ರತಿಭಟನೆ



ಮದ್ಯದ ಅಂಗಡಿ ತೆರವುಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರೈತ ಸಂಘದ ಕಾರ್ಯಕರ್ತರು ಮೈಸೂರಿನ ಕುವೆಂಪುನಗರದಲ್ಲಿರುವ ಅಬಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಮೈಸೂರು,ಫೆ.7(ಎಂಟಿವೈ)– ನಂಜನಗೂಡು ತಾಲೂಕಿನ ಸಿದ್ದಯ್ಯನಹುಂಡಿ ಗೇಟ್ ಬಳಿ ಅಕ್ರಮವಾಗಿ ಆರಂಭಿಸಿರುವ ಮದ್ಯದಂಗಡಿಯನ್ನು ತೆರವುಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಅಬಕಾರಿ ಇಲಾಖೆಯ ಕಚೇರಿ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದ ರೈತ ಸಂಘದ ಕಾರ್ಯಕರ್ತರು ವಿವಿಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಂಜನಗೂಡು ತಾಲೂಕು ಕಸಬಾ ಹೋಬಳಿಯ ಕಸುವಿನಹಳ್ಳಿ ಗ್ರಾಮಕ್ಕೆ ಸೇರಿದ ಸಿದ್ದಯ್ಯನಹುಂಡಿ ಗೇಟ್ ಬಳಿ ಸ್ಥಳದಲ್ಲಿ ಮದ್ಯದ ಅಂಗಡಿ ತೆರೆದಿರುವುದನ್ನು ಖಂಡಿಸಿ ಮದ್ಯದ ಅಂಗಡಿ ತೆರವಿಗೆ ನಿಲುವಳಿ ಮಂಡಿಸಿ ಸರ್ವಾನುಮತದಿಂದ ಗ್ರಾಮ ಪಂಚಾಯಿತಿ ತೀರ್ಮಾನಿಸಿತ್ತು. ಇದಕ್ಕೆ ಜಿಲ್ಲಾಧಿಕಾರಿಗಳು ಸಹಮತಿಸಿದ್ದರು. ಆದರೆ, ಮದ್ಯದಂಗಡಿ ವಹಿವಾಟು ನಡೆಸುತ್ತಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಮದ್ಯದಂಗಡಿ ತೆರವು ಮಾಡಲು 30 ದಿನಗಳ ಗಡುವನ್ನು ನೀಡಲಾಗಿತ್ತು. ಅದು ಮುಗಿದಿದ್ದರೂ ಬಾಗಿಲು ತೆಗೆದಿದೆ. ಅಬಕಾರಿ ಇಲಾಖೆಯ ನಿರ್ಲಕ್ಷ್ಯವೇ ಇದಕ್ಕೆ ಕಾರಣ. ಕೂಡಲೇ ಮದ್ಯದಂಗಡಿ ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ತಾಲೂಕು ಅಧ್ಯಕ್ಷ ಶಿರಮಳ್ಳಿ ಸಿದ್ದಪ್ಪ, ತಾಲೂಕು ಪ್ರಧಾನ ಕಾರ್ಯದರ್ಶಿ ಹೆಜ್ಜಿಗೆ ಪ್ರಕಾಶ್, ಮೈಸೂರು ತಾಲೂಕು ಗೌರವಾಧ್ಯಕ್ಷ ನಾಗನಹಳ್ಳಿ ವಿಜಯೇಂದ್ರ, ಯುವ ಘಟಕದ ಅಧ್ಯಕ್ಷ ಮಹೇಂದ್ರ ನಂಜನಗೂಡು, ಪಿ.ಮರಂಕಯ್ಯ ಹಾಗೂ ಕಸುವಿನಹಳ್ಳಿ ಗ್ರಾಪಂ ಸದಸ್ಯರಾದ ಚನ್ನಾಜಮ್ಮ, ಪುಟ್ಟಸ್ವಾಮಿ, ಶಿವನಂಜಪ್ಪ, ಮಲ್ಲಣ್ಣ, ಮಹೇಶ್, ರಾಜಪ್ಪ, ದೊರೆಸ್ವಾಮಿ ಇನ್ನಿತರರು ಪಾಲ್ಗೊಂಡಿದ್ದರು.

ಇಂದು ವಿಧಾನಸೌಧದಲ್ಲಿ ಸಿಎಂ ಜನಸ್ಪಂದನ

ಬೆಂಗಳೂರು, ಫೆ. 7– ಸ್ಪಂದನಶೀಲ ಆಡಳಿತದ ಭರವಸೆಯನ್ನು ಗಟ್ಟಿಗೊಳಿಸುವ ಪ್ರಯತ್ನವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಫೆಬ್ರವರಿ 8) ಇದೇ ಮೊದಲ ಬಾರಿಗೆ ವಿಧಾನಸೌಧ ಮುಂಭಾಗದಲ್ಲಿ ರಾಜ್ಯ ಮಟ್ಟದ 'ಜನಸ್ಪಂದನ' ಕಾರ್ಯಕ್ರಮ ನಡೆಸಲಿದ್ದಾರೆ.

ಬೆಳಿಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ಈ ಜನತಾ ದರ್ಶನ ನಡೆಯಲಿದೆ. ಜನಸಾಮಾನ್ಯರ ಅಹವಾಲು ಆಲಿಸಿ, ಸ್ಥಳದಲ್ಲೇ ಪರಿಹಾರ ಕಲ್ಪಿಸುವ ಪ್ರಯತ್ನದೊಂದಿಗೆ ರಾಜ್ಯ ಮಟ್ಟದ ಈ ಜನತಾ ದರ್ಶನವನ್ನು ಶಕ್ತಿ ಕೇಂದ್ರ ವಿಧಾನಸೌಧದ ಮುಂಭಾಗ ನಡೆಸುತ್ತಿರುವುದು ವಿಶೇಷವಾಗಿದೆ.

ಇದು 2ನೇ ಜನಸ್ಪಂದನ ಕಾರ್ಯಕ್ರಮ: ಸಿಎಂ ಸಿದ್ದರಾಮಯ್ಯ ಅವರು ನಡೆಸುತ್ತಿರುವ 2ನೇ ಜನಸ್ಪಂದನ ಕಾರ್ಯಕ್ರಮ ಇದಾಗಿದೆ. ಕಳೆದ ಸೆಪ್ಟೆಂಬರ್ ನಲ್ಲಿ ಗೃಹ ಕಚೇರಿ ಕೃಷ್ಣಾದಲ್ಲಿ ಮೊದಲ ಜನಸ್ಪಂದನ ಕಾರ್ಯಕ್ರಮ ನಡೆಸಿದ್ದು, ಹಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಿದ್ದರು. ಅಲ್ಲದೇ ಜನರ ಸಮಸ್ಯೆಗಳನ್ನು ಆಲಿಸಿ ಆಯಾ ಇಲಾಖೆ, ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ತಿಳಿಸಿದ್ದರು. ನಾಳೆ ಎರಡನೇ ಜನಸ್ಪಂದನ ನಡೆಸಲಿದ್ದು, ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಮತ್ತು ಸರಕಾರದ ವರ್ಚಸ್ಸು ಹೆಚ್ಚಿಸಿ, ಜನಪರ ಮತ್ತು ಸ್ಪಂದನಶೀಲ ಆಡಳಿತದ ವಿಶ್ವಾಸವನ್ನು ಜನರಲ್ಲಿ ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

36 ವಿವಿಧ ಇಲಾಖೆಗಳ ಪ್ರತ್ಯೇಕ ಕೌಂಟರ್: ಸಿಎಂ ಜನಸ್ಪಂದನ ಕಾರ್ಯಕ್ರಮಕ್ಕಾಗಿ ವಿಧಾನಸೌಧ ಪೂರ್ವಭಾಗದ ಮೆಟ್ಟಿಲುಗಳ ಬಳಿ ಸಿದ್ಧತೆ ಪೂರ್ಣಗೊಂಡಿದೆ. ರಾಜ್ಯದ ನಾನಾ ಭಾಗಗಳಿಂದ ಜನರು ಅಹವಾಲು ಹೊತ್ತು ತರುವ ಸಾಧ್ಯತೆ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ವತಿಯಿಂದ ತಯಾರಿ ಮಾಡಿಕೊಳ್ಳಲಾಗಿದೆ. ವಿಧಾನಸೌಧದ ಗ್ರ್ಯಾಂಡ್ ಸ್ಟೆಪ್ಸ್ ಮುಂಭಾಗ ಸಿಎಂ ಜನಸ್ಪಂದನಕ್ಕೆ ಬೃಹತ್ ಜರ್ಮನ್ ಟೆಂಟ್ ಹಾಕಲಾಗಿದೆ. 10 ಸಾವಿರ ಜನರಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ. 36 ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಕೌಂಟರ್ ಓಪನ್ ಮಾಡಲಾಗಿದ್ದು, ಕೌಂಟರ್ ಗಳಲ್ಲಿ ಆಯಾ ಇಲಾಖೆಯ ಹಿರಿಯ ಅಧಿಕಾರಿಗಳೇ ಸಾರ್ವಜನಿಕ ಮನವಿ ಸ್ವೀಕರಿಸಲಿದ್ದಾರೆ.



1902 ಸಂಖ್ಯೆಗೆ ಕರೆ ಮಾಡಿ ನೋಂದಾಯಿಸಿ: ಎಲ್ಲಾ ಇಲಾಖೆಯ ಹಿರಿಯ ಅಧಿಕಾರಿಗಳು ಜನಸ್ಪಂದನ ಕಾರ್ಯಕ್ರಮದ ಸ್ಥಳದಲ್ಲೇ ಇರುವಂತೆ ಈಗಾಗಲೇ ಸಿಎಂ ಸೂಚನೆ ನೀಡಿದ್ದು, ಸಾರ್ವಜನಿಕರು ತಮ್ಮ ಸಮಸ್ಯೆಯನ್ನು ಸಿಎಂ ಬಳಿ ಹೇಳಿಕೊಳ್ಳಲು ಆಧಾರ್ ಅಥವಾ ಪಡಿತರ ಕಾರ್ಡ್‌ನೊಂದಿಗೆ ಆಗಮಿಸಿ ನೋಂದಣಿ ಮಾಡಿಕೊಳ್ಳಬೇಕು.

ಕೇಶವಾನಂದ ಭಾರತಿ ಪ್ರಕರಣ ಸಂವಿಧಾನದ ಆಶಯಗಳ ಸಂರಕ್ಷಣೆ ಸಂದೇಶಕ್ಕೆ ನಾಂದಿಯಾಯ್ತು...

ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್‌ದಾಸ್ ವಿವರಣೆ

ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಎನ್.ನಂಜೇಗೌಡ ಸ್ಮರಣಾರ್ಥ ಉಪನ್ಯಾಸ



ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಆಯೋಜಿಸಿದ್ದ ಎನ್.ನಂಜೇಗೌಡ ಸ್ಮರಣಾರ್ಥ ಪ್ರಥಮ ಉಪನ್ಯಾಸವನ್ನು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಉದ್ಘಾಟಿಸಿದರು. ಸಮಾರಂಭದಲ್ಲಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು, ಫೆ.7(ಎಂಟಿವೈ)– ಸಂವಿಧಾನದ ಮೌಲ್ಯ, ಗುರಿ ಹಾಗೂ ಆಶಯಗಳನ್ನು ಕೇಶವಾನಂದ ಭಾರತಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ 13 ನ್ಯಾಯಾಧೀಶರನ್ನು ಒಳಗೊಂಡ ಸಂವಿಧಾನದ ಪೀಠ ಎತ್ತಿ ಹಿಡಿದಿದೆ ಎಂದು ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಹೇಳಿದರು.

ಮೈಸೂರು ವಿದ್ಯಾವರ್ಧಕ ಕಾನೂನು ಕಾಲೇಜಿನ ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣದಲ್ಲಿ ಬುಧವಾರ ವಕೀಲ, ರೈತ ಮುಖಂಡ ಎನ್.ನಂಜೇಗೌಡರ ಸ್ಮರಣಾರ್ಥ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ '50 ವರ್ಷದ ಮೂಲ ತಳಹದಿ ಸಿದ್ಧಾಂತ: ಕೇಶವಾನಂದ ಭಾರತಿ ಪ್ರಕರಣ ಪುನರಾವಲೋಕನ' ಕುರಿತು ಮಾತನಾಡಿದ ಅವರು, ಕೇಶವಾನಂದ ಭಾರತಿ ಪ್ರಕರಣದಲ್ಲಿ ಸಂಸತ್ತಿನ ತಿದ್ದುಪಡಿ ಇತಿಮಿತಿಯ ಬಗ್ಗೆ ಬಹಳ ಸ್ಪಷ್ಟವಾದ ಆದೇಶ ನೀಡಿದೆ. ಅನುಚ್ಛೇದ 368ರ ಅಡಿಯಲ್ಲಿ ಭಾರತ ಸಂವಿಧಾನಕ್ಕೆ ತಿದ್ದುಪಡಿ ತರುವಂತಹ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಸಂವಿಧಾನದ ಮೂಲತತ್ವಗಳಿಗೆ ಧಕ್ಕೆ ತರದಂತೆ ತಿದ್ದುಪಡಿ ಮಾಡಬೇಕು. ಸಂವಿಧಾನದ ಮೂಲತತ್ವಗಳಾದ ಜಾತ್ಯತೀತ, ಸಾರ್ವಭೌಮ, ಸಾಮಾಜಿಕ ನ್ಯಾಯ, ನ್ಯಾಯಿಕ ವಿಮರ್ಶೆ, ಸ್ವತಂತ್ರ ನ್ಯಾಯಾಂಗ, ಸಂಯುಕ್ತ ಮಾದರಿ ಸರ್ಕಾರ, ಕೇಂದ್ರ–ರಾಜ್ಯ ಸರ್ಕಾರಗಳ ನಡುವಿನ ಸಂಬಂಧ ಇವೆಲ್ಲವೂ ಇಂದಿಗೂ ಉಳಿದುಕೊಂಡಿದೆ ಎಂದರೆ, ಅದಕ್ಕೆ ಮೂಲಕಾರಣವೇ ಕೇಶವಾನಂದ ಭಾರತಿ ಪ್ರಕರಣ ಎಂದರು.

ಸಂಸತ್ ಸದಸ್ಯರಿಗೆ ಸಂವಿಧಾನ ತಿದ್ದುಪಡಿ ಅಧಿಕಾರವನ್ನು ಸಂಪೂರ್ಣವಾಗಿ ನೀಡಿದ್ದರೆ, ಶಾಶ್ವತವಾಗಿ ಅವರು ಸದಸ್ಯರಾಗಿ ಮುಂದುವರೆಯುವಂತೆ ತಿದ್ದುಪಡಿ ಮಾಡಿಕೊಳ್ಳುತ್ತಿದ್ದರು. ಇದರಿಂದ ಅವರು ಭಾರತ ದೇಶದ ಬಹುತ್ವ ನೆಲೆಗಟ್ಟಿನ ಸಂಸ್ಕೃತಿಯನ್ನು ಸುಲಭವಾಗಿ ಬದಲಾಯಿಸಿಬಿಡುವ ಅಪಾಯಗಳು ಎದುರಾಗುತ್ತಿದ್ದವು. ಆದರೆ ಸರ್ವೋಚ್ಚ ನ್ಯಾಯಾಲಯವು ಕೇಶವಾನಂದ ಭಾರತಿ ಪ್ರಕರಣದ ಮೂಲಕ ಮೂಲ ತಳಹದಿ ಸಿದ್ಧಾಂತವನ್ನು ರೂಪಿಸಿ ಯಾವ ಯಾವ ವಿಚಾರಗಳಲ್ಲಿ ತಿದ್ದುಪಡಿ ತರಬಾರದು ಎಂಬ ಅಂಶಗಳನ್ನು ಗುರುತಿಸುವುದರ ಮೂಲಕ ಸಂವಿಧಾನವನ್ನು ರಕ್ಷಿಸಿದೆ. ಈ ಪ್ರಕರಣದಲ್ಲಿ ಸುಮಾರು 70 ರಾಷ್ಟ್ರಗಳ ಸಂವಿಧಾನವನ್ನು ಉಲ್ಲೇಖಿಸಲಾಗಿದೆ ಎಂದು ತಿಳಿಸಿದರು. ಎನ್.ನಂಜೇಗೌಡ ಸರಳ ಸಜ್ಜನಿಕೆಯ ವ್ಯಕ್ತಿತ್ವ ಹೊಂದಿದ್ದು, ರೈತರಿಗೆ, ಕಾರ್ಮಿಕರಿಗೆ ಹಾಗೂ ಕಕ್ಷಿದಾರರಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಟ್ಟವರು. ವಕೀಲರಾಗಿ, ರೈತಪರ ಹೋರಾಟಗಾರರಾಗಿ, ಪತ್ರಕರ್ತರಾಗಿ, ಕೃಷಿಕರಾಗಿ ಹಾಗೂ ಸಾಮಾಜಿಕಪರ ಚಿಂತನೆಯುಳ್ಳವರಾಗಿ, ಕನ್ನಡ ನಾಡಿಗೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಇಂದು ಅವರ ಕುಟುಂಬ ವಿದ್ಯಾವರ್ಧಕ ಕಾನೂನು ಕಾಲೇಜಿಗೆ 5 ಲಕ್ಷ ದತ್ತಿ ಕೊಡುವ ಮೂಲಕ ಬಡ ಗ್ರಾಮಾಂತರ ಪ್ರದೇಶದ ಕಾನೂನು ವಿದ್ಯಾರ್ಥಿಗಳಿಗೆ ಸಹಾಯ ಮಾಡಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ ವಹಿಸಿದ್ದರು. ಸಮಾರಂಭದಲ್ಲಿ ಎನ್.ನಂಜೇಗೌಡ ಪತ್ನಿ ಕಮಲಾಕ್ಷಿ, ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಸದಸ್ಯ ಶಿವಲಿಂಗಯ್ಯ, ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ.ಪಿ.ದೀಪು, ಕಾನೂನು ಅಧ್ಯಯನದ ನಿರ್ದೇಶಕ ಪ್ರೊ.ಕೆ.ಬಿ.ವಾಸುದೇವ ಉಪಸ್ಥಿತರಿದ್ದರು. ನಂಜೇಗೌಡರ ಪುತ್ರ ಪ್ರೊ.ಎನ್.ಸತೀಶ್ ಗೌಡ ಪ್ರಸ್ತಾವಿಕ ನುಡಿಗಳನ್ನಾಡಿದರು. ಸಹಾಯಕ ಪ್ರಾಧ್ಯಾಪಕರಾದ ಎಂ.ಜೆ. ಇಂದುಮತಿ ನಿರೂಪಿಸಿದರು. ಎಚ್.ಎಸ್. ಶಿವಕುಮಾರ್ ವಂದಿಸಿದರು.

ಕೊಡಗಿನಲ್ಲಿ ಮಾ.3, ಪೋಲಿಯೋ

● ಸರ್ಕಾರಿ ಇಲಾಖೆ, ಸಂಘ–ಸಂಸ್ಥೆಗಳು ಸಹಕರಿಸಿ ● ಜಿಲ್ಲಾಧಿಕಾರಿ ವೆಂಕಟ್‌ರಾಜಾ ಮನವಿ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೋಲಿಯೋ ಸಿದ್ಧತೆ ಪೂರ್ವಭಾವಿ ಸಭೆಯಲ್ಲಿ ಡಿಸಿ ವೆಂಕಟ್‌ರಾಜಾ ಮಾತನಾಡಿದರು. ಜಿಲ್ಲಾ ಆರೋಗ್ಯಾಧಿಕಾರಿ ಕೆ.ಎಂ.ಸತೀಶ್ ಕುಮಾರ್, ರವೀಂದ್ರ ರೈ, ಡಾ.ಚೇತನ್, ಅಚ್ಚಯ್ಯ, ಡಾ.ಮಧುಸೂದನ ಇದ್ದರು.

ಮಡಿಕೇರಿ, ಫೆ.7–ಐದು ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ಹಾಕುವ ಕಾರ್ಯಕ್ರಮ ಮಾ.3ರಂದು ನಡೆಯಲಿದ್ದು, ವಿವಿಧ ಇಲಾಖೆಗಳು ಹಾಗೂ ಸಂಘ–ಸಂಸ್ಥೆಗಳು ಅಗತ್ಯ ಸಹಕಾರ ನೀಡುವಂತೆ ಜಿಲ್ಲಾಧಿಕಾರಿ ವೆಂಕಟ್‌ರಾಜಾ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಪೋಲಿಯೋ ಸಿದ್ಧತೆ ಬಗ್ಗೆ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪೋಲಿಯೋ ಸಂದರ್ಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೊಂದಿಗೆ ಪಂಚಾಯತ್ ರಾಜ್, ಸಾರ್ವಜನಿಕ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪ್ರಾದೇಶಿಕ ಸಾರಿಗೆ ಇಲಾಖೆಗಳು ಅಗತ್ಯ ಸಹಕಾರ ನೀಡಬೇಕು. ಶಾಲೆ, ಬಸ್ ನಿಲ್ದಾಣ ಹಾಗೂ ಜನದಟ್ಟಣೆ ಪ್ರದೇಶಗಳಲ್ಲಿ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸಬೇಕು. ಸಾರಿಗೆ ಇಲಾಖೆಯಿಂದ ಅಗತ್ಯ ವಾಹನ ನಿಯೋಜಿಸುವಂತೆ ನಿರ್ದೇಶನ ನೀಡಿದರು.

ಪೋಲಿಯೋ ದಿನದಂದು ವಿದ್ಯುತ್ ಸಂಪರ್ಕವನ್ನು ನಿರಂತರವಾಗಿ ಕಲ್ಪಿಸಬೇಕು. ಈ ಕಾರ್ಯಕ್ರಮ ಯಶಸ್ಸುಗೊಳಿಸುವ ನಿಟ್ಟಿನಲ್ಲಿ ರೋಟರಿ, ಲಯನ್ಸ್, ರೆಡ್‌ಕ್ರಾಸ್ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಸಹಕಾರ ಪಡೆಯುವಂತೆ ಜಿಲ್ಲಾಧಿಕಾರಿ ಸಲಹೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕೆ.ಎಂ.ಸತೀಶ್ ಕುಮಾರ್ ಮಾತನಾಡಿ, ಪೋಲಿಯೋ ಕಾರ್ಯಕ್ರಮ ಮಾ.3ರಂದು ಬೂತ್ ಮಟ್ಟದಲ್ಲಿ ನಡೆಯಲಿದೆ. ಮಾ.4, 5 ಮತ್ತು 6ರಂದು ನಗರ ಮತ್ತು ಪಟ್ಟಣ ಪ್ರದೇಶದಲ್ಲಿ ಹಾಗೂ ಮಾ.4 ಮತ್ತು 5ರಂದು ಗ್ರಾಮೀಣ ಪ್ರದೇಶದಲ್ಲಿ ಮನೆ ಮನೆಗೆ ತೆರಳಿ ಪೋಲಿಯೋ ಹನಿ ಹಾಕಲಾಗುವುದು ಎಂದು ಮಾಹಿತಿ ನೀಡಿದರು.

ಪೋಲಿಯೋ ಕಾರ್ಯಕ್ರಮಕ್ಕೆ 80 ವಾಹನಗಳ ಅಗತ್ಯವಿದ್ದು, ವಾಹನ ನಿಯೋಜನೆಗೆ ಸಾರಿಗೆ ಇಲಾಖೆ ಅಧಿಕಾರಿಗಳು ಸಹಕರಿಸಬೇಕು. ಪ್ರವಾಸಿ ಸ್ಥಳಗಳು, ಬಸ್ ನಿಲ್ದಾಣಗಳಲ್ಲಿ ಪೋಲಿಯೋ ಬೂತ್ ತೆರೆಯಲು ಅವಕಾಶ ನೀಡಬೇಕು. ಕಾರ್ಮಿಕರು, ಕೊಳಗೇರಿ ಪ್ರದೇಶದ ಮಕ್ಕಳಿಗೆ ಪೋಲಿಯೋ ಹನಿ ಹಾಕಲು ಸಹಕರಿಸುವಂತೆ ಮನವಿ ಮಾಡಿದರು. ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ರವೀಂದ್ರ ರೈ ಮಾತನಾಡಿ, ರೆಡ್‌ಕ್ರಾಸ್ ಸಂಸ್ಥೆಯಲ್ಲಿ ಒಂದು ವಾಹನವಿದ್ದು ಪೋಲಿಯೋ ಕಾರ್ಯಕ್ರಮಕ್ಕೆ ಒದಗಿಸಲಾಗುವುದು ಎಂದರು. ಸಭೆಯಲ್ಲಿ ರೋಟರಿ ಮಿಸ್ಟಿ ಹಿಲ್ಸ್ ನಿರ್ದೇಶಕ ಡಾ.ಚೇತನ್, ರೋಟರಿ ಸಂಸ್ಥೆಯ ಅಚ್ಚಯ್ಯ, ರೋಟರಿಯನ್ ಮ್ರಾನಳಿನಿ, ಆರ್‌ಸಿಎಚ್ ಅಧಿಕಾರಿ ಡಾ. ಮಧುಸೂದನ, ಜಿಲ್ಲಾ ಸರ್ಜನ್ ಡಾ. ನಂಜುಂಡಯ್ಯ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಪುರುಷೋತ್ತಮ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಶ್ರೀನಿವಾಸ್, ತಾಲೂಕು ವೈದ್ಯಾಧಿಕಾರಿ ಡಾ.ಚೇತನ್, ಇಂಧುದರ್, ಪ್ರಮೋದ್ ರೈ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಪುಟ್ಟರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ನಟರಾಜು, ಪೌರಾಯುಕ್ತ ವಿಜಯ್, ಜಿಲ್ಲಾ ಕಾರ್ಮಿಕ ಅಧಿಕಾರಿ ಹರ್ಷವರ್ಧನ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪಯೋಜನಾ ಸಮನ್ವಯಾಧಿಕಾರಿ ಎಂ.ಕೃಷ್ಣಪ್ಪ, ಪ್ರಾದೇಶಿಕ ಸಾರಿಗೆ ಕಚೇರಿಯ ಮೇಲ್ವಿಚಾರಕಿ ಸಲೀಮ ಇತರರು ಇದ್ದರು.

> ಜಿಲ್ಲೆಯಲ್ಲಿ 5 ವರ್ಷದೊಳಗಿನ ಒಟ್ಟು 42,375 ಮಕ್ಕಳಿದ್ದು, ಇದರಲ್ಲಿ 4400 ಮಕ್ಕಳು ನಗರ ಪ್ರದೇಶ ಹಾಗೂ 37,975 ಮಕ್ಕಳು ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಹಾಗೆಯೇ 5 ವರ್ಷದೊಳಗಿನ ವಲಸಿಗ ಮಕ್ಕಳಿಗೆ ಪೋಲಿಯೋ ಹಾಕಲಾಗುವುದು. ಜಿಲ್ಲೆಯಲ್ಲಿ 464 ಪೋಲಿಯೋ ಬೂತ್‌ಗಳನ್ನು ಸ್ಥಾಪಿಸಲಾಗಿದೆ. 30 ಸಂಚಾರಿ ಬೂತ್‌ಗಳು, 6 ಮೊಬೈಲ್ ತಂಡ ಹಾಗೂ 1928 ಲಸಿಕಾದಾರರು, 86 ಮೇಲ್ವಿಚಾರಕರು, 924 ಮಂದಿ ಮನೆ ಮನೆಗೆ ಭೇಟಿ ನೀಡುವ ತಂಡ ನಿಯೋಜಿಸಲಾಗುವುದು.
> –ಕೆ.ಎಂ.ಸತೀಶ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

ಪೊಲೀಸರಿಂದ ಸ್ವಯಂ ರಕ್ತದಾನ



ಮಡಿಕೇರಿ, ಫೆ.7–ನಗರದ ಜಿಲ್ಲಾ ಪೊಲೀಸ್ ಸಭಾಂಗಣದಲ್ಲಿ ಬುಧವಾರ ಕೊಡಗು ಜಿಲ್ಲಾ ಪೊಲೀಸ್ ಅಧಿಕಾರಿಗಳ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ನಡೆಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಸಹಯೋಗದೊಂದಿಗೆ ನಡೆದ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ರಕ್ತದಾನ ಜೀವನ್ಮರಣ ಹೋರಾಟದಲ್ಲಿರುವವರಿಗೆ ಬದುಕು ನೀಡುವ ಶ್ರೇಷ್ಠ ಕಾರ್ಯವಾಗಿದೆ ಎಂದರು. ಶಿಬಿರದಲ್ಲಿ 53 ಪೊಲೀಸರು ರಕ್ತದಾನ ಮಾಡಿದರು. ರಕ್ತದಾನ ಮಾಡಿದ ಪೊಲೀಸರಿಗೆ ಪ್ರಶಂಸನಾ ಪತ್ರ ವಿತರಿಸಲಾಯಿತು. ಶಿಬಿರದಲ್ಲಿ ಎಎಸ್‌ಪಿ ಸುಂದರ್ ರಾಜ್, ಜಿಲ್ಲಾ ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ.ಕೆ.ಸಿ.ಕರುಂಬಯ್ಯ, ಯೂತ್ ರೆಡ್‌ಕ್ರಾಸ್‌ನ ಕಾರ್ಯಕ್ರಮಾಧಿಕಾರಿ ಡಾ.ಎಂ.ಎಂ. ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಎಚ್.ಆರ್.ಮುರಳೀಧರ್ ಇದ್ದರು.

ಫೆ.25ರಂದು ಮಾಜಿ ಸೈನಿಕರ ರ‍್ಯಾಲಿ

ಗೋಣಿಕೊಪ್ಪ, ಫೆ.7–ಇಲ್ಲಿನ ಕಾವೇರಿ ಕಾಲೇಜಿನಲ್ಲಿ ಫೆ.25ರಂದು ಬೆಳಗ್ಗೆ 8 ಗಂಟೆಗೆ ಬೆಂಗಳೂರಿನ ಕರ್ನಲ್ ವೆಟರನ್ ಮುಖ್ಯಾಲಯ ಕರ್ನಾಟಕ ಮತ್ತು ಕೇರಳ ಸಬ್ ಏರಿಯಾ ವತಿಯಿಂದ ಮಾಜಿ ಸೈನಿಕರ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ.

ಕೊಡಗು ಜಿಲ್ಲೆಯ ಎಲ್ಲಾ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರು ಕುಂದುಕೊರತೆ ಹಾಗೂ ಪಿಂಚಣಿ ಸಂಬಂಧಿತ ಸಮಸ್ಯೆಗಳ ಪರಿಹಾರಕ್ಕಾಗಿ ಮೂಲ ಸೇನಾ ದಾಖಲಾತಿಗಳೊಂದಿಗೆ ಆಧಾರ್ ಕಾರ್ಡ್, ಪಿಂಚಣಿ ಪಡೆಯುತ್ತಿರುವ ಬ್ಯಾಂಕ್ ಪಾಸ್ ಪುಸ್ತಕ, ಪಾನ್ ಕಾರ್ಡ್‌ಗಳ ಪ್ರತಿಗಳೊಂದಿಗೆ ಫೆ.16ರೊಳಗೆ ಮಡಿಕೇರಿ ಮುಖ್ಯ ರಸ್ತೆಯ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬೇಕು.

ಯಶಸ್ವಿನಿ ಪರಿಷ್ಕೃತ ವಿಶೇಷ ಶಿಕ್ಷಣ ಕಾರ್ಯಕ್ರಮ



ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ನಡೆದ ಯಶಸ್ವಿನಿ ಆರೋಗ್ಯ ವರದಿ ಪರಿಷ್ಕೃತ ನಮೂನೆ ಕುರಿತ ವಿಶೇಷ ಶಿಕ್ಷಣ ಕಾರ್ಯಕ್ರಮದಲ್ಲಿ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕ ಎಂ.ಎಸ್.ಕೃಷ್ಣಪ್ರಸಾದ್ ಮಾತನಾಡಿದರು. ಎ.ಕೆ.ಮನು ಮುತ್ತಪ್ಪ, ಎಂ.ಇ.ಮೋಹನ್, ಸಿರಿಲ್ ಮೊರಾಸ್ ಇದ್ದರು.

ಮಡಿಕೇರಿ, ಫೆ.7–ಸಹಕಾರ ಸಂಘದ ಪ್ರತಿಯೊಬ್ಬ ಅಧಿಕಾರಿ ಹಾಗೂ ಸಿಬ್ಬಂದಿಯೂ ಜಾಬ್‌ಚಾರ್ಟ್ ಪ್ರಕಾರ ಕಾರ್ಯನಿರ್ವಹಿಸುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಜವಾಬ್ದಾರಿಗಳನ್ನು ನಿಭಾಯಿಸುತ್ತಿದ್ದಾರೆ ಎಂದು ಕೊಡಗು ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕ ಎಂ.ಎಸ್.ಕೃಷ್ಣಪ್ರಸಾದ್ ಹೇಳಿದರು.

ನಗರದ ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ರಾಜ್ಯ ಸಹಕಾರ ಮಹಾಮಂಡಳ, ಕೊಡಗು ಜಿಲ್ಲಾ ಸಹಕಾರ ಯೂನಿಯನ್, ಮಡಿಕೇರಿ ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಸಹಕಾರ ಸಂಘಗಳ ಕಾರ್ಯನಿರ್ವಾಹಕರಿಗೆ ಯಶಸ್ವಿನಿ ಆರೋಗ್ಯ ವರದಿ ಪರಿಷ್ಕೃತ ನಮೂನೆ ಕುರಿತ ವಿಶೇಷ ಶಿಕ್ಷಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದಿಂದ ಯಾವುದೇ ಯೋಜನೆಗಳ ಬಗ್ಗೆ ಆದೇಶವಿದ್ದಲ್ಲಿ ನಮಗೆ ಸೇವೆ ಮಾಡಲು ಬಂದಿರುವ ಅವಕಾಶವೆಂದು ತಿಳಿದು ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯೋನ್ಮುಖರಾದಲ್ಲಿ ಆ ಕೆಲಸ ಸಂಪೂರ್ಣವಾಗಿ ಮುಗಿಯುತ್ತದೆ ಎಂದರು.

ಯಶಸ್ವಿನಿ ಯೋಜನೆ ಸಹಕಾರಿಗಳಿಗೆ ಮಾತ್ರ ಇರುವ ಅಪೂರ್ವ ಅವಕಾಶವಾಗಿದ್ದು, ಸಹಕಾರ ಚಳವಳಿಗೆ ಪೂರಕವಾಗಿ ಆರೋಗ್ಯ ರಕ್ಷಣೆ ಮೂಲಕ ಸ್ವಾಸ್ಥ್ಯ ಸಮಾಜಕ್ಕೆ ಪ್ರೋತ್ಸಾಹ ನೀಡುವ ಯೋಜನೆಯಾಗಿದೆ ಕಳೆದ ಬಾರಿ ಯಶಸ್ವಿನಿಯಲ್ಲಿ 81 ಸಾವಿರ ನೋಂದಣಿ ಗುರಿ ಸಾಧಿಸಿದ್ದು, 720 ಜನ ಸೌಲಭ್ಯ ಪಡೆದಿದ್ದಾರೆ. ಒಂದೂವರೆ ಕೋಟಿ ಮೊತ್ತದ ಸೌಲಭ್ಯ ಪಡೆದಿರುವುದನ್ನು ಅವಲೋಕಿಸಿದಾಗ ಎಲ್ಲರೂ ಕೈಜೋಡಿಸಿದ ಪರಿಣಾಮ ಹಲವು ಸಹಕಾರಿಗಳು ನೆಮ್ಮದಿ ಜೀವನ ನಡೆಸುವಂತಾಗಿದೆ ಎಂದರು.

ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎ.ಕೆ.ಮನು ಮುತ್ತಪ್ಪ ಮಾತನಾಡಿ, ಜಿಲ್ಲೆಯಲ್ಲಿ ಅದ್ಭುತವಾಗಿ ಯಶಸ್ವಿನಿ ಗುರಿ ಸಾಧಿಸಲಾಗಿದೆ. ಮತ್ತಷ್ಟು ಪರಿಶ್ರಮದೊಂದಿಗೆ ಜಿಲ್ಲೆಯಲ್ಲಿ ಅಂದಾಜು 2.5 ಲಕ್ಷ ಸಹಕಾರಿಗಳಿಗೆ ಈ ಯೋಜನೆ ತಲುಪಿಸಿದಾಗ ಪ್ರತಿಯೊಬ್ಬರಿಗೂ ನ್ಯಾಯ ಒದಗಿಸಿದಂತಾಗುತ್ತದೆ. ಗ್ರಾಮದ ಉದ್ಧಾರ ದೇಶದ ಉದ್ಧಾರವೆಂದು ಮನಗಂಡಿರುವ ಕೇಂದ್ರ ಸರ್ಕಾರ, ಸಹಕಾರ ಕ್ಷೇತ್ರದ ಮೇಲೆ ವಿಶ್ವಾಸವಿರಿಸಿ ಚಳವಳಿ ಮುನ್ನಡೆಸುವ ಮಹತ್ಕಾರ್ಯ ನಡೆಸುತ್ತಿದೆ ಎಂದರು.

ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಕುರಿತು ಸಹಕಾರ ಸಂಘಗಳ ಸಹಾಯಕ ನಿಬಂಧಕ ಎಂ.ಇ.ಮೋಹನ್ ಹಾಗೂ ಲೆಕ್ಕಪರಿಶೋಧನಾ ವರದಿಯ ಪರಿಷ್ಕೃತ ನಮೂನೆ ಕುರಿತು ನಿವೃತ್ತ ಹಿರಿಯ ಲೆಕ್ಕಪರಿಶೋಧಕ ಸಿರಿಲ್ ಮೊರಾಸ್ ಉಪನ್ಯಾಸ ನೀಡಿದರು. ಯೂನಿಯನ್ ನಿರ್ದೇಶಕರಾದ ಎನ್.ಎ.ರವಿ ಬಸಪ್ಪ, ಸಿ.ಎಸ್.ಕೃಷ್ಣ ಗಣಪತಿ, ಕನ್ನಡ ಸಂಪತ್, ಯಶಸ್ವಿನಿ ಯೋಜನೆ ಜಿಲ್ಲಾ ಸಂಯೋಜಕ ಚೇತನ್, ಕಾಸ್ಕಾರ್ಡ್ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕ ಮುತ್ತುರಾಜ್, ಸಹಕಾರ ಇಲಾಖೆಯ ಪಿ.ಬಿ.ಮೋಹನ್, ಆಶಾ ಉಪಸ್ಥಿತರಿದ್ದರು.

ಲೋಕಾಯುಕ್ತರಿಂದ ಫೆ.9, 14ರಂದು ದೂರು ಸ್ವೀಕಾರ

ಮಡಿಕೇರಿ, ಫೆ.7–ಲೋಕಾಯುಕ್ತ ಅಧಿಕಾರಿಗಳು ಫೆ.9ರಂದು ಬೆಳಗ್ಗೆ 11 ರಿಂದ 1 ಗಂಟೆ ವರೆಗೆ ನಗರದ ತಹಶೀಲ್ದಾರ್ ಕಚೇರಿ ಮತ್ತು ಫೆ.14ರಂದು ಸೋಮವಾರಪೇಟೆಯ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಸಾರ್ವಜನಿಕರಿಂದ ದೂರು ಅರ್ಜಿ ಸ್ವೀಕರಿಸಲಿದ್ದಾರೆ.

ಸರ್ಕಾರಿ ಕಚೇರಿಗಳ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರೆ ತೊಂದರೆ ನೀಡುತ್ತಿರುವ ಅಧಿಕಾರಿ, ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದು. ಮಾಹಿತಿಗಾಗಿ ನಗರದ ಗೌಳಿ ಬೀದಿಯ ಲೋಕಾಯುಕ್ತ ಪೊಲೀಸ್ ಕಚೇರಿ ಅಥವಾ ದೂ.ಸಂ: 08272–295297 ಅನ್ನು ಸಂಪರ್ಕಿಸಬಹುದು ಎಂದು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ಸುರಕ್ಷತಾ ನಿಯಮ ಅರಿತು ಪಾಲಿಸಿ

ಸುಂಟಿಕೊಪ್ಪ, ಫೆ.7–ಮಕ್ಕಳು ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ಅರಿತು ಪಾಲಿಸುವುದು ಮುಖ್ಯ ಎಂದು ಕುಶಾಲನಗರ ಡಿವೈಎಸ್‌ಪಿ ಗಂಗಾಧರಪ್ಪ ಕಿವಿಮಾತು ಹೇಳಿದರು.

ಸುಂಟಿಕೊಪ್ಪ ಜೆಸಿಐ ಸಂಸ್ಥೆ ವತಿಯಿಂದ ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ ಹಮ್ಮಿಕೊಂಡಿದ್ದ ಕಾನೂನು ಮಾಹಿತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ರಸ್ತೆ ಸಂಚಾರ ನಿಯಮಗಳನ್ನು ಪಾಲಿಸಿದರೆ ಅಪಘಾತ ತಡೆಗಟ್ಟಲು ಸಾಧ್ಯ. ರಸ್ತೆ ಸಂಚಾರ ನಿಯಮ ಉಲ್ಲಂಘಿಸಿದಾಗ ಅಪಘಾತಗಳು ಸಂಭವಿಸುತ್ತವೆ. ಅಪಘಾತದಲ್ಲಿ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದರು. ಅಪಘಾತ ತಡೆಗಟ್ಟುವ ನಿಟ್ಟಿನಲ್ಲಿ ಸಾರಿಗೆ ಮತ್ತು ಪೊಲೀಸ್ ಇಲಾಖೆ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ವಾಹನ ಸಂಚಾರ ಮಾಡುವಾಗ ಹೆಚ್ಚಿನ ಜಾಗ್ರತೆ ವಹಿಸಬೇಕು. ಮಕ್ಕಳು ಮನೆಯಿಂದ ಶಾಲೆಗೆ ತೆರಳುವಾಗ ರಸ್ತೆ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ತಿಳಿಸಿದರು. ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಎಂ.ಸಿ.ಶ್ರೀಧರ್, ಜೆಸಿಐ ಅಧ್ಯಕ್ಷ ಸಂಪತ್‌ಕುಮಾರ್, ಸದಸ್ಯರಾದ ದೇವಿಪ್ರಸಾದ್, ಡೆನ್ನಿಸ್ ಡಿಸೋಜ, ಪೆಲ್ಸಿ ಡೆನ್ನಿಸ್ ಡಿಸೋಜ, ಅರುಣ್‌ಕುಮಾರ್, ಸತೀಶ್‌ಕುಮಾರ್, ಪ್ರನೀತ್, ಶಾಲಾ ಮುಖ್ಯ ಶಿಕ್ಷಕರು, ಉಪಸ್ಥಿತರಿದ್ದರು.



ಸುಂಟಿಕೊಪ್ಪ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಾನೂನು ಮಾಹಿತಿ ಕಾರ್ಯಕ್ರಮದಲ್ಲಿ ಡಿವೈಎಸ್‌ಪಿ ಗಂಗಾಧರಪ್ಪ ಮಾತನಾಡಿದರು.

ಯಳಂದೂರು, ಕೊಳ್ಳೇಗಾಲದಲ್ಲಿ ರೈತ ಸಂಘದಿಂದ ರಸ್ತೆ ತಡೆ

ಯಳಂದೂರು, ಫೆ.7–ಹನೂರು ತಾಲೂಕಿನ ಲೊಕ್ಕನಹಳ್ಳಿ ಗ್ರಾಮ ಸೇರಿದಂತೆ ಸುತ್ತಮುತ್ತ ಕಾಡು ಪ್ರಾಣಿಗಳಿಂದ ಬೆಳೆಗಳು ಹಾಳಾಗುತ್ತಿದ್ದು, ಅರಣ್ಯ ಇಲಾಖೆ ತಡೆಗಟ್ಟುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಪಟ್ಟಣದ ಎಸ್‌ಬಿಎಂ ವೃತ್ತದಲ್ಲಿ ಬುಧವಾರ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ರೈತ ಮುಖಂಡ ಗೌಡಹಳ್ಳಿ ಸೋಮಣ್ಣ ಮಾತನಾಡಿ, ಬಿಆರ್‌ಟಿ ಹಾಗೂ ಮಲೆಮಹದೇಶ್ವರ ವನ್ಯಜೀವಿ ವಲಯ ವ್ಯಾಪ್ತಿಯ ಗ್ರಾಮಗಳಲ್ಲಿ ಬೇಸಿಗೆ ಸಮಯವಾದ್ದರಿಂದ ಕಾಡಿನಿಂದ ಪ್ರಾಣಿಗಳು ನೀರು, ಮೇವನ್ನು ಹುಡುಕಿಕೊಂಡು ಬಂದು ರೈತರ ಫಸಲುಗಳನ್ನು ನಾಶ ಮಾಡುತ್ತಿವೆ. ಈ ಬಗ್ಗೆ ರೈತರು 3 ದಿನಗಳಿಂದ ಪ್ರತಿಭಟನೆ ಮಾಡುತ್ತಿದ್ದರೂ ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸಮಸ್ಯೆ ಬಗೆಹರಿಸಲು ಮುಂದಾಗುತ್ತಿಲ್ಲ ಎಂದು ಆರೋಪಿಸಿದರು.

ಕಾಡುಪ್ರಾಣಿಗಳಿಂದ ರೈತರು ಸಾಕಷ್ಟು ನಷ್ಟ ಅನುಭವಿಸುತ್ತಿದ್ದಾರೆ. ಆದ್ದರಿಂದ ಕೂಡಲೇ ಈ ಬಗ್ಗೆ ಅರಣ್ಯಾಧಿಕಾರಿಗಳು ಸಮಸ್ಯೆ ಬಗೆಹರಿಸಬೇಕು. ಇಲ್ಲವಾದರೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಸಿದ್ದಲಿಂಗಸ್ವಾಮಿ, ಕಾರ್ಯದರ್ಶಿ ಅಂಬಳೆ ಶಿವಕುಮಾರ್, ಪುಟ್ಟಮಾದಪ್ಪ, ಸ್ವಾಮಿಗೌಡ್, ಕುಮಾರ್, ಮಹೇಶ್ ಇತರರು ಹಾಜರಿದ್ದರು.



ಯಳಂದೂರಿನ ಎಸ್‌ಬಿಎಂ ವೃತ್ತದಲ್ಲಿ ರೈತ ಸಂಘದಿಂದ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ರಸ್ತೆ ತಡೆದು ಪ್ರತಿಭಟಿಸಲಾಯಿತು.

ಕೊಳ್ಳೇಗಾಲ: ಲೊಕ್ಕನಹಳ್ಳಿ ಭಾಗದಲ್ಲಿ ಕಾಡು ಪ್ರಾಣಿಗಳ ಹಾವಳಿಯಿಂದ ರೈತರ ಬೆಳೆ ಹಾಳಾಗುತ್ತಿದ್ದು, ಡಿಸಿಎಫ್ ಸಂತೋಷ್‌ಕುಮಾರ್ ಕಾಡು ಪ್ರಾಣಿಗಳ ಹಾವಳಿ ತಡೆಯಲು ವಿಫಲರಾಗಿದ್ದಾರೆ ಎಂದು ಆರೋಪಿಸಿ ರೈತ ಸಂಘದ ಕಾರ್ಯಕರ್ತರು ಪಟ್ಟಣದ ಮುಡಿಗುಂಡನಲ್ಲಿ ಬುಧವಾರ ಹೆದ್ದಾರಿ ಸಂಚಾರ ತಡೆದು ಪ್ರತಿಭಟನೆ ನಡೆಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಕಾಡುಪ್ರಾಣಿಗಳ ಹಾವಳಿಯಿಂದ ಕೃಷಿಕರು ಹೈರಾಣಾಗುತ್ತಿದ್ದಾರೆ. ರೈತರ ಸಮಸ್ಯೆ ಬಗೆಹರಿಸಲು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯ ಶಾಸಕರು ಮತ್ತು ಜಿಲ್ಲಾಡಳಿತ, ಅರಣ್ಯ ಇಲಾಖೆ ಕ್ರಮ ವಹಿಸುತ್ತಿಲ್ಲ. ಆದ್ದರಿಂದ ಮಹದೇಶ್ವರಬೆಟ್ಟದಲ್ಲಿ ನಡೆಯುವ ಗಡಿನಾಡ ಉತ್ಸವಕ್ಕೆ ಅಡ್ಡಿಪಡಿಸಲಾಗುವುದು. ಯಾವುದೇ ಕಾರಣಕ್ಕೂ ಉತ್ಸವ ನಡೆಯಲು ಬಿಡುವುದಿಲ್ಲ ಎಂದು ಎಚ್ಚರಿಸಿದರು.



ಕಾಡುಪ್ರಾಣಿ ಹಾವಳಿ ತಡೆಯುವಂತೆ ಒತ್ತಾಯಿಸಿ ರೈತ ಸಂಘದ ಕಾರ್ಯಕರ್ತರು ಕೊಳ್ಳೇಗಾಲದಲ್ಲಿ ಬುಧವಾರ ಹೆದ್ದಾರಿ ಸಂಚಾರ ತಡೆದು ಪ್ರತಿಭಟನೆ ನಡೆಸಿದರು.

ಕಾಡುಪ್ರಾಣಿಗಳ ಹಾವಳಿ ತಡೆಗೆ ಡಿಸಿಎಫ್ ವಿಫಲ

ಲೊಕ್ಕನಹಳ್ಳಿ ಭಾಗದ ಗ್ರಾಮದ ಸುತ್ತಮುತ್ತ ದಿನೇ ದಿನೇ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ರೈತರ ಬೆಳೆ ಕೈಗೆ ಸಿಗದಾಗಿದೆ. ಈ ಸಂಬಂಧ ಎಷ್ಟೇ ಮನವಿ ಮಾಡಿದರು ಡಿಸಿಎಫ್ ಸಂತೋಷ್ ಕುಮಾರ್ ರೈತರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ಜೊತೆಗೆ ಜಿಲ್ಲಾಡಳಿತ ರೈತರನ್ನು ನಿರ್ಲಕ್ಷಿಸುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸ್ಥಳೀಯ ಶಾಸಕರು ಸಹ ರೈತರಿಗೆ ಧ್ವನಿಯಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಮುಳ್ಳೂರು ವಿರೂಪಾಕ್ಷ, ಕುಣಗಳ್ಳಿ ಶಂಕರ, ಮುಳ್ಳೂರು ಪವನ್, ಬಾನು ಹೊನ್ನೂರು, ನಂಜುಂಡಸ್ವಾಮಿ, ಮುಳ್ಳೂರು ಸೋಮಣ್ಣ, ಬಸವಣ್ಣ, ಮಾದಪ್ಪ, ದೀಪು, ವೀರಭದ್ರಸ್ವಾಮಿ ಭಾಗವಹಿಸಿದ್ದರು.

ನಾಳೆ ಆಸ್ತಿ ರಕ್ಷಣೆಗಾಗಿ ಪಾದಯಾತ್ರೆ



ಚಾಮರಾಜನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಾಲೂಕು ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಸಂಚಾಲಕ ಅಯ್ಯನಪುರ ಶಿವಕುಮಾರ್ ಮಾತನಾಡಿದರು. ಆರ್.ಪಿ.ನಂಜುಂಡಸ್ವಾಮಿ, ಆರ್.ಮಹದೇವ, ನಲ್ಲೂರು ಸೋಮೇಶ್ವರ, ನಾಗವಳ್ಳಿ ನಾಗಯ್ಯ, ಹೆಬ್ಬಸೂರು ರಂಗಸ್ವಾಮಿ, ಕೃಷ್ಣಮೂರ್ತಿ ಇದ್ದರು.

ಚಾಮರಾಜನಗರ, ಫೆ.7–ನಗರದ ಬಿ.ರಾಚಯ್ಯ ಜೋಡಿರಸ್ತೆಯ ಆದಿಕರ್ನಾಟಕ ಅಭಿವೃದ್ಧಿ ಸಂಘದ ಆಸ್ತಿ ರಕ್ಷಣೆಗೆ ಒತ್ತಾಯಿಸಿ ಫೆ.9ರಂದು ಚಂದಕವಾಡಿಯಿಂದ ಚಾಮರಾಜನಗರವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಆಸ್ತಿ ಸಂರಕ್ಷಣಾ ಸಮಿತಿ ಸಂಚಾಲಕ ಅಯ್ಯನಪುರ ಶಿವಕುಮಾರ್ ತಿಳಿಸಿದರು.

ತಾಲೂಕಿನ ವ್ಯಾಪ್ತಿ ದಲಿತ ಮುಖಂಡರು ಹಾಗೂ ನಮ್ಮ ಪೂರ್ವಿಕರು ಸಮಾಜದ ಅಭಿವೃದ್ಧಿಗಾಗಿ ತಾಲೂಕು ಕೇಂದ್ರ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಸಂಘದ ಹೆಸರಿನಲ್ಲಿ ಆಸ್ತಿಗಳನ್ನು ನೋಂದಣಿ ಮಾಡಿದ್ದರು. ಆದರೆ, ಆಸ್ತಿಯನ್ನು ಅನ್ಯರ ಹೆಸರಿಗೆ ನೋಂದಣಿ ಮಾಡಲಾಗಿದೆ. ಇದನ್ನು ಅವರ ಹೆಸರಿಗೆ ಖಾತೆ ಮಾಡಬಾರದು ಹಾಗೂ ಆಡಳಿತ ಮಂಡಳಿಯನ್ನು ವಜಾಗೊಳಿಸಬೇಕು ಎಂದು ಒತ್ತಾಯಿಸಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಅಂದು ಬೆಳಗ್ಗೆ 9 ಗಂಟೆಗೆ ಚಂದಕವಾಡಿಯ ಅಂಬೇಡ್ಕರ್ ಭವನದಿಂದ ಪಾದಯಾತ್ರೆ ಹೊರಟು ರಾಮಸಮುದ್ರದ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಂತರ, ಬಿ.ರಾಚಯ್ಯ ಜೋಡಿರಸ್ತೆ ಮಾರ್ಗವಾಗಿ ಸಾಗಿ ಆದಿಕರ್ನಾಟಕ ಸಂಘದ ಆವರಣದಲ್ಲಿ ಸಮಾವೇಶ ನಡೆಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ನಗರಸಭಾ ಸದಸ್ಯ ಆರ್.ಪಿ.ನಂಜುಂಡಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಆರ್.ಮಹದೇವ, ಮಾಜಿ ಸದಸ್ಯ ನಲ್ಲೂರು ಸೋಮೇಶ್ವರ, ನಾಗವಳ್ಳಿ ನಾಗಯ್ಯ, ಹೆಬ್ಬಸೂರು ರಂಗಸ್ವಾಮಿ, ಕೃಷ್ಣಮೂರ್ತಿ ಹಾಜರಿದ್ದರು.

ರಾಜ್ಯ ಸರ್ಕಾರ ವಿಸರ್ಜನೆಗೆ ಬಿಜೆಪಿ ಎಸ್‌ಸಿ ಮೋರ್ಚಾ ಒತ್ತಾಯ

ಚಾಮರಾಜನಗರ, ಫೆ.7–ಕಟ್ಟಡ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿರುವ ರಾಜ್ಯ ಸರ್ಕಾರವನ್ನು ವಿಸರ್ಜನೆ ಮಾಡಬೇಕು ಎಂದು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಕೂಡ್ಲೂರು ಶ್ರೀಧರಮೂರ್ತಿ ಒತ್ತಾಯಿಸಿದರು.

ರಾಜ್ಯ ಸರ್ಕಾರ 5 ಗ್ಯಾರಂಟಿ ಯೋಜನೆಗಳಿಗೆ ಕಟ್ಟಡ ಕಾರ್ಮಿಕರ ಮಕ್ಕಳ ವಿದ್ಯಾರ್ಥಿವೇತನ ಕಡಿತ ಮಾಡಿ ತೊಂದರೆ ನೀಡಿ, ಆ ಬಡ ವಿದ್ಯಾರ್ಥಿಗಳಿಗೆ 1 ರಿಂದ 5ನೇ ತರಗತಿವರೆಗೆ 5 ಸಾವಿರ ರೂ. ಬದಲು 1100 ರೂ. ಮಾತ್ರ ನೀಡುತ್ತಿದೆ. ಇದು ರಾಜ್ಯ ಸರ್ಕಾರ ಕಟ್ಟಡ ಕಾರ್ಮಿಕರಿಗೆ ಮಾಡುತ್ತಿರುವ ಅನ್ಯಾಯವಾಗಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು, ಕಾಂಗ್ರೆಸ್ ಕಾರ್ಯಕರ್ತರು, ಕೇಂದ್ರ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಆದರೆ, ಕಳೆದ ಸಾಲಿನಲ್ಲಿ ಬಿಜೆಪಿ ಸರ್ಕಾರದಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಅವಕಾಶ ಸಿಗಲೆಂದು 1 ತರಗತಿಯಿಂದ 5ನೇ ತರಗತಿವರೆಗಿನ ಮಕ್ಕಳಿಗೆ 5 ಸಾವಿರ ರೂ. ಸಹಾಯಧನ ನೀಡುತ್ತಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಟ್ಟಡ ಕಾರ್ಮಿಕರ ಮಕ್ಕಳಿಗೆ 1100 ರೂ. ನೀಡುತ್ತಿದೆ ಎಂದು ದೂರಿದರು.



ಚಾಮರಾಜನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಕೂಡ್ಲೂರು ಶ್ರೀಧರಮೂರ್ತಿ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿ.ಮಹಾಲಿಂಗಯ್ಯ, ಸತ್ತೇಗಾಲ, ಗ್ರಾಪಂ ಮಾಜಿ ಸದಸ್ಯ ಜಯಶಂಕರ್ ಹೆ.ಮೂಕಳ್ಳಿ, ಮಹದೇವಯ್ಯ ಹೊಂಗನೂರು, ಚಂದ್ರಶೇಖರ ಅಂಬಳೆ ಹಾಜರಿದ್ದರು.



ಗುಂಡ್ಲುಪೇಟೆ ತಾಲೂಕಿನ ಬೇಗೂರಿನ ನವಚೇತನ ಟ್ರಸ್ಟ್‌ನ ನ್ಯಾಷನಲ್ ಎಜುಕೇಷನ್ ಆಂಗ್ಲ ಮಾಧ್ಯಮ ಶಾಲಾ ವಾರ್ಷಿಕೋತ್ಸವವನ್ನು ಸಬ್ ಇನ್ಸ್‌ಪೆಕ್ಟರ್ ಚರಣ್‌ಗೌಡ ಉದ್ಘಾಟಿಸಿದರು. ಗ್ರಾಪಂ ಅಧ್ಯಕ್ಷೆ ಜಯಮ್ಮ, ಉಪಾಧ್ಯಕ್ಷ ಬಿ.ಆರ್.ಮಹದೇವಸ್ವಾಮಿ, ಸದಸ್ಯೆ ಲೀಲಾವತಿ, ಶಾಲಾ ವ್ಯವಸ್ಥಾಪಕಿ ಅನಿತಾ ಮಹೇಶ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಹೆಚ್.ವಿಬಸವರಾಜು ಇದ್ದರು

ಕೊಬ್ಬರಿ ಖರೀದಿ ಕೇಂದ್ರ ಆರಂಭ

ಚಾಮರಾಜನಗರ, ಫೆ7–ಬೆಂಬಲ ಬೆಲೆ ಯೋಜನೆಯಡಿ ನಗರ ಮತ್ತು ಗುಂಡ್ಲುಪೇಟೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ಕೊಬ್ಬರಿ ಖರೀದಿ ಕೇಂದ್ರ ತೆರೆಯಲಾಗಿದೆ.

ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಗುಣಮಟ್ಟದ ಪ್ರತಿ ಕ್ವಿಂಟಾಲ್ ಉಂಡೆ ಕೊಬ್ಬರಿಗೆ 12 ಸಾವಿರ ರೂ. ಘೋಷಿಸಲಾಗಿದೆ. ಜೊತೆಗೆ ರಾಜ್ಯ ಸರ್ಕಾರದಿಂದ ಪ್ರತಿ ಕ್ವಿಂಟಾಲ್ ಉಂಡೆ ಕೊಬ್ಬರಿಗೆ 1500 ರೂ. ಪ್ರೋತ್ಸಾಹಧನ ನಿಗದಿಪಡಿಸಲಾಗಿದೆ. ಒಟ್ಟಾರೆ ಪ್ರತಿ ಕ್ವಿಂಟಾಲ್ ಕೊಬ್ಬರಿಗೆ 13,500 ರೂ.ನಂತೆ ಖರೀದಿಸಲಾಗುವುದು.

ಕೊಬ್ಬರಿ ಖರೀದಿಸಲು ಕೇಂದ್ರ ಸರ್ಕಾರದಿಂದ ನಾಫೆಡ್ ಸಂಸ್ಥೆ ಮತ್ತು ರಾಜ್ಯದಿಂದ ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳವನ್ನು ನೇಮಿಸಲಾಗಿದೆ. ಫೆಬ್ರವರಿ ಮೊದಲನೇ ವಾರದಿಂದ ಏಪ್ರಿಲ್ ಕೊನೆಯ ವಾರದವರೆಗೆ ಖರೀದಿಸಲಾಗುವುದು. ರೈತರು ಖರೀದಿ ಕೇಂದ್ರಗಳಲ್ಲಿ ಫ್ರೂಟ್ಸ್ ಎಫ್‌ಐಡಿ ನೀಡಿ ನೋಂದಾಯಿಸಿಕೊಳ್ಳಬಹುದು.

ಪ್ರತಿ ಎಕರೆಗೆ 6 ಕ್ವಿಂಟಾಲ್‌ನಂತೆ ಗರಿಷ್ಠ 20 ಕ್ವಿಂಟಾಲ್ ಮಾತ್ರ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ನಿಗದಿಪಡಿಸಲಾಗಿದೆ. ಎಫ್‌ಎಕ್ಯೂ ಗುಣಮಟ್ಟದ ಕೊಬ್ಬರಿಯನ್ನು ತರಬೇಕು. ರೈತರಿಂದ ಖರೀದಿಸಿದ ಉಂಡೆ ಕೊಬ್ಬರಿಯ ಹಣವನ್ನು ಡಿಬಿಟಿ ಮೂಲಕ ನೇರವಾಗಿ ಆಧಾರ್ ಜೋಡಣೆ ಹಾಗೂ ಎನ್‌ಪಿಸಿಐ ಸೀಡಿಂಗ್ ಆದ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು.

ಮಾಹಿತಿಗೆ ರಾಜ್ಯ ಸಹಕಾರ ಮಾರಾಟ ಮಹಾಮಂಡಳ (ಮೊ.ಸಂ:9449864455), ಚಾಮರಾಜನಗರ ಕೃಷಿ ಮಾರಾಟ ಇಲಾಖೆ ಸಹಾಯಕ ನಿರ್ದೇಶಕರು (8762898394), ಚಾಮರಾಜನಗರ ಎಪಿಎಂಸಿ ಕಾರ್ಯದರ್ಶಿ (8762898394), ಗುಂಡ್ಲುಪೇಟೆ ಎಪಿಎಂಸಿ ಕಾರ್ಯದರ್ಶಿ (9844211885), ತೋಟಗಾರಿಕೆ ಇಲಾಖೆ ಉಪನಿರ್ದೇಶಕರು (94489 99221) ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಕಾಗಲವಾಡಿ ನಾಗಮ್ಮ ನಿಧನ



ಯಳಂದೂರು: ಚಾಮರಾಜನಗರ ತಾಲೂಕಿನ ಕಾಗಲವಾಡಿ ಗ್ರಾಮದ ಲಿಂಗಾಯತರ ಬಡಾವಣೆಯ ನಿವಾಸಿ ದಿ.ನಾಗರಾಜು ಅವರ ಪತ್ನಿ ನಾಗಮ್ಮ (70) ಅನಾರೋಗ್ಯದಿಂದ ಬುಧವಾರ ಮುಂಜಾನೆ ನಿಧನರಾದರು. ಮೃತರು ಒಬ್ಬ ಪುತ್ರ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಚಾಮರಾಜನಗರ ಸಮೀಪದ ಸೋಮವಾರಪೇಟೆಯ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

MUDA Approved Sites, Hunsur Road
20x30, 30x40
East, West & Corner Sites Available
Price-21/35 Lakhs
Near St Joseph School
8660105902

USED WHITE TOWELS FOR SALE
Suitable for Hotels and Stays
9448664411

ಬೇಕಾಗಿದ್ದಾರೆ
ಬೇಕರಿಯಲ್ಲಿ ಅನುಭವವಿರುವ ಮೈಸೂರಿನ ಮೇಟಗಳ್ಳಿಯ ಬ್ರೆಡ್ ಕಾರ್ಖಾನೆಯಲ್ಲಿ ಕೆಲಸ ಮಾಡಲು ಸಿಬ್ಬಂದಿ ಬೇಕಾಗಿದ್ದಾರೆ.
9901777716

ಮನೆ ಭೋಗ್ಯಕ್ಕಿದೆ
ಮೈಸೂರಿನ ದಟ್ಟಗಳ್ಳಿ 'ಹೆಚ್' ಬ್ಲಾಕ್ (ಆರ್.ಕೆ. ಭಂಡಾರ್ ಹತ್ತಿರ)ನಲ್ಲಿ ಎಲ್ಲಾ ಸೌಲಭ್ಯಗಳಿರುವ 60x40 ಅಳತೆಯ 3 ಬೆಡ್ ರೂಂ ಇರುವ ಮನೆ ಭೋಗ್ಯಕ್ಕಿದೆ (ಗ್ರೌಂಡ್ ಫ್ಲೋರ್, 80 ಅಡಿ ರಸ್ತೆ). ಸಂಪರ್ಕಿಸಿ:
Mob: 9035555500
(ಬ್ರೋಕರ್‌ಗಳಿಗೆ ಅವಕಾಶವಿಲ್ಲ)

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
9.30 am to 2 pm. Sunday: 10.30 to 3 pm. Salary: 10,000/- per month. For evening: (Male only). 6.30 pm to 11.30 pm. Salary: Rs. 10,000/- per month.
7349337469, 9448525072



ಪ್ರಮೋಟರ್ ಬೇಕಾಗಿದ್ದಾರೆ
9448302578
9740876316

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಮುಡಾ ಖಾತೆ ಸೈಟ್ ಸೇಲ್
ಈಸ್ಟ್ ಫೇಸಿಂಗ್, ಕಾರ್ನರ್ ಸೈಟ್ 1124 ಚದುರಡಿ, ಜ್ಞಾನಭಾರತಿ ಲೇಔಟ್, ಏರ್‌ಪೋರ್ಟ್ ಹಿಂಭಾಗದ ರಸ್ತೆ, ಬೆಲೆ : 34 ಲಕ್ಷ
ಡೈರೆಕ್ಟ್ ಓನರ್
9342123373

ನಿಮ್ಮ ಮನೆಗಳಿಗೆ ನೌಕರರನ್ನು ಕಳುಹಿಸಿಕೊಡಲಾಗುವುದು
ಹೋಂನರ್ಸ್, Children Care-taker, Baby Care taker, yelder care taker, house-keeping, Security Guards ಗಳನ್ನು ಕಳುಹಿಸಿಕೊಡಲಾಗುವುದು.
Mob: 7022470930

WANTED
Telecallers wanted at Hebbal, Mysuru. Fluency in Kannada, English, Hindi & Tamil Languages with Computer Knowledge and 2+ Year of Experience.
Contact at Arohaka Telechnologies Private Ltd.
9019029036

ಬೇಕಾಗಿದ್ದಾರೆ
ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ನ ವಕೀಲರ ಕಛೇರಿಯಲ್ಲಿ ಕೆಲಸ ಮಾಡಲು ಆಸಕ್ತಿಯುಳ್ಳ ಪದವಿ ಹಾಗೂ ಕಂಪ್ಯೂಟರ್ ಜ್ಞಾನವುಳ್ಳ ಮಹಿಳಾ ಅಭ್ಯರ್ಥಿಗಳು ಮೈಸೂರು ಮಂಡ್ಯ ಮಡಿಕೇರಿ ಈ ಮೇಲ್ಕಂಡ 3 ಜಿಲ್ಲೆಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ:
9480238019

HOUSE FOR SALE
40X60 G&F Floor at Ramakrishna Nagar & Kuvempunagar
30x40 Commercial at Ramakrishnagar
35x55 Site at Sharadadevi nagar
7411227021
9663136318

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಹಾಗೂ ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಅನುಭವುಳ್ಳ ಕ್ಯಾಷಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಜನ್ ಸ್ಟೋರ್ಸ್
ಶಿಷ್ಯರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್ ಮೈಸೂರು

ತಕ್ಷಣ ಬೇಕಾಗಿದ್ದಾರೆ
ಕಡಕೊಳ ಏರಿಯಾದ ಟಿವಿಎಸ್ ಫ್ಯಾಕ್ಟರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ವಯೋಮಿತಿ: 45 ವರ್ಷದೊಳಗೆ
ಸಂಬಳ : 16500 (8 hour) 26 Days
ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9620667819

50x80 Site Kuvempunagar West Facing
MUDA Site for Sale
Price - 4700/sqft
Behind RMP Quarters, 40 Feet Road
8660105902

MUDA & RERA APPROVED 30X40 SITE FOR SALE
West facing @ 2300/Sqft
North Facing @ 2500 Sqft
Near Kit Eng. Collage,
Next to Lalbahadur Shastri Nagar, off. T-Narasipura Main Road,
Immediate Registration & Bank Loan Available
7337786007

CATERING
SWAADHA SAMPADA
Catering Services
VEG
6363436728

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಎಲ್ಲಾ ಜಾತಿಯ ವಧು–ವರರ ಮಾಹಿತಿ ಕೇಂದ್ರ
BA, B.Com, B.Sc, MA, M.Com, M.Sc, MBA, Doctors, Engineers ಹಾಗೂ ಇತರೆ ಎಲ್ಲಾ ಸರ್ಕಾರಿ ಅರೆ ಸರ್ಕಾರಿ ನೌಕರಿಗೆ ವಿವಾಹ ನೋಂದಣಿಗೆ ಕರೆ ಮಾಡಿ
9164743059

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ ಅಗತ್ಯ ದಾಖಲೆಗಳು DL ವಾಹನದ ದಾಖಲೆಗಳು ಮತ್ತು ಆಧಾರ್
ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ
04048937617

ಸೈಟ್ ಮಾರಾಟಕ್ಕಿದೆ
30x40 North F, ಮುಡಾ ಖಾತೆ # 635, ಆನಂದ ಸಾಗರ, 1ನೇ ಫೇಸ್, (ಪ್ರಗತಿ ನಗರ)
9620563026

ಬೇಕಾಗಿದ್ದಾರೆ
ಗ್ರಾನೈಟ್ ಅಂಗಡಿಗೆ Helper ಕೆಲಸಕ್ಕೆ ಹುಡುಗರು, ಹೆಂಗಸರು ಬೇಕಾಗಿದ್ದಾರೆ. ನಜರ್‌ಬಾದ್ ಮೈಸೂರು
9845105129
8867271220

ಮನೆ ಮಾರಾಟಕ್ಕಿದೆ
ಹುಣಸೂರು ಟೌನ್ ಮಂಜುನಾಥ ಬಡಾವಣೆಯಲ್ಲಿರುವ ಮನೆ ನಂ. 30/31 ರಲ್ಲಿ 50x30 ಅಳತೆಯ Ground Floor ಹಾಗೂ 1st Floor ನಿರ್ಮಿತವಾಗಿರುವ ಹಾಗೂ ಎಲ್ಲಾ ಸೌಕರ್ಯ ಇರುವ ಮನೆ ಮಾರಾಟಕ್ಕಿದೆ. ಆಸಕ್ತಿಯುಳ್ಳವರು ಸಂಪರ್ಕಿಸಬೇಕಾಗಿರುವ ನಂ.
8951845253

ಶಿರಡಿ ಯಾತ್ರಾ ಪ್ಯಾಕೇಜ್ ಪ್ರವಾಸ
ವಿಮಾನದ ಮೂಲಕ ತ್ರಯಂಬಕೇಶ್ವರ ಶಿರಡಿ ದರ್ಶನ, ಶನಿ ಸಿಂಗನಾಪುರ, ರಜನಗಾಂವ್ ಮುಂತಾದ ಸ್ಥಳಗಳು 2 ದಿನಗಳ ಪ್ರವಾಸ ಸಂಪರ್ಕಿಸಿ:
9483587373

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8861401315

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
7619318801, 9035836473

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಸೈಟುಗಳು ಮಾರಾಟಕ್ಕಿದೆ ಜೆಪಿನಗರ್ ರಿಂಗ್ ರಸ್ತೆ ಹತ್ತಿರ
20x30 - 17 Lakhs
30x40 - 33 Laksh
ಗೊರೂರು ಬಸ್ ನಿಲ್ದಾಣದ ಹತ್ತಿರ ರಮಾಬಾಯಿನಗರ, ಮೈಸೂರು
DTCP ಅನುಮೋದಿತ (ಕಾರ್ಪೋರೇಶನ್ ಮಿತಿ)
1.5 KMS from JP Nagar Ring Road
8660105902

FOR RENT
8000 Sqft building with Basement, first and Second Floor suitable for Super Markets, Restaurants and Other Showrooms Available for Rent at Arvathokulu Road. Just 0.5 KM from Main Gonikoppa town.
9448346284

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಿಗೆ 156 ವಿವಿಧ ಪೋಸ್ಟ್‌ಗಳಿಗೆ 10th, PUC, ITI, Degree, (Pass/Fail) ಆಗಿರುವ ಉತ್ಸಾಹದ ಯುವಕ/ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೂಟದೊಂದಿಗೆ 14000 ರಿಂದ 35000 (ESI+PF+OT) ಷರತ್ತು ಅನ್ವಯ
9164052361
9513829246

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

SBIT Travels
GROUP TOURS (All Inclusive)
4N/5D Andaman @ 46,999/-
Mar: 08, 14, 27 (Apr: 6, 15, 22
4N / 5D Kashmir @ 46,999/-
Mar: 11, 19, 25 / Apr: 3, 11, 25
Mob: 9901524127
(Saraswathipuram, Mysore)

SITE FOR SALE
30X40 South Face
40x60 West Face
55x62 East Commercial
Opp. University Layout
Near Ring Road
Airport Back side 30x40
9900372792

ಮನೆ ಮಾರಾಟಕ್ಕಿದೆ
ಜೆಪಿ ನಗರ ಪಕ್ಕದಲ್ಲಿರುವ ಮಾನಂದವಾಡಿ ಮುಖ್ಯ ರಸ್ತೆಗೆ ತಾಗಿಕೊಂಡಿರುವ ಪ್ರಕೃತಿ ಬಡಾವಣೆಯಲ್ಲಿ ಸುಸಜ್ಜಿತವಾದ 20x30 ಡ್ಯೂಪ್ಲೆಕ್ಸ್ ಹೊಸ ಮನೆ ಮಾರಾಟಕ್ಕಿದೆ.
ನೇರ ಮಾಲೀಕರನ್ನು ಸಂಪರ್ಕಿಸಲು ಕರೆ ಮಾಡಿ
9483918783
7019188932

ಕೊಳ್ಳೇಗಾಲದ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು.

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸುಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಶಿರಡಿ ಪ್ರವಾಸ – 5 ದಿನಗಳು
20–2–2024 ಕೊಲ್ಹಾಪುರ, ಪಂಡರಾಪುರ, ತುಳಜಾ ಭವಾನಿ, ಶನಿಸಿಂಗನಾಪುರ, ಎಲ್ಲೋರ, ನಾಸಿಕ್ ಮತ್ತು 3 ಜ್ಯೋತಿರ್ಲಿಂಗ ದರ್ಶನ.
ಮೈತ್ರಿ ಟ್ರಾವೆಲ್ಸ್
Mob: 6360422209

WANTED
For wholesale distribution.
FEMALE STAFF - 3 (office work and storekeeping)
DRIVING cum DISTRIBUTION - 2 (4 wheel driving)
With or without experience.
SSLC / PUC pass / fail.
with / without experience.
9986108208, 9739377827

ಕೆಲಸಕ್ಕೆ ಬೇಕಾಗಿದ್ದಾರೆ
ಮಹಿಳೆಯರು ಹಾಗೂ ಹುಡುಗಿಯರು ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
9901080314

ಮಹಿಳೆಯರಿಗೆ ಸುವರ್ಣಾವಕಾಶ
ನಿಮ್ಮ ಮನೆಯಿಂದಲೇ ಬಾಗಿಲ ಹಾರಗಳನ್ನು ತಯಾರಿಸಿ ನಮಗೆ ಕೊಡಿ, ಸಾಮಾಗ್ರಿಗಳನ್ನು ಕೊಟ್ಟು ತರಬೇತಿ ನೀಡಲಾಗುವುದು. ವಾರಕ್ಕೆ 2,000/– ರೂ.ಗಳವರೆಗೆ ಸಂಪಾದಿಸಬಹುದು.
8867556624

ಕಳೆದಿದೆ
ಸಿದ್ದರಾಜು, ದೊಡ್ಡಮಾರಗೌಡನ ಹಳ್ಳಿ, ಮೈಸೂರು ತಾಲ್ಲೂಕು. ದಿನಾಂಕ 6–2–2024ರಂದು ಬಿಳಿಕೆರೆಯಿಂದ ಕೆ.ಆರ್. ನಗರಕ್ಕೆ ಹೋಗಲು ಬಿಳಿಕೆರೆಯಲ್ಲಿ ಬಸ್ ಹತ್ತುವಾಗ ಆಕಸ್ಮಿಕವಾಗಿ ಕೆನರಾ ಬ್ಯಾಂಕ್ ಅಕೌಂಟ್ ನಂ. 4791101006561 ಸಂಖ್ಯೆಯ ಎರಡು ಚೆಕ್‌ಗಳು ಅದರ ನಂ. 957027 ಮತ್ತು 957028 ಆಗಿದ್ದು, ಆಕಸ್ಮಿಕವಾಗಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ. ಸೂಕ್ತ ಬಹುಮಾನ ನೀಡಲಾಗುವುದು.
Mob: 8971091078

Room for Rent
A big room with attached and balcony for Office Purpose / Residential use in Nivedithanagara, Mysore. Landmark: Celebration Convention Hall. Contact:
Mob: 9036735924

ಹೆಸರು ಬದಲಾವಣೆ
ಮಧುರಾ ಅಗರ ರಂಗನಾಥರಾವ್ ಆದ ನಾನು, ನಂ. 840, 'ಡಿ' ಬ್ಲಾಕ್, 9ನೇ ಕ್ರಾಸ್, 1CRM ಪ್ರಾರ್ಥನಾಲಯ ಎದುರು ವಾಸವಾಗಿದ್ದು, ನನ್ನ ಆಧಾರ್ ಕಾರ್ಡ್ ಹೆಸರಿನಂತೆ ಮಧುರಾ ವಿ.ಮೂರ್ತಿ ಎಂದು ಬದಲಾವಣೆ ಮಾಡಿರುವುದರಿಂದ ನನ್ನ ಹೆಸರು ಮಧುರ ವಿ.ಮೂರ್ತಿ ಎಂದು ಬದಲಾವಣೆ ಮಾಡಿಕೊಡಬೇಕೆಂದು ನೋಟರಿ ಆರ್.ಕೆ. ಜ್ಯೋತಿ ರವರ ಎದುರು ದಿನಾಂಕ 3–2–2024 ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಮಧುರ ವಿ.ಮೂರ್ತಿ

ಕಳೆದಿದೆ
ಭಾಗ್ಯ, W/o ಗೋವಿಂದನಾಯಕ, ನಂ. 169, ಮಾರಿಗುಡಿ ಸ್ಟ್ರೀಟ್, ಹುಣಸೂರು ಟೌನ್, ಕಲ್ಕುಣಿಕೆ, ಮೈಸೂರು, ನನ್ನ ಸ್ವತ್ತಿಗೆ ಸಂಬಂಧಿಸಿದ ಕ್ರಯ ಪತ್ರ (ಸಂಖ್ಯೆ HUN-1-05515-2019-20) ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 8147437728

ಬೇಕಾಗಿದ್ದಾರೆ
Housekeeping (ಹೌಸ್‌ಕೀಪಿಂಗ್) ಕೆಲಸಕ್ಕೆ ಬೇಕಾಗಿದ್ದಾರೆ. ವಯೋಮಿತಿ 30 ವರ್ಷದ ಒಳಗೆ.
8748970972, 9035572879

ಹೊಸ ಮನೆ ಮಾರಾಟಕ್ಕಿದೆ
ಪೂರ್ವದಿಕ್ಕು 30x40 3BHK ಕಲ್ಪವೃಕ್ಷನಗರ ಕೆಸರೆ 3ನೇ ಹಂತ, ಮೈಸೂರು
8095673991

HY BRID ECO SOLAR
Sales Man - Male -5
Helper - Male - 03
Computer Acconts - 2
Female Wanted
6360240286
9731930307

Wanted for Security and Housekeeping Service Agency
Field Officer - 6 Nos.
Operation Executive - 3 Nos.
Housekeeping Supervisor - 10 Nos.
ಆಸ್ಪತ್ರೆಗಳಿಗೆ ಹೌಸ್‌ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಮತ್ತು ಪುರುಷರು, ಸೆಕ್ಯೂರಿಟಿ ಗಾರ್ಡ್ಸ್, ಸೆಕ್ಯೂರಿಟಿ ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ.
8884286123 | 8884286321

COMMERCIAL SPACE FOR RENT
Fully furnished running girls PG OR for any office, banks, diagnostic lab etc. Opp Jayadeva Hospital, Mysore.
9538970855 | 9844280244

Land Required for Rent / Long Term Lease 80x100
New Kantharaj Urs Road Junction between Andolana Circle towards SJC College Road.
7760101007

ಬೇಕಾಗಿದ್ದಾರೆ
ಬ್ರೆಡ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಬೇಕರಿ ಅನುಭವ ಹೊಂದಿರುವ ಕೆಲಸಗಾರ ಬೇಕಾಗಿದ್ದಾರೆ ಮೇಟಗಳ್ಳಿ, ಮೈಸೂರು. ಸಂಪರ್ಕ:
9901777716

3 ವ್ಹೀಲರ್ ಆಪೆ ಆಟೋ ಫಾಸ್ಟ್ ಫುಡ್
ಆಟೋ ಬಾಡಿಗೆಗೆ ಅಥವಾ ಸೇಲ್‌ಗೆ ಇದೆ. ಆಸಕ್ತಿ ಇರುವವರು ಸಂಪರ್ಕಿಸಿ: ಆರಾಧ್ಯರು
9164314560

WANTED SITES
At Yelwala Vijayanagara, Dattagalli, Kuvempunagar Saraswathipuram & Mysore Surrondings Quick Regn.
9342125252

ಇಬ್ಬರು(2)ಅರ್ಚಕರು ಬೇಕಾಗಿದ್ದಾರೆ
ಬಾಡಿಗೆಗೆ ದೊರೆಯುತ್ತದೆ
10x12 ಅಳತೆಯುಳ್ಳ ಅಂಗಡಿ ಮಳಿಗೆ ನಂ.04 ಬಾಡಿಗೆಗೆ ದೊರೆಯುತ್ತದೆ.
ಸಂಪರ್ಕಿಸಬೇಕಾದ ವಿಳಾಸ:
ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ ಎಸ್.ಜಿ.ಡಿ.ಎಂ. ಟ್ರಸ್ಟ್, ಚಾಮುಂಡಿವನಂ, ವಿದ್ಯಾರಣ್ಯಪುರಂ, ಮೈಸೂರು–570008
9448053321

ಸೈಟು ಮಾರಾಟಕ್ಕಿದೆ
ಜೆ.ಎಸ್.ಎಸ್. ಲೇಔಟ್ 2ನೇ ಹಂತ ನಿವೇಶನ ಅಳತೆ 9x12 ಮೀಟರ್ ಸರ್ದಾರ್ ವಲ್ಲಭಾಯ್ ಪಟೇಲ್ ನಗರ, ದಕ್ಷಿಣ ದಿಕ್ಕು, ಪೋಲೀಸ್ ಲೇಔಟ್ ಪಕ್ಕ, ಮೈಸೂರು.
9972236593

ಡ್ರೈವರ್ ಬೇಕಾಗಿದ್ದಾರೆ
ಮಿನಿಮಮ್ experience 2–3 years.
ಚೇತನ್ ಬುಕ್ ಹೌಸ್ ನಾರಾಯಣಶಾಸ್ತ್ರಿ ರೋಡ್, ಮೈಸೂರು

ಲಘು ಉಪಹಾರದ ಕ್ಯಾಂಟೀನ್
ಮೈಸೂರು ನಗರದ ಒಂದು ಸಣ್ಣ ಆಸ್ಪತ್ರೆಯಲ್ಲಿ ಹೊರ ರೋಗಿಗಳಿಗೆ ಸಸ್ಯಾಹಾರಿ ಕಾಫಿ, ಟೀ & ಲಘು ಉಪಹಾರ, ಒದಗಿಸುವ ಕ್ಯಾಂಟೀನ್ ನಡೆಸಲು ಆಸಕ್ತಿವುಳ್ಳವರು ಕೆಳಗಿನ ಮೊಬೈಲ್ ನಂಬರ್ ಸಂಪರ್ಕಿಸುವುದು. ಹೇಮೇಶ್
9663062222

ತಕ್ಷಣ ಟೆಲಿಕಾಲರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ
ಉತ್ತಮ ಸಂಬಳ ಮತ್ತು ಆಕರ್ಷಕ ಇನ್‌ಸೆಂಟೀವ್ ಇರುತ್ತದೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ವಯಸ್ಸು 18 ರಿಂದ 35. ಸ್ಥಳ: ಮೈಸೂರು.
9108021111

RENT/ LEASE
2 BHK & 3 BHK House Rent at Saraswathipuram & Kuvempunagar
40x60 Duplex House Lease at Vijayanagar Ist Stage (Rs.35 Lakhs) 40x60 Ist Floor lease at Saraswathipuram
7411227021
9663136318

ತಕ್ಷಣ ಬೇಕಾಗಿದ್ದಾರೆ
Telecalling ಕೆಲಸಕ್ಕೆ ಹುಡುಗಿಯರು ತಕ್ಷಣ ಬೇಕಾಗಿದ್ದಾರೆ
(Fixed Salary No Target)
9606084390
9606084387

LAND FOR SALE
10 Guntas DC Converted Land Near Yelwala Suncity Homes Mysore-Hunsur Road - 50 Lakh
(30x40) at OLIVE ENCLAVE Mysore-Bangalore Highway 4 KM From Columbia Hospital Rs. 26 Lakhs
9538839926

ಸೈಟುಗಳು ಮಾರಾಟಕ್ಕಿದೆ
ಕೆ.ಆರ್. ನಗರದ ಹಾಸನ–ಮೈಸೂರು ಮುಖ್ಯ ರಸ್ತೆಯಲ್ಲಿ 30x40 ಅಳತೆಯ ನಾಲ್ಕು ಸೈಟುಗಳು ಮಾರಾಟಕ್ಕಿವೆ.
Mob: 8618626897

WANTED
Male candidates for Field Officer's post. More than 25 opportunities are available. Education: SSLC & above. Good salary with best incentives. ESI facility available.
Mob: 97398-01611

ಕಳೆದಿದೆ
ಎಸ್. ಉಮೇಶ, #3315, 14ನೇ ಕ್ರಾಸ್, ಆರ್.ಪಿ. ರಸ್ತೆ, ನಂಜನಗೂಡು, ಮೈಸೂರು ಜಿಲ್ಲೆಯಲ್ಲಿ ವಾಸವಿದ್ದು, ನಾವು ಕಳೆದ 29 ವರ್ಷಗಳಿಂದ ಶ್ರೀಕಂಠೇಶ್ವರ ಟಿ.ವಿ. ಸೆಂಟರ್ ಎಂಬ ಟಿ.ವಿ. ಶೋರೂಂನ ಮಾಲೀಕರಾಗಿದ್ದು, ಸದರಿ ಕಛೇರಿಯು ಮೈಸೂರಿನ ಲಕ್ಷ್ಮೀಪುರಂನಲ್ಲಿದ್ದು, ದಿನಾಂಕ 3–2–2024ರಂದು ಕಛೇರಿಯ ನವೀಕರಣ ಮಾಡುವ ಸಮಯದಲ್ಲಿ ನನ್ನ (ನಂ. N2498242) ಮತ್ತು ನನ್ನ ಪತ್ನಿ ಶ್ರೀಮತಿ ಹೆಚ್.ಬಿ. ಅರ್ಚನ ರವರ ವಿದೇಶಿ ರಹದಾರಿ ಪತ್ರವು (ಪಾಸ್ ಪೋರ್ಟ್) (ನಂ. N6962464) ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
9880759676, 9164207999

ನೀರು ಉಳಿಸಿ, ಹಣ ಉಳಿಸಿ!!
ಮನೆಯ ನೀರಿನ ಟ್ಯಾಂಕ್‌ಗೆ ಫ್ಲೋಟ್ ಸಹಿತ, ಆಟೋ ಮ್ಯಾಟಿಕ್ ವಾಟರ್ ಲೆವೆಲ್ ಕಂಟ್ರೋಲರ್ ಅಳವಡಿಸಿ
Install, Automtic Water Level Controller to your overhead water Tank & Save Water & Money (Float Sensor Included)
Avail attractive Discount Before - 10-2-2024
8762688707

ಮನೆ ಭೋಗ್ಯಕ್ಕಿದೆ
3 ರೂಂವುಳ್ಳ ಡ್ಯೂಪ್ಲೆಕ್ಸ್ ಮನೆ ಸೋಲಾರ್ & ಗೀಸರ್ ವ್ಯವಸ್ಥೆ ಇದೆ. ಸಾಯಿಬಾಬಾ ದೇವಸ್ಥಾನ ಹತ್ತಿರ, ರಾಮಕೃಷ್ಣ ನಗರ (ಮಧ್ಯವರ್ತಿಗಳು ಕ್ಷಮಿಸಿ)
8970926495

FOR SALE
1) 30X36 House @ Dattagalli
2) 40x60 Sites @ Hebbal
3) 80x80 Ramakrishnanagar
4) 2 Acre Industrial Land & Hootagalli
9663368424

ಬೇಕಾಗಿದ್ದಾರೆ
ಹೆಸರಾಂತ ಕೋರಿಯರ್ ಸಂಸ್ಥೆಗೆ ಈ ಕೆಳಕಂಡ ಹುದ್ದೆಗೆ ಬೇಕಾಗಿದ್ದಾರೆ.
Inchrge Post-1, ಹೂಟಗಳ್ಳಿ
Incharge Post-1, ಕೆ.ಟಿ.ಸ್ಟ್ರೀಟ್
ಹಾಗೂ ಡೆಲಿವರಿ ಬಾಯ್ಸ್ ಮತ್ತು ಆಫೀಸ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ: ಬೆಳಿಗ್ಗೆ 10.30 ರಿಂದ ಸಂಜೆ 5.30
9449870909

ಮನೆ ಕೆಲಸಕ್ಕೆ ಬೇಕಾಗಿದ್ದಾರೆ
ಮನೆ ಕೆಲಸ, ಅಡುಗೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ.
9845639079

ಬೇಕಾಗಿದ್ದಾರೆ
ಫ್ಯಾಕ್ಟರಿ ಕಬ್ಬಿಣ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಚಿತ್ರವನ ರೆಸಾರ್ಟ್ ಎದುರು ಮಾನಂದವಾಡಿ ರಸ್ತೆ ಮೈಸೂರು ಜೆವಿಎನ್ ರೋಲಿಂಗ್ ಷಟ್ಟರ್ ಮೆಟೀರಿಯಲ್ಸ್ ಸಂಬಳ–14,000
7829665715

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ (12 Hrs) (SSLC Pass/Fail)
2) ಸೆಕ್ಯೂರಿಟಿ ಸೂಪರ್ ವೈಸರ್ (08 Hrs) (SSLC / PUC ಕನಿಷ್ಠ 01 ವರ್ಷ ಅನುಭವವಿರಬೇಕು.)
ಸ್ಥಳ: ಗೋಕುಲಂ ಹೆಬ್ಬಾಳು
ESI, PF ಸೌಲಭ್ಯವಿದೆ.
9739199355
9844235981

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ



ಸುತ್ತೂರು ವೈಭವದ ಜಾತ್ರಾ ಮಹೋತ್ಸವದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ 118 ಜೋಡಿಗಳು

ಶ್ರೀಕ್ಷೇತ್ರದಲ್ಲಿ ಇದುವರೆಗೂ 3076 ಜೋಡಿಗಳಿಗೆ ಕಂಕಣಭಾಗ್ಯ

ಹಸೆಮಣೆ ಏರಿದ ಅಂತರ್ಜಾತಿ, ವಿಶೇಷಚೇತನರು

ನಂಜನಗೂಡು, ಫೆ.7– ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಸಾಮೂಹಿಕ ವಿವಾಹದಲ್ಲಿ 118 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಡುವ ಮೂಲಕ ಸತಿ ಪತಿಗಳಾದರು.

ಸುತ್ತೂರಿನಲ್ಲಿ ನಡೆಯುತ್ತಿರುವ ಶಿವರಾತ್ರೀಶ್ವರ ಶಿವಯೋಗಿಗಳ ವೈಭವದ ಜಾತ್ರಾ ಮಹೋತ್ಸವದಲ್ಲಿ ಶಾಸಕರು, ಹರಗುರು ಚರಮೂರ್ತಿಗಳು, ಪೋಷಕರು, ಬಂಧುಗಳು, ಮಿತ್ರರು ಹಾಗೂ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಭಕ್ತರ ಸಮ್ಮುಖದಲ್ಲಿ ಮದುವೆ ಶಾಸ್ತ್ರವನ್ನು ಶಾಸ್ತ್ರೋಕ್ತವಾಗಿ, ವಿಧಿವಿಧಾನದ ಮೂಲಕ ನೆರವೇರಿಸಲಾಯಿತು. ವೇದ ಮಂತ್ರ ಘೋಷ, ನಾದಸ್ವರದ ಮಧ್ಯದಲ್ಲಿ ವರ–ವಧುವಿಗೆ ಮಾಂಗಲ್ಯಧಾರಣೆ ನೆರವೇರಿಸುವ ಮೂಲಕ ಬದುಕಿನ ಹೊಸ ಬಾಳಿಗೆ ಪಾದಾರ್ಪಣೆ ಮಾಡಿದರು.

ಇದಕ್ಕೂ ಮುನ್ನ ವಧು–ವರರನ್ನು ಶಿವರಾತ್ರೀಶ್ವರ ಶಿವಯೋಗಿಗಳ ಗದ್ದುಗೆಯಿಂದ ವೀರಗಾಸೆ ನೃತ್ಯದ ಮೂಲಕ ಮೆರವಣಿಗೆಯಲ್ಲಿ ಕರೆತರಲಾಯಿತು. ಮದುವೆಗೂ ಮುನ್ನ ಬದುಕಿನ ಸುಖ–ದುಃಖಗಳನ್ನು ಸಮಾನವಾಗಿ ಸ್ವೀಕರಿಸುತ್ತೇವೆ ಎಂದು ನವ ಜೋಡಿಗಳು ಪರಸ್ಪರ ಕೈಹಿಡಿದು ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು.

ಪರಿಶಿಷ್ಟ ಜಾತಿಯ 61, ಪರಿಶಿಷ್ಟ ಪಂಗಡದ 26, ಹಿಂದುಳಿದ ವರ್ಗದ 18, ವೀರಶೈವ ಲಿಂಗಾಯತ 4, ಅಂತರ್ಜಾತಿ ವಿವಾಹದ 11 ಜೋಡಿಗಳು, ವಿಶೇಷಚೇತನರ 4 ಜೋಡಿ ಸೇರಿದಂತೆ ಒಟ್ಟು 118 ಜೋಡಿಗಳು ನವದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಇದರಲ್ಲಿ ಮೈಸೂರು ಜಿಲ್ಲೆಯ 51, ಚಾಮರಾಜನಗರದ 37, ಮಂಡ್ಯ ಜಿಲ್ಲೆಯ 4, ಬೆಂಗಳೂರಿನ 3, ತಮಿಳುನಾಡಿನ 23 ಜೋಡಿಗಳು ಸುತ್ತೂರು ಶ್ರೀಕ್ಷೇತ್ರದಲ್ಲಿ ಮದುವೆಯಾಗಿದ್ದು ವಿಶೇಷವಾಗಿತ್ತು. ಇದರೊಂದಿಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಈವರೆಗೆ 3076 ಜೋಡಿಗಳು ವಿವಾಹವಾದಂತಾಗಿದೆ. ಎರಡು ದಶಕಗಳಿಂದಲೂ ಇಲ್ಲಿ ಸಾಮೂಹಿಕ ವಿವಾಹ ನಡೆಸಿಕೊಂಡು ಬರಲಾಗುತ್ತಿದ್ದು, ಬಡ ಹಾಗೂ ಮಧ್ಯಮ ವರ್ಗದವರ ನೆರವಿಗೆ ಶ್ರೀಮಠ ಧಾವಿಸಿದ್ದು ವರನಿಗೆ ಪಂಚೆ, ಶರ್ಟ್ ಹಾಗೂ ವಲ್ಲಿ, ವಧುವಿಗೆ ಸೀರೆ, ರವಿಕೆ, ಮಾಂಗಲ್ಯ, ಕಾಲುಂಗುರವನ್ನು ನೀಡಲಾಯಿತು.

ಅಂತರ್ಜಾತಿ ಜೋಡಿಗಳು: ದಾವಣಗೆರೆಯ ಹನುಮನಹಳ್ಳಿಯ ಸಿಂಧು ಮತ್ತು ಚಾಮರಾಜನಗರ ಜಿಲ್ಲೆಯ ಕಾವುದವಾಡಿ ಎಂ.ಸುದೀಪ್, ಹೊನ್ನಾವರ ತಾಲೂಕಿನ ಪವಿತ್ರ ನಾಯರ್ ಮತ್ತು ಮೈಸೂರಿನ ಹೆಚ್.ಸಿ.ಪ್ರದೀಪ್ ಕುಮಾರ್, ಕಡೂರು ತಾಲೂಕಿನ ಬಿ.ಸಿ.ಲಾವಣ್ಯ ಮತ್ತು ನಂಜನಗೂಡಿನ ಬಿಳುಗಲಿ ಗ್ರಾಮದ ಎಸ್.ಮಹದೇವಸ್ವಾಮಿ, ನಂಜನಗೂಡು ಪಟ್ಟಣದ ಎಂ.ರಶ್ಮಿ ಮತ್ತು ವಕ್ಕಲಗೇರಿಯ ಕೆ.ರವಿ, ಚಾಮಲಾಪುರ ಬೀದಿಯ ಆರ್.ಸೌಮ್ಯ ಮತ್ತು ಚಾಮರಾಜನಗರದ ಬಸವಣ್ಣ, ನಂಜನಗೂಡಿನ ಹನುಮನ ಪುರದ ಎಸ್.ಸೌಮ್ಯ ಮತ್ತು ಸಂತೆಮರಳ್ಳಿಯ ಎಂ.ಎನ್.ಚಂದನ್, ಗುಂಡ್ಲುಪೇಟೆಯ ಕೆ.ನಂದಿನಿ ಮತ್ತು ಅದೇ ಗ್ರಾಮದ ಎಸ್. ಸಂಜಯ್, ಕೆಆರ್.ಪೇಟೆಯ ಕೆ.ಕಾವ್ಯ ಮತ್ತು ಮೈಸೂರಿನ ವಿ.ಪ್ರವೀಣ್ ಕುಮಾರ್, ಮೈಸೂರಿನ ಜಿ.ಗೀತಾ ಮತ್ತು ನಿಮಿಷಾಂಬ ನಗರದ ಆರ್.ಮದನ್‌ಕುಮಾರ್, ವಿಶೇಷಚೇತನ ಜೋಡಿಗಳಲ್ಲಿ ಒಂದಾದ ಎಂ.ಸೌಮ್ಯ ಮತ್ತು ರಾಜು ಅಂತರ್ಜಾತಿ ವಿವಾಹವಾದರು.

ಗುಂಡ್ಲುಪೇಟೆ ತಾಲೂಕಿನ ರಂಗನಾಥಪುರದ ಸಿ.ಚಿಕ್ಕಣ್ಣ ಚಿಕ್ಕವಯಸ್ಸಿನಲ್ಲಿಯೇ ಅಪಘಾತ ಸಂಭವಿಸಿ ಬಲಗಾಲು ಕಳೆದುಕೊಂಡರು. ಆದರೂ ಧೃತಿಗೆಡದೆ ಚಿಲ್ಲರೆ ಅಂಗಡಿ ಇಟ್ಟುಕೊಂಡು ಸ್ವಾಭಿಮಾನದ ಬದುಕು ಕಟ್ಟಿಕೊಂಡಿರುವ ಚಿಕ್ಕಣ್ಣಗೆ ಅದೇ ಗ್ರಾಮದ ಚಿಕ್ಕತಾಯಮ್ಮ ಮದುವೆಯಾಗಿ ಹೊಸಬಾಳು ನೀಡಿದರು. ಯಳಂದೂರು ತಾಲೂಕಿನ ಚಂಗನಹಳ್ಳಿ ಗ್ರಾಮದ ಬಿ.ಮಹದೇವಮ್ಮಗೆ ಬಲಗಾಲು, ಬಲಕಣ್ಣು ಇಲ್ಲ ಆದರೂ ಸಹ ಚಾಮರಾಜನಗರ ಸಿದ್ದರಾಜು ಅವರಿಗೆ ಹೊಸಬಾಳು ನೀಡಿದರು.

ಇದೇ ಸಂದರ್ಭದಲ್ಲಿ ಬೀದರ್ ಜಿಲ್ಲೆಯ ಗೊರಾಟ ಮಠದ ರಾಜಶೇಖರ ಶಿವಾಚಾರ್ಯ ಸ್ವಾಮಿಜೀ ಮಾತನಾಡಿ, ಮನುಷ್ಯ ಜೀವನದ 4 ಆಶ್ರಮಗಳಲ್ಲಿ ಗೃಹಸ್ಥಾಶ್ರಮ ಬಲಿಷ್ಠವಾಗಿದೆ. ನಿಮ್ಮ ಬದುಕಿನ ಉದ್ದಕ್ಕೂ ಸಂತೋಷದಿಂದ ದಾಂಪತ್ಯ ಜೀವನದ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಹೋಗುವುದು ನವ ಜೋಡಿಗಳ ಕರ್ತವ್ಯವಾಗಿದೆ. ನೀವೆಲ್ಲಾ ಬಂಗಾರದ ವ್ಯಾಮೋಹ ಬಿಟ್ಟು ಸದಾಚಾರ, ಸವಿನಯ ಎಂಬ ಆಭರಣವನ್ನು ಧರಿಸಿ ಪರಸ್ಪರ ಅರ್ಥ ಮಾಡಿಕೊಂಡು ಜೀವನ ನಡೆಸಿದರೆ ನಿಮ್ಮ ಬದುಕಿಗೆ ಅರ್ಥಬರುತ್ತದೆ ಎಂದು ಕಿವಿಮಾತು ಹೇಳಿದರು.

ಕಾಗಿನೆಲೆ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಮಾತನಾಡಿ, ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜಾತಿಯತೆಯನ್ನು ಬಿಟ್ಟು ಒಲವೇ ನಮ್ಮ ಬದುಕು ಎಂದು ತಿಳಿದು ಜೋಡಿಗಳು ಅಂತರ್ಜಾತಿ ವಿವಾಹವಾಗಿರುವುದು ಖುಷಿ ತಂದಿದೆ. ವರದಕ್ಷಿಣೆ ಪಿಡುಗು ಸಮಾಜದಿಂದ ದೂರವಾಗಲು ಇಂತಹ ಸಾಮೂಹಿಕ ವಿವಾಹಗಳು ಹೆಚ್ಚು ನಡೆಯಬೇಕು ಎಂದರಲ್ಲದೆ, ನೀವು ವೈಮನಸ್ಸು ಬಿಟ್ಟು ಪರಸ್ಪರ ಅರಿತು ಸುಂದರ ಜೀವನ ನಡೆಸಿ ಎಂದು ಶುಭ ಹಾರೈಸಿದರು.

ಸಮಾರಂಭದಲ್ಲಿ ಸುತ್ತೂರು ದೇಶೀಕೇಂದ್ರಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ತಿರುವನಂತಪುರದ ಶಾಂತಗಿರಿ ಆಶ್ರಮದ ಸ್ವಾಮಿ ಗುರುರತ್ನಂ ಜ್ಞಾನ ತಪಸ್ವಿ, ಬೆಂಗಳೂರಿನ ಜಯನಗರ ಶಾಸಕ ಸಿ.ಕೆ.ರಾಮಮೂರ್ತಿ, ಅಮೆರಿಕಾ ಕನ್ನಡ ಕೂಟಗಳ ಅಧ್ಯಕ್ಷ ಡಾ.ಅಮರನಾಥ್, ಉದ್ಯಮಿ ಮೂಲ್ ಚಂದ್, ವಿ.ವೀರಪ್ಪನ್, ಪ್ರಭುದೇವ, ಜಯಶಂಕರ, ಶರತ್ ಪುಟ್ಟಬುದ್ಧಿ ನೂತನ ವಧುವರಿಗೆ ಆಶೀರ್ವಾದ ಮಾಡಿ, ಶುಭ ಹಾರೈಸಿದರು.

ಮಾತಿಲ್ಲದೆ ಪ್ರೀತಿಸಿದ ಜೋಡಿಗಳು



ಪ್ರೀತಿಗೆ ಬಡತನ, ಜಾತಿ, ಅಂಗವೈಕಲ್ಯತೆ, ಪೋಷಕರ ವಿರೋಧ ಯಾವುದೂ ಅಡ್ಡಿಯಾಗದು ಎಂಬುದಕ್ಕೆ ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಸಾಮೂಹಿಕ ವಿವಾಹ ಸಾಕ್ಷಿಯಾಯಿತು. ಶ್ರೀರಂಗಪಟ್ಟಣ ತಾಲೂಕಿನ ಪಿ.ಹೊಸಹಳ್ಳಿ ಗ್ರಾಮದ ಎಂ.ಸೌಮ್ಯ ಮತ್ತು ಅಮೆಜಾನ್ ಕಂಪನಿಯ ಉದ್ಯೋಗಿ ಮೈಸೂರಿನ ತಿಲಕ್‌ನಗರದ ರಾಜು ಇಬ್ಬರಿಗೂ ಮಾತುಬಾರದು ಜೊತೆಗೆ ಇಬ್ಬರ ಜಾತಿಗಳೂ ಬೇರೆ, ಬೇರೆ ಆದರೂ ಸಹ ಇಬ್ಬರೂ ಪರಸ್ಪರ ಪ್ರೀತಿಸಿ ಸಾಮೂಹಿಕ ವಿವಾಹದಲ್ಲಿ ಸತಿಪತಿಯಾದರು.

ಪೋಲಿಯೋ ಪೀಡಿತಳಿಗೆ ಬಾಳು ನೀಡಿದ ರೈತ



ಚಿಕ್ಕವಯಸ್ಸಿನಲ್ಲಿಯೇ ಪೋಲೀಯೋ ಪೀಡಿತರಾಗಿ ಎರಡೂ ಕಾಲುಗಳನ್ನು ಕಳೆದುಕೊಂಡ ಚಾಮರಾಜನಗರದ ಮೂಡಲ ಅಗ್ರಹಾರದ ಬಿ.ಮೇಘಳಿಗೆ ಅದೇ ಗ್ರಾಮದ ರೈತ ಬಸವರಾಜಪ್ಪ ಬಾಳು ನೀಡಿ ಮಾನವೀಯತೆ ಮೆರೆದರು. 2 ಕಾಲು ಇಲ್ಲದೆ ಇದ್ದರೂ ಸಹ ಆನ್‌ಲೈನ್ ಕೆಲಸದ ಮೂಲಕ ಸ್ವಾಭಿಮಾನದ ಬದುಕು ನಡೆಸುತ್ತಿರುವ ಮೇಘ ಇಬ್ಬರೂ ಸಹ ಹೊಸ ಜೀವನಕ್ಕೆ ಕಾಲಿಡುವ ಮೂಲಕ ಬದುಕಿನ ಹೊಸ ಭರವಸೆಗೆ ನಾಂದಿ ಹಾಡಿದರು.



ಮಠಗಳ ದಾಸೋಹದಿಂದ ಪ್ರೇರಿತನಾಗಿ ನಾನು ಸಿಎಂ ಆಗಿದ್ದ ವೇಳೆ ಮಧ್ಯಾಹ್ನದ ಬಿಸಿಯೂಟ ಆರಂಭಿಸಿದೆ

ಸುತ್ತೂರು ಭಜನಾ ಮೇಳ ಉದ್ಘಾಟಿಸಿದ ಮಾಜಿ ಸಿಎಂ ಎಸ್.ಎಂ. ಕೃಷ್ಣ ಹೇಳಿಕೆ



ಜಾತ್ರಾ ಮಹೋತ್ಸವದಲ್ಲಿ ರಾಜ್ಯಮಟ್ಟದ ಭಜನಾ ಮೇಳವನ್ನು ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಉದ್ಘಾಟಿಸಿದರು.

ನಂಜನಗೂಡು, ಫೆ.7– ಮಠಗಳ ಅನ್ನದಾಸೋಹ ಸಂಸ್ಕೃತಿಯಿಂದ ಪ್ರೇರೇಪಿತನಾಗಿ ನಾನು ಮುಖ್ಯಮಂತ್ರಿಯಾಗಿದ್ದ ವೇಳೆಯಲ್ಲಿ ಸರ್ಕಾರಿ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ಪ್ರಾರಂಭಿಸಿದೆ ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ ಕೃಷ್ಣ ತಿಳಿಸಿದರು.

ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದಲ್ಲಿ ರಾಜ್ಯಮಟ್ಟದ ಭಜನಾ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ 3 ವರ್ಷಗಳ ಕಾಲ ತೀವ್ರವಾದ ಬರಗಾಲವಿತ್ತು, ಆದರೂ ಸಹ ಶಾಲಾ ಮಕ್ಕಳು ಹಸಿದು ಪಾಠ ಕೇಳಲು ಆಗುವುದಿಲ್ಲ ಎಂಬ ಕಾರಣದಿಂದ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ಮುಂದುವರೆಸುವಂತೆ ಸೂಚನೆ ಕೊಟ್ಟಿದ್ದೆ. ಬಿಸಿಯೂಟ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದು ನನಗೆ ಖುಷಿ ಕೊಟ್ಟ ವಿಷಯ ಎಂದರಲ್ಲದೆ, ರಾಜ್ಯದಲ್ಲಿ ಬರಗಾಲ ಮತ್ತು ವರನಟ ಡಾ.ರಾಜ್‌ಕುಮಾರ್ ಅವರ ಅಪಹರಣದಿಂದ ರಾಜ್ಯದಲ್ಲಿ ಸಾಕಷ್ಟು ಅಡಚಣೆಗಳುಂಟಾಗಿ ಕತ್ತಲು ಕವಿದ ವಾತಾವರಣವಿತ್ತು. ಆ ಸನ್ನಿವೇಶದಲ್ಲಿ ಚುಂಚನಗಿರಿಯ ಬಾಲಗಂಗಾಧರನಾಥ ಸ್ವಾಮೀಜಿ, ಸುತ್ತೂರಿನ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿರವರು ನೀಡಿದ ಧೈರ್ಯದಿಂದ ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಯಿತು ಎಂದರು.

ಸಂಸದೆ ಸುಮಲತಾ ಅಂಬರೀಶ್ ಮಾತನಾಡಿ, ದೇಶದಲ್ಲಿ ಹೆಚ್ಚಿನ ಸಂಖ್ಯೆಯ ಧಾರ್ಮಿಕ ಸಂಸ್ಥೆಗಳಿವೆ. ಆದರೆ ಕೆಲವು ಸಂಸ್ಥೆಗಳು ದಾಸೋಹ, ಶೈಕ್ಷಣಿಕ ಕೊಡುಗೆ ಮೂಲಕ ಸಮಾಜದಲ್ಲಿ ಜನರಿಗೆ ನೆರವಾಗುತ್ತಿವೆ. ಅದರಲ್ಲಿ ಸುತ್ತೂರು ಮಠದ ಸಮಾಜ ಸೇವೆ ಅನನ್ಯವಾದದ್ದು ಎಂದರು.

ವಿಧಾನಪರಿಷತ್‌ನ ವಿರೋಧ ಪಕ್ಷದ ನಾಯಕ ಕೋಟಾ ಶ್ರೀನಿವಾಸ ಪೂಜಾರಿ ಮಾತನಾಡಿ, ಸಮಾಜದಲ್ಲಿ ಮಠಗಳಿಗೆ ಉನ್ನತ ಸ್ಥಾನವಿದೆ. ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಮಠಗಳ ಪಾತ್ರ ಹೆಚ್ಚಿನದಾಗಿದೆ. ಮನುಕುಲ ಸಂಕಷ್ಟ ಪರಿಸ್ಥಿತಿಯಲ್ಲಿ ಸಿಲುಕಿದಾಗ ಮಠಗಳು ಜನರ ನೆರವಿಗೆ ಧಾವಿಸಿರುವುದು ಸ್ಮರಣೀಯ. ಸಮಾಜಕ್ಕೆ ಮಠಗಳು ಮಹತ್ತರವಾದ ಸೇವೆ, ನೆರವುಗಳನ್ನು ನಿರಂತರವಾಗಿ ನೀಡುತ್ತಿವೆ. ಶ್ರೀಗಳು ಜಾತ್ರೆ ಸಂದರ್ಭದಲ್ಲಿ ಭಜನಾ ಮೇಳ, ದೇಸೀ ಆಟಗಳ ಕಾರ್ಯಗಳನ್ನು ನಡೆಸುತ್ತಿರುವುದು ಶ್ಲಾಘನೀಯ ಎಂದರು.


ನಮ್ಮ ಬಾಲ್ಯದಲ್ಲಿ ನಾವುಗಳು ಭಜನೆಯಲ್ಲಿ ತೊಡಗುತ್ತಿದ್ದೆವು. ಭಜನೆ, ತಾಳ ಮುಂತಾದವುಗಳ ಸಂಸ್ಕೃತಿ ಮರೆಯಾಗುತ್ತಿದೆ ಎಂಬ ಆತಂಕದ ಪರಿಸ್ಥಿತಿಯಲ್ಲಿ ಶ್ರೀಗಳು ಜಾತ್ರಾ ಮಹೋತ್ಸವದಲ್ಲಿ ಭಜನೆ, ಜನಪದ ದೇಸೀ ಆಟಗಳು ಮುಂತಾದ ಕಾರ್ಯಗಳನ್ನು ಆಯೋಜಿಸುವ ಮೂಲಕ ನಮ್ಮ ದೇಸೀ ಕಲೆಗೆ ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ಹೇಳಿದರು.

ಸಮಾರಂಭದಲ್ಲಿ ಚಿತ್ರನಟ ಡಾರ್ಲಿಂಗ್ ಕೃಷ್ಣ, ಎಸ್.ಕೆ.ಮಂಜುನಾಥ್, ಉದ್ಯಮಿ ಮೂಲ್‌ಚಂದ್ ನೆಹರ್, ಶ್ರೀಶೈಲದ ಅಕ್ಕಮಹ ದೇವಿ ಚೈತನ್ಯ ಪೀಠದ ತಪೋ ರತ್ನ ಕರುಣಾ ದೇವಿ ಮಾತಾ, ಧಾರವಾಡದ ಗುರು ಬಸವ ಮಹಾಮನೆಯ ಬಸವಾನಂದ ಸ್ವಾಮಿಜಿಗಳು ಉಪಸ್ಥಿತರಿದ್ದರು.

ಡಿಕೆಶಿ, ಬಿ.ಆರ್. ನಾಯ್ಡು ವಿರುದ್ಧ FIR ದಾಖಲಿಸಲು ಕೋರ್ಟ್ ಸೂಚನೆ

ಬೆಂಗಳೂರು: ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಮತ್ತು ರಾಜ್ಯ ಕಾಂಗ್ರೆಸ್ ಸಾಮಾಜಿಕ ಜಾಲತಾಣಗಳ ಮುಖ್ಯಸ್ಥ ಬಿ.ಆರ್ ನಾಯ್ಡು ವಿರುದ್ಧ ಬಿಜೆಪಿ ನಾಯಕರು ನಡೆಸಿದ ಪ್ರತಿಭಟನೆಯ ನಕಲಿ ಫೋಟೋವನ್ನು ಬಳಸಿದ ಆರೋಪದ ಮೇಲೆ ಎಫ್‌ಐಆರ್ ದಾಖಲಿಸುವಂತೆ ಬೆಂಗಳೂರಿನ ವಿಶೇಷ ನ್ಯಾಯಾಲಯವು ಪೊಲೀಸರಿಗೆ ಸೂಚನೆ ನೀಡಿದೆ.

ಪ್ರಕರಣ ದಾಖಲಿಸಿ ಮಾರ್ಚ್ 30ರೊಳಗೆ ವರದಿ ಸಲ್ಲಿಸಲು ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಯ ಸ್ಟೇಷನ್ ಹೌಸ್ ಆಫೀಸರ್ ಅವರಿಗೆ ಉಲ್ಲೇಖಿಸಲಾಗಿದೆ. ಆರೋಪಿಗಳು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಇತರ ಮುಖಂಡರ ಮುಖಗಳನ್ನು ಮಾರ್ಫ್ ಮಾಡಿ ಕಾಂಗ್ರೆಸ್‌ನ ಅಧಿಕೃತ ಫೇಸ್‌ಬುಕ್ ಪುಟದಲ್ಲಿ ಪೋಸ್ಟ್ ಮಾಡಿದ್ದು, ಆ ನಾಯಕರ ವರ್ಚಸ್ಸು ಕೆಡಿಸುವ ಹುಸಿ, ಸುಳ್ಳು ಮತ್ತು ಕಪೋಲಕಲ್ಪಿತ ಫಲಕಗಳನ್ನು ಬಳಸಲಾಗಿದೆ ಎಂದು ಆರೋಪಿಸಿ, ಬಿಜೆಪಿ ಮುಖಂಡರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.



ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ಮೂರ್ತಿ ಕೆತ್ತಿದ ಮೈಸೂರಿನ ಹೆಮ್ಮೆಯ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಮಾಜಿ ಸಚಿವರು, ಹಾಲಿ ಅರಕಲಗೂಡು ಶಾಸಕರಾದ ಎ. ಮಂಜು ಅವರು ಆತ್ಮೀಯವಾಗಿ ಅಭಿನಂದಿಸಿದರು.

ಇಂದು ಬಿಜೆಪಿ ಜಿಲ್ಲಾ ವಿಶೇಷ ಕಾರ್ಯಕಾರಿಣಿ ಸಭೆ

ಮೈಸೂರು,ಫೆ.7(ಪಿಎಂ)– ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಫೆ.8ರಂದು ಆಯೋಜಿಸಿರುವ ಮೈಸೂರು ಗ್ರಾಮಾಂತರ ಜಿಲ್ಲೆಯ ಬಿಜೆಪಿ ಜಿಲ್ಲಾ ವಿಶೇಷ ಕಾರ್ಯಕಾರಿಣಿ ಸಭೆಯನ್ನು ರಾಜ್ಯ ರೈತ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸಲಿದ್ದಾರೆ. ಅಂದು ಬೆಳಗ್ಗೆ 9.45ಕ್ಕೆ ಉದ್ಘಾಟನೆ ನೆರವೇರಲಿದ್ದು, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಉತ್ತರಾಖಂಡ ವಿಧಾನಸಭೆಯಲ್ಲಿ ಯುಸಿಸಿ ಮಸೂದೆ ಅಂಗೀಕಾರ

ಈ ಕಾನೂನನ್ನು ಜಾರಿಗೆ ತಂದ ಭಾರತದ ಮೊದಲ ರಾಜ್ಯ!

ನವದೆಹಲಿ: ಉತ್ತರಾಖಂಡ ಇತಿಹಾಸ ಸೃಷ್ಟಿಸಿದ್ದು, ಇಂದು ವಿಧಾನಸಭೆ ಅಧಿವೇಶನದಲ್ಲಿ ಚರ್ಚೆಯ ನಂತರ ಏಕರೂಪ ನಾಗರಿಕ ಸಂಹಿತೆ ಮಸೂದೆ (ಯುಸಿಸಿ)ಯನ್ನು ಧ್ವನಿಮತದಿಂದ ಅಂಗೀಕರಿಸಲಾಯಿತು. ಇದರೊಂದಿಗೆ ಉತ್ತರಾಖಂಡ ಈ ಕಾನೂನನ್ನು ಜಾರಿಗೆ ತಂದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಪ್ರಸ್ತಾವನೆ ಅಂಗೀಕಾರಕ್ಕೂ ಮುನ್ನ ಮಸೂದೆ ಕುರಿತು ಮಾತನಾಡಿದ ಸಿಎಂ ಪುಷ್ಕರ್ ಸಿಂಗ್ ಧಾಮಿ, ನಮ್ಮ ಸಂವಿಧಾನ ರಚನೆಕಾರರು ಕಂಡ ಕನಸು ಇಂದು ನನಸಾಗಲಿದೆ. ನಾವು ಇತಿಹಾಸ ಸೃಷ್ಟಿಸಲಿದ್ದೇವೆ. ದೇಶದ ಇತರೆ ರಾಜ್ಯಗಳೂ ಇದೇ ಹಾದಿಯಲ್ಲಿ ಸಾಗಬೇಕು ಎಂದು ಹೇಳಿದರು. ಈಗ ಮಸೂದೆಯನ್ನು ರಾಜ್ಯಪಾಲರಿಗೆ ಕಳುಹಿಸಲಾಗುತ್ತದೆ. ಅವರು ಅಂಕಿತ ಹಾಕಿದ ಕೂಡಲೇ ಇದು ಕಾನೂನಾಗಿ ರೂಪುಗೊಳ್ಳಲಿದೆ. ಇದರೊಂದಿಗೆ ರಾಜ್ಯದ ಎಲ್ಲ ಜನರಿಗೂ ಒಂದೇ ಕಾನೂನು ಅನ್ವಯವಾಗಲಿದೆ. ಆದಾಗ್ಯೂ, ಅದರ ನಿಬಂಧನೆಗಳು ಪರಿಶಿಷ್ಟ ಪಂಗಡದ (ST) ಜನರಿಗೆ ಅನ್ವಯಿಸುವುದಿಲ್ಲ. 2022ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಏಕರೂಪ ನಾಗರಿಕ ಸಂಹಿತೆಯ ಭರವಸೆಯನ್ನು ಬಿಜೆಪಿ ನೀಡಿತ್ತು.

ಧಾಮಿ ಅವರ ಸರ್ಕಾರ ರಚನೆಯಾದ ನಂತರ, ಈ ಬಗ್ಗೆ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು 2.5 ಲಕ್ಷಕ್ಕೂ ಹೆಚ್ಚು ಸಲಹೆಗಳನ್ನು ಸ್ವೀಕರಿಸಿದ ನಂತರ ಯುಸಿಸಿಯ ಕರಡನ್ನು ಸಿದ್ಧಪಡಿಸಿತ್ತು. ಏಕರೂಪ ನಾಗರಿಕ ಸಂಹಿತೆ ಕಾನೂನನ್ನು ಜಾರಿಗೆ ತರಲಿರುವ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಉತ್ತರಾಖಂಡ ಪಾತ್ರವಾಗಲಿದೆ. ಇದಕ್ಕೂ ಮೊದಲು, ಗೋವಾದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಯಲ್ಲಿದೆ.

ಮಗ ಮತ್ತು ಮಗಳಿಗೆ ಸಮಾನ ಆಸ್ತಿ ಹಕ್ಕು: ಉತ್ತರಾಖಂಡ ಸರ್ಕಾರವು ಸಿದ್ಧಪಡಿಸಿದ ಏಕರೂಪ ನಾಗರಿಕ ಸಂಹಿತೆ ಮಸೂದೆಯು ಮಗ ಮತ್ತು ಮಗಳಿಗೆ ಅವರ ವರ್ಗವನ್ನು ಲೆಕ್ಕಿಸದೆ ಆಸ್ತಿಯಲ್ಲಿ ಸಮಾನ ಹಕ್ಕುಗಳನ್ನು ಖಾತ್ರಿಪಡಿಸಿದೆ.

ರಾಜ್ಯದ ಎಲ್ಲಾ ನಾಗರಿಕರಿಗೆ ಅವರ ಧರ್ಮವನ್ನು ಲೆಕ್ಕಿಸದೆ ಮದುವೆ, ವಿಚ್ಛೇದನ, ಭೂಮಿ, ಆಸ್ತಿ ಮತ್ತು ಪಿತ್ರಾರ್ಜಿತ ಕಾನೂನುಗಳಲ್ಲಿ ಸ್ಥಿರತೆಯನ್ನು ಖಾತ್ರಿಪಡಿಸುವ ಕಾನೂನು ರಚನೆಯನ್ನು ರಚಿಸುವುದು ಮಸೂದೆಯ ಪ್ರಾಥಮಿಕ ಉದ್ದೇಶವಾಗಿದೆ ವರದಿಗಳ ಪ್ರಕಾರ, ಮಸೂದೆಯನ್ನು ರಚಿಸಿದ ಸಮಿತಿಯ ಇತರ ಪ್ರಮುಖ ಶಿಫಾರಸುಗಳಲ್ಲಿ ಬಹುಪತ್ನಿತ್ವ (ಒಂದಕ್ಕಿಂತ ಹೆಚ್ಚು ವಿವಾಹಗಳು) ಮತ್ತು ಬಾಲ್ಯವಿವಾಹದ ಸಂಪೂರ್ಣ ನಿಷೇಧ ಸೇರಿವೆ. ಎಲ್ಲಾ ಧರ್ಮಗಳಲ್ಲಿ ಹೆಣ್ಣುಮಕ್ಕಳಿಗೆ ಏಕರೂಪದ ಮದುವೆಯ ವಯಸ್ಸು ಇರಬೇಕು. ವಿಚ್ಛೇದನಕ್ಕೆ ಅನುಸರಿಸಬೇಕಾದ ಇದೇ ರೀತಿಯ ಆಧಾರಗಳು ಮತ್ತು ಕಾರ್ಯವಿಧಾನಗಳಿವೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಖಾಸಗಿ ಆಸ್ಪತ್ರೆಗಳನ್ನು ಮೀರಿಸಿದ ಸೇವಾ ಸೌಲಭ್ಯ, ಗುಣಮಟ್ಟದ ಚಿಕಿತ್ಸೆ

ಭೇರ್ಯ ಸರ್ಕಾರಿ ಆಸ್ಪತ್ರೆಗೆ 'ಕಾಯಕಲ್ಪ ಯೋಜನೆ' ಪ್ರಶಸ್ತಿ



ಆರೋಗ್ಯ ಸಚಿವ ದಿನೇಶ್ ಗುಂಡೂರಾವ್‌ರಿಂದ ಕಾಯಕಲ್ಪ ಯೋಜನೆ ಪ್ರಶಸ್ತಿಯನ್ನು ಪಡೆದ ವೈದ್ಯರು ಹಾಗೂ ಸಿಬ್ಬಂದಿಗಳು.



ಭೇರ್ಯ ಪ್ರಾಥಮಿಕ ಆರೋಗ್ಯ ಕೇಂದ್ರ.

ಭೇರ್ಯ, ಫೆ.7– ಖಾಸಗಿ ಆಸ್ಪತ್ರೆಯನ್ನೂ ಮೀರಿಸುವ ಸೇವಾ ಸೌಲಭ್ಯ ಮತ್ತು ಗುಣಮಟ್ಟದ ವೈದ್ಯಕೀಯ ಸೇವೆ ನೀಡುತ್ತಿರುವ ಸಾಲಿಗ್ರಾಮ ತಾಲೂಕಿನ ಭೇರ್ಯ ಪ್ರಾಥಮಿಕ ಆರೋಗ್ಯ ಕೇಂದ್ರ ಮೈಸೂರು ಜಿಲ್ಲೆಯಲ್ಲಿ ಮೊದಲ ಸ್ಥಾನ ಗಳಿಸಿ ಕಾಯಕಲ್ಪ ಯೋಜನೆಯ ಪ್ರಶಸ್ತಿಗೆ ಭಾಜನವಾಗಿದೆ.

ರೋಗಿಗಳಿಗೆ ಮೂಲಸೌಕರ್ಯಗಳನ್ನು ಕಲ್ಪಿಸುವುದರೊಂದಿಗೆ ಸಮರ್ಪಕ ರೀತಿಯಲ್ಲಿ ಸ್ವಚ್ಛತೆ ಕಾಪಾಡಿಕೊಂಡು, ಗ್ರಾಮೀಣ ಪ್ರದೇಶದಲ್ಲಿ ಅತ್ಯುತ್ತಮ ಆಸ್ಪತ್ರೆ ಎಂದು ಪಾತ್ರವಾಗಿರುವ ಭೇರ್ಯ ಸರ್ಕಾರಿ ಆಸ್ಪತ್ರೆಯ ವೈದ್ಯರು ಗ್ರಾಮೀಣ ಪ್ರದೇಶದ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿ, ಈ ಪ್ರಶಸ್ತಿಗೆ ಕಾರಣರಾಗಿದ್ದಾರೆ.

ಅತೀ ಹೆಚ್ಚು ಜನಸಂಖ್ಯೆ: ಭೇರ್ಯ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರವು ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಜನಸಂಖ್ಯೆ ಹಾಗೂ ಅಕ್ಕಪಕ್ಕದ ಗಡಿ ಜಿಲ್ಲೆಯ ಗ್ರಾಮಗಳ ವ್ಯಾಪ್ತಿ ಹೊಂದಿದೆ. ಕೇಂದ್ರದ ವ್ಯಾಪ್ತಿಯಲ್ಲಿ ಸುಮಾರು 28 ಸಾವಿರ ಜನಸಂಖ್ಯೆ ಇದ್ದು, ನಿತ್ಯ ನೂರಾರು ಹೊರ ರೋಗಿಗಳಿಗೆ ಸಮರ್ಪಕ ವೈದ್ಯಕೀಯ ಸೇವೆಯನ್ನು ಕಲ್ಪಿಸಲು 5 ಉಪ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆ.

ಕೆಲವು ವರ್ಷಗಳ ಕಾಲ ಆರೋಗ್ಯ ಸಿಬ್ಬಂದಿಗಳು ಹಾಗೂ ಖಾಯಂ ವೈದ್ಯರು ಇಲ್ಲದೆ ಸ್ವಚ್ಛತೆ ಮರೀಚಿಕೆಯಾಗಿತ್ತು. ಕಳೆದ ಎರಡು ವರ್ಷಗಳಿಂದ ಆಸ್ಪತ್ರೆಯು ಸ್ವಚ್ಛತೆಯಿಂದ ಕೂಡಿ ರೋಗಿಗಳಿಗೆ ಉತ್ತಮ ಆರೋಗ್ಯ ಸೇವೆ ನೀಡುತ್ತಿದೆ. ಭೇರ್ಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರಾಜ್ಯಮಟ್ಟದ ಕಾಯಕಲ್ಪ ಪ್ರಶಸ್ತಿ ಹಾಗೂ ಎರಡು ಲಕ್ಷ ರೂಪಾಯಿ ನಗದು ಬಹುಮಾನವನ್ನು ನೀಡಿ ಗೌರವಿಸಲಾಯಿತು.

ಮೈಸೂರಿನಲ್ಲಿ ನಡೆದ ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾಯಕಲ್ಪ ರಾಜ್ಯ ಮಟ್ಟದ ಪ್ರಶಸ್ತಿ ಸಮಾರಂಭದಲ್ಲಿ ಭೇರ್ಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರಾಜ್ಯ ಮಟ್ಟದ ಕಾಯಕಲ್ಪ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಭೇರ್ಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಸೌಜನ್ಯ ಆಸ್ಪತ್ರೆಯ ಸಿಬ್ಬಂದಿಗಳೊಡನೆ ಪ್ರಶಸ್ತಿಯನ್ನು, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಂದ ಪಡೆದು ಕೊಂಡರು.

6 ರಾಷ್ಟ್ರೀಯ ಮಟ್ಟದಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಾದರಿ ಮಾಡುವ ಹಂಬಲ ಹೊಂದಿದ್ದೇನೆ, ಮೊದಲ ಆದ್ಯತೆ ಸ್ವಚ್ಛತೆ, ಸುರಕ್ಷತೆ, ಶುದ್ಧ ಕುಡಿಯುವ ನೀರು, ಅನೇಕ ವೈದ್ಯಕೀಯ ಸೌಲಭ್ಯಗಳು ಸೇರಿದಂತೆ ಎಲ್ಲವನ್ನೂ ಸಮರ್ಪಕವಾಗಿ ಒದಗಿಸುವ ನಿಟ್ಟಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸೂಚನೆ ನೀಡಿದ್ದೇನೆ. ಜಿಲ್ಲೆಯಲ್ಲಿ ಕಾಯಕಲ್ಪ ಪ್ರಶಸ್ತಿಗೆ ಭಾಜನವಾಗಿರುವ ಭೇರ್ಯ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಸೇರಿದಂತೆ ಎಲ್ಲರನ್ನು ಅಭಿನಂದಿಸುತ್ತೇನೆ.



-ಡಾ.ಡಿ.ನಟರಾಜು, ತಾಲೂಕು ಆರೋಗ್ಯಾಧಿಕಾರಿ, ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು.

ನಿವೃತ್ತ ತಹಶೀಲ್ದಾರ್ ಮನೆ ಮೇಲೆ ದಾಳಿ ಪ್ರಕರಣ

ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಗೃಹ ಸಚಿವರಿಗೆ ದೂರು

ತಿ.ನರಸೀಪುರ, ಫೆ.7– ನಿವೃತ್ತ ತಹಶೀಲ್ದಾರ್ ಹಾಗೂ ವಿಧಾನಪರಿಷತ್ ನೌಕರನ ಮನೆ ಮೇಲೆ ದಾಳಿ ಮಾಡಿ ದಾಂದಲೆ ನಡೆಸಿದ ಆರೋಪಿಗಳನ್ನು ಬಂಧಿಸದ ಬನ್ನೂರು ಠಾಣೆಯ ಪೊಲೀಸರ ನಡೆಯ ವಿರುದ್ಧ ಗೃಹ ಸಚಿವರಿಗೆ ದಾಳಿಯಿಂದ ನೊಂದವರು ದೂರು ನೀಡಿದ್ದಾರೆ.

ತಾಲೂಕಿನ ಸೋಮನಾಥಪುರ ಗ್ರಾಮದ ನಿವಾಸಿ, ಮಳವಳ್ಳಿ ತಾಲೂಕಿನಲ್ಲಿ ತಹಶೀಲ್ದಾರ್‌ರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದ ಎಂ.ಮಹದೇವಯ್ಯ ಹಾಗೂ ಅವರ ಪುತ್ರ ವಿಧಾನಪರಿಷತ್ ನೌಕರ ಎಂ.ವಿನೋದ್‌ಕುಮಾರ್ ಹಾಗೂ ಗ್ರಾಪಂ ಸದಸ್ಯೆ ಹೇಮಾವತಿ ಹಾಗೂ ಪುಷ್ಪವತಿ ಸೇರಿದಂತೆ ಇಬ್ಬರು ಮಕ್ಕಳು ವಾಸಿಸುತ್ತಿದ್ದ ಮನೆಯ ಮೇಲೆ ಐವರು ಆರೋಪಿಗಳ ತಂಡ ದಾಳಿ ನಡೆಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಕೊಲೆ ಬೆದರಿಕೆ ಒಡ್ಡಿದೆ ಎಂದು ಬನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಇದುವರೆಗೂ ಆರೋಪಿಗಳನ್ನು ಬಂಧಿಸಿಲ್ಲ ಎಂದು ವಿನೋದ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

ಪೊಲೀಸರ ನಡೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ವಿನೋದ್ ಕುಮಾರ್ ಆರೋಪಿಗಳಾದ ನಿಶಾಂತ್, ಗಜೇಂದ್ರ, ಪರಶುರಾಮ್, ಧೀಮಂತ್ ಹಾಗೂ ಕಲ್ಲಯ್ಯ ಅವರುಗಳು ಜ.29 ರ ರಾತ್ರಿ ನಮ್ಮ ಮನೆಗೆ ಏಕಾಏಕಿ ನುಗ್ಗಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಮನೆ ಬಾಗಿಲನ್ನು ಒಡೆದು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಬಿಡಿಸಲು ಬಂದ ನಾದಿನಿ ಹೇಮಾವತಿ, ಹೆಂಡತಿ ಪುಷ್ಪಾವತಿ ಹಾಗೂ ನನ್ನ ಮಕ್ಕಳನ್ನು ಎಳೆದಾಡಿ ಶಾಂತಿಭಂಗ ಉಂಟು ಮಾಡಿದ್ದಾರೆ ಎಂದು ಆರೋಪಿಸಿದರು.

ಘಟನೆ ಸಂಬಂಧ ಜ.30 ರಂದು ಈ ಐವರ ಮೇಲೆ ಗ್ರಾಪಂ ಸದಸ್ಯೆ ಹೇಮಾವತಿ ದೂರು ದಾಖಲಿಸಿದ್ದಾರೆ. ಬನ್ನೂರು ಠಾಣೆಯಲ್ಲಿ 143, 144, 448, 504, 323, 506, 354ಬಿ ಹಾಗೂ 149 ಕಲಂನಡಿ ಕೇಸು ದಾಖಲಾಗಿದೆ. ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಜರುಗಿಸುವಂತೆ ಕೋರಿ ಸಿಪಿಐ ಮನೋಜ್‌ಕುಮಾರ್, ಎಎಸ್‌ಪಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಲ್ಲಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಘಟನೆ ಸಂಬಂಧ ನಾನು ಗೃಹ ಸಚಿವರನ್ನು ಭೇಟಿ ಮಾಡಿ ಅವರ ಆಪ್ತ ಸಹಾಯಕರ ಮೂಲಕ ಎಸ್‌ಪಿಯವರಿಗೆ ಮಾತನಾಡಿಸಿದ್ದೇನೆ ಎಂದರು.

ನಂತರ ಎಸ್‌ಪಿ ಸೀಮಾಲಾಟ್ಕರ್ ಅವರು ಸಿಪಿಐ ಮನೋಜ್‌ಕುಮಾರ್ ಅವರು ವರ್ಗಾವಣೆಯಾಗಿದ್ದು, ಈಗ ಬಂದಿರುವ ಸಿಪಿಐ ಪುನೀತ್ ಅವರನ್ನು ಭೇಟಿ ಮಾಡುವಂತೆ ಹೇಳಿದ್ದಾರೆ. ಎಫ್‌ಐಆರ್ ದಾಖಲಾಗಿ 24 ಘಂಟೆಯೊಳಗೆ ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಬೇಕು. ಆದರೆ ಇಲ್ಲಿ ಪೊಲೀಸರು ಯಾರೊಬ್ಬರನ್ನು ಬಂಧಿಸುವ ಗೋಜಿಗೆ ಹೋಗಿಲ್ಲ. ಅವರು ಆರೋಪಿಗಳ ರಕ್ಷಣೆಗೆ ನಿಂತಿರಬಹುದೇನೋ ಎಂದು ಸಂಶಯ ವ್ಯಕ್ತಪಡಿಸಿದರು.

ನ್ಯಾಯಾಲಯದ ಮೆಟ್ಟಿಲೇರುತ್ತಾರಂತೆ ವಜಾಗೊಂಡ ನಕಲಿ ಶಿಕ್ಷಕ

ಹುಣಸೂರು, ಫೆ.7– ಪ್ರಾಮಾಣಿಕವಾಗಿ ಶಿಕ್ಷಕ ವೃತ್ತಿಗೆ ಸೇರಿ 25 ವರ್ಷ ಸೇವೆ ಸಲ್ಲಿಸಿ ಯಾವುದೇ ಕಳಂಕವಿಲ್ಲದೆ ವೃತ್ತಿ ನಿರ್ವಹಿಸಿದ ನನ್ನ ಮೇಲೆ ಆಡಳಿತಾತ್ಮಕ ಪಿತೂರಿ ನಡೆಸಿ ನಕಲಿ ಶಿಕ್ಷಕನೆಂದು ನನ್ನನ್ನು ಸೇವೆಯಿಂದ ವಜಾ ಮಾಡಿರುವ ಕ್ರಮವನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗುವುದಾಗಿ ವಜಾಗೊಂಡಿರುವ ಶಿಕ್ಷಕ ಲೋಕೇಶ್ ತಿಳಿಸಿದರು.

ನಗರದ ಪತ್ರಕರ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನನ್ನ ಕುಟುಂಬಕ್ಕೆ ಅನ್ಯಾಯವಾಗಿದ್ದು, ಇದರಿಂದ ನನ್ನ ಕುಟುಂಬಕ್ಕೆ ಮಾನಸಿಕವಾಗಿ ನೋವುಂಟಾಗಿದೆ. ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ಮೋಸದ ದಾಖಲಾತಿಯಿಂದ ನಾನು ನಕಲಿ ಶಿಕ್ಷಕನಾಗಿದ್ದೇನೆ ಹೊರತು, ನಾನು ನನ್ನ ವೃತ್ತಿಗಾಗಲಿ ಇಲಾಖೆಗಾಗಲಿ ಮೋಸ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಅಧಿಕಾರಿಗಳು ಮತ್ತೊಮ್ಮೆ ದಾಖಲಾತಿಗಳನ್ನು ಪರಿಶೀಲನೆ ನಡೆಸಿ, ನನಗಾಗಿರುವ ಅನ್ಯಾಯವನ್ನು ಸರಿಪಡಿಸಿ ನ್ಯಾಯ ದೊರಕಿಸಿಕೊಡಿ ಎಂದು ಮನವಿ ಮಾಡಿದ್ದೇನೆ. ನನ್ನ ಬಳಿ ಎಲ್ಲಾ ದಾಖಲೆಗಳು ಸರಿ ಇದ್ದು, ದಾಖಲೆಗಳನ್ನು ಬಿ.ಇ.ಓ ಕಚೇರಿಗೆ ಸಲ್ಲಿಸಿದ್ದರೂ ಯಾವುದೇ ದಾಖಲಾತಿ ಇಲ್ಲ ಎಂದು ಮೇಲಾಧಿಕಾರಿಗಳಿಗೆ ಹೇಳುತ್ತಿರುವುದು ಪಿತೂರಿಯ ಸಂಚಾಗಿದೆ ಈ ಸಂಬಂಧ ಇಲಾಖೆ ವಿರುದ್ಧ ನ್ಯಾಯ ಕೋರಿ ನ್ಯಾಯಾಲಯದ ಮೊರೆ ಹೋಗುತ್ತೇನೆ. ನನ್ನ ಕುಟುಂಬದವರೆಲ್ಲರೂ ಜೀವಿತವಾಗಿದ್ದು ಯಾರು ಮರಣ ಹೊಂದಿಲ್ಲ, ನನ್ನ ಕುಟುಂಬದ ಮೇಲೆ ಕೆಲವರು ಟಾರ್ಗೆಟ್ ಮಾಡುತ್ತಿದ್ದಾರೆ. ಇದಕ್ಕೆ ನ್ಯಾಯಾಲಯದಿಂದಲೇ ಸತ್ಯವನ್ನು ಬೆಳಕಿಗೆ ತರುತ್ತೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಜಾಗೊಂಡಿರುವ ಶಿಕ್ಷಕ ಲೋಕೇಶ್ ಅವರ ಸಹೋದರರಾದ ತಿಮ್ಮೇಗೌಡ, ವೆಂಕಟೇಶ, ಸುರೇಶ್, ನಿಂಗೇಗೌಡ, ಅಕ್ಕ ಲಕ್ಷ್ಮೀದೇವಿ ಹಾಗೂ ಪತ್ನಿ ಶೋಭ ಸೇರಿದಂತೆ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ಹೆಡಿಯಾಲದಲ್ಲಿ ಸಂವಿಧಾನ ಜಾಗೃತಿ ಜಾಥಾಕ್ಕೆ ಸ್ವಾಗತ



ಹೆಡಿಯಾಲದಲ್ಲಿ ಸಂವಿಧಾನ ಜಾಗೃತಿ ಜಾಥಾವನ್ನು ಸ್ವಾಗತಿಸಲಾಯಿತು.

ಮಲ್ಕುಂಡಿ, ಫೆ.7– ಶಿಕ್ಷಣದಿಂದ ಮಾತ್ರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಬೆಳೆಯಲು ಸಾಧ್ಯ ಎಂದು ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ತಿಳಿಸಿದರು.

ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಪಂನಲ್ಲಿ ಸಂವಿಧಾನ ಜಾಗೃತಿ ಜಾಥಾಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಸಂವಿಧಾನ ಜಾರಿಗೆ ಬಂದು ಇಷ್ಟು ವರ್ಷಗಳಾದರೂ ನಾವಿನ್ನೂ ಸಂವಿಧಾನ ಅರ್ಥ ಮಾಡಿಕೊಂಡಿಲ್ಲ. ಇಂದು ಕೂಡ ಅಸ್ಪೃಶ್ಯತೆ ನಡೆಯುತ್ತಿದೆ. ಅದನ್ನು ನಿರ್ಮೂಲನೆ ಮಾಡಲು ಅಂಬೇಡ್ಕರ್ ಅವರು ದೇಶಕ್ಕೆ ಬೃಹತ್ ಸಂವಿಧಾನ ನೀಡಿ ದೇಶದ ಎಲ್ಲಾ ಜನಾಂಗದವರು ಜೀವನ ನಡೆಸಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಹೀಗಾಗಿ ಸಂವಿಧಾನ ಅರಿತು ಜೀವನ ಸಾಗಿಸಬೇಕಿದೆ ಎಂದರು. ಈ ವೇಳೆ ಸಮಾಜ ಕಲ್ಯಾಣ ಅಧಿಕಾರಿ ಭೀಮ್‌ರಾವ್ ವಡ್ಡರ್, ಗ್ರಾಪಂ ಅಧ್ಯಕ್ಷೆ ಮಹಾದೇವಿ, ಉಪಾಧ್ಯಕ್ಷ ನಾಗೇಶ್, ಸದಸ್ಯರಾದ ಗೋವಿಂದರಾಜು, ಅಸ್ರಫ್ ಅಲಿ, ನೆಹಮತ್ ಉಲ್ಲಾ, ಚನ್ನಪ್ಪ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಂಜುನಾಥ್, ಮುಖಂಡರಾದ ಸುಬ್ರಹ್ಮಣ್ಯ, ಪಟೇಲ್ ಮಹದೇವಪ್ಪ, ರಂಗಸ್ವಾಮಿ, ಪಿಡಿಓ ನಾಗರಾಜು ಸೇರಿದಂತೆ ಇತರರಿದ್ದರು.

ಬಣ್ಣಾರಿ ಸಕ್ಕರೆ ಕಾರ್ಖಾನೆ ಮುಂದೆ ರೈತರ ಪ್ರತಿಭಟನೆ



ಸಕ್ಕರೆ ಕಾರ್ಖಾನೆ ಮುಂದೆ ಪ್ರತಿಭಟನಾ ಧರಣಿ ನಡೆಸುತ್ತಿರುವ ರೈತರು.

ನಂಜನಗೂಡು, ಫೆ.7–ತಾಲೂಕಿನ ಅಳಗಂಚಿ ಗ್ರಾಮದ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಮುಂಭಾಗ ಬುಧವಾರ ಜನಾಂದೋಲನ ಮಹಾಮೈತ್ರಿ ಹಾಗೂ ರೈತ ಸಂಘದ ನೇತೃತ್ವದಲ್ಲಿ ಕಾರ್ಖಾನೆಗೆ ಭೂಮಿ ನೀಡಿದ ರೈತರು ಖಾಯಂ ಉದ್ಯೋಗ ನೀಡುವಂತೆ ಆಗ್ರಹಿಸಿ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ಆರಂಭಿಸಿದರು.

ಜನಾಂದೋಲನ ಮಹಾಮೈತ್ರಿ ಸಂಘಟನೆಯ ಜಿಲ್ಲಾ ಸಂಚಾಲಕ ಉಗ್ರನರಸಿಂಹೇಗೌಡ ಮಾತನಾಡಿ, 1992ರಲ್ಲಿ ಈ ಭಾಗದ ರೈತರ 400 ಎಕರೆ ಭೂಮಿಯನ್ನು ಕಾರ್ಖಾನೆ ಸ್ಥಾಪಿಸಲು ಪಡೆದ ಕಾರ್ಖಾನೆ ಆಡಳಿತ ಮಂಡಳಿ ಭೂಮಿ ಕಳೆದುಕೊಂಡ ರೈತರಿಗೆ ಖಾಯಂ ಉದ್ಯೋಗ ನೀಡುವ ಭರವಸೆ ನೀಡಿತ್ತು, ರೈತರ ಮಕ್ಕಳು ಕಳೆದ 14 ವರ್ಷಗಳಿಂದ ಕಾರ್ಖಾನೆಯಲ್ಲಿ ಹೊರಗುತ್ತಿಗೆ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇವರಿಗೆ ಕನಿಷ್ಠ ವೇತನ, ಇಎಸ್ ಪಿಫ್ ಸೌಲಭ್ಯಗಳನ್ನು ನೀಡುತ್ತಿಲ್ಲ. ಕಳೆದ ವರ್ಷ ಸೆಪ್ಟಂಬರ್ ತಿಂಗಳಿನಲ್ಲಿ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಸಮಿತಿ ರಚಿಸಿ ಭೂಮಿ ಕಳೆದುಕೊಂಡ ರೈತರ ಮಕ್ಕಳಿಗೆ ಡಿಸೆಂಬರ್ ತಿಂಗಳಿನಲ್ಲಿ ಖಾಯಂ ಉದ್ಯೋಗ ನೀಡುವ ಭರವಸೆ ನೀಡಲಾಗಿತ್ತು. ಆದರೆ ಭರವಸೆ ಈಡೇರಿಲ್ಲ, ಹೀಗಾಗಿ ನಮಗೆ ನ್ಯಾಯ ಸಿಗುವವರೆಗೆ, ಕಾರ್ಖಾನೆ ಮುಂಭಾಗ ಅನಿರ್ಧಿಷ್ಠಾವದಿ ಧರಣಿ ಸತ್ಯಾಗ್ರಹ ನಡೆಸುತ್ತೇವೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾ ಸಂಚಾಲಕರ, ಆಕಾಶ್ ಕುಮಾರ್, ನಂಜುಂಡ, ಮಹೇಶ್, ಕೆ.ಪುನೀತ್, ರಾಜು, ಶ್ರೀಕಂಠ, ಮಂಜುನಾಥ್, ಬಸವಣ್ಣ ನಾಯ್ಕ ಉಪಸ್ಥಿತರಿದ್ದರು.





ಆಕಸ್ಮಿಕವಾಗಿ ಮನೆಗೆ ಬೆಂಕಿ ಬಿದ್ದು, ಅಪಾರ ಪ್ರಮಾಣದ ವಸ್ತುಗಳು ಭಸ್ಮವಾಗಿದೆ. ಬೆಟ್ಟದಪುರ ಗ್ರಾಮದ ನಿವಾಸಿ ಕೃಷ್ಣಪ್ರಸಾದ್ ಅವರ ನಾಡಹೆಂಚಿನ ಮನೆಯಲ್ಲಿ ನೀರು ಕಾಯಲೆಂದು ಹಾಕಿದ್ದ ಬೆಂಕಿಯಿಂದ ಈ ಅನಾಹುತ ಸಂಭವಿಸಿದ್ದು, ಮನೆಯ ವಸ್ತುಗಳೆಲ್ಲವೂ ಬೆಂಕಿಗೆ ಆಹುತಿಯಾಗಿದೆ. ಪಿರಿಯಾಪಟ್ಟಣದ ಅಗ್ನಿಶಾಮಕ ದಳದವರು ತಕ್ಷಣ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿ ಭಾರಿ ಅನಾಹುತ ತಪ್ಪಿಸಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕು ಆರೋಗ್ಯದಲ್ಲಿ ಹಿಂದುಳಿದಿದೆ

ಸಾರ್ವಜನಿಕ ಆಸ್ಪತ್ರೆಯ ಪ್ರಸೂತಿ ತಜ್ಞೆ ಡಾ. ಪೂರ್ಣಿಮಾ ಕಳವಳ



ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ತಾಲೂಕು ಮಟ್ಟದ ವಿಚಾರಗೋಷ್ಠಿಯನ್ನು ಸಾರ್ವಜನಿಕ ಆಸ್ಪತ್ರೆಯ ಪ್ರಸೂತಿ ತಜ್ಞೆ ಡಾ.ಪೂರ್ಣಿಮಾ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಫೆ.7– ತಾಲೂಕು ಅಭಿವೃದ್ಧಿ ಹೊಂದುತ್ತಿರುವುದು ಸಂತೋಷದ ವಿಚಾರ. ಆದರೆ ಆರೋಗ್ಯದಲ್ಲಿ ಹಿಂದೆ ಇರುವುದು ಆತಂಕದ ವಿಚಾರ ಎಂದು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಪ್ರಸೂತಿ ತಜ್ಞೆ ಡಾ. ಪೂರ್ಣಿಮಾ ಆತಂಕ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ತಾಲೂಕು ಮಟ್ಟದ ವಿಚಾರ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಮತೋಲನ ಆಹಾರ ಸಿಗದೆ ಇಂದು ಬಹುತೇಕ ಗ್ರಾಮೀಣ ಮಹಿಳೆಯರು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಇದರಿಂದ ಹೆಚ್ಚು ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ರಾಗಿ, ನವಣೆ, ಸಜ್ಜೆ, ಜೋಳ ಸೇರಿದಂತೆ ಸಿರಿ ಧಾನ್ಯಗಳನ್ನು ತಿನ್ನುವ ಅಭ್ಯಾಸ ಕಡಿಮೆ ಆಗಿರುವುದರಿಂದ ಹೆಚ್ಚು ಸಮಸ್ಯೆಗಳಿಗೆ ತುತ್ತಾಗುತ್ತಿದ್ದೇವೆ ಎಂದ ಅವರು, ನಮ್ಮ ದೇಶದಲ್ಲಿ ಸಿಗುವ ದೇಶೀಯ ಉತ್ಪನ್ನವನ್ನು ಮರೆಯುತ್ತಿದ್ದೇವೆ. ಅನ್ನ ತಿನ್ನುವ ಅಭ್ಯಾಸ ಕಡಿಮೆ ಮಾಡಿದರೆ ಸ್ವಲ್ಪಮಟ್ಟಿಗೆ ಅನಾರೋಗ್ಯದಿಂದ ಪಾರಾಗಬಹುದು ಎಂದು ತಿಳಿಸಿದರು.

ಪ್ರಸ್ತುತ 18 ವರ್ಷದೊಳಗಿನ ಹೆಣ್ಣು ಮಕ್ಕಳು ಹೆಚ್ಚು ಬಿಳಿ ಮುಟ್ಟು ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ ಎಂದರೆ ಯಾವ ರೀತಿ ಚಿಕಿತ್ಸೆ ಕೊಡಲು ಸಾಧ್ಯ. ಹಾಗಾಗಿ ಸಮತೋಲನ ಆಹಾರವನ್ನು ಬಳಸಿ ಎಂದು ಸಲಹೆ ನೀಡಿದ ವೈದ್ಯರು, ದುಡ್ಡು ಮುಖ್ಯ ಅಲ್ಲಾ, ಆರೋಗ್ಯ ಮುಖ್ಯ ಎಂಬುದನ್ನು ಕೋವಿಡ್ ಬಂದ ನಂತರ ಗೊತ್ತಾಗಿದೆ ಎಂದರು. ಶಾರೀರಿಕವಾಗಿ ಹೆಣ್ಣು ಮಕ್ಕಳು ಬೆಳವಣಿಗೆ ಆಗಿರುವುದಿಲ್ಲ. ಅವಧಿಗಿಂತ ಮುಂಚೆ ಗರ್ಭ ಧರಿಸುತ್ತಾರೆ. ಇದರಿಂದ ಆರೋಗ್ಯದ ಮೇಲೆ ಪ್ರಭಾವ ಬೀರುತ್ತದೆ. ಹಾಗಾಗಿ ಮನೆಯ ಹಿರಿಯರು 18 ವರ್ಷಕ್ಕಿಂತ ಒಳಗೆ ಮದುವೆ ಮಾಡ ಬೇಡಿ ಎಂದರು.

ಪ್ರಾದೇಶಿಕ ಯೋಜನ ನಿರ್ದೇಶಕ ಜಯರಾಮ ನೆಲ್ಲಿತ್ತಾಯ ಮಾತನಾಡಿ ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಕಳೆದ ನಲವತ್ತು ವರ್ಷಗಳಿಂದ ರಾಜ್ಯದ ನೊಂದ ಮಹಿಗೆ ಸ್ಪಂದಿಸಿ ನೆರವಾಗುವ ಮೂಲಕ ಬಡವರಿಗೆ ಆಧಾರವಾಗಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎನ್ ಪ್ರಭುಸ್ವಾಮಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಸಹ ಪ್ರಾಧ್ಯಾಪಕರಾದ ಬೋರಮ್ಮ ಅಂಗಡಿ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಕಾಪಾಡುವಲ್ಲಿ ಮಹಿಳೆಯರ ಪಾತ್ರ ವಿಚಾರ ಮಂಡನೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಶಿಕ್ಷಣ ಅಧಿಕಾರಿ ಮೈಮುನಿಸ ಬೇಗಂ ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾ ಅಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ, ತಾಲೂಕು ಯೋಜನಾಧಿಕಾರಿ ಭಾಸ್ಕರ್, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಸಿ.ಎನ್.ನಾಗಣ್ಣ, ಶಿವರಾಜಪ್ಪ, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ್, ವಕೀಲರಾದ ಸರಸ್ವತಿ, ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ವರ್ಷ, ಮೇಲ್ವಿಚಾರಕರಾದ ಭಾರತಿ, ವಿನೂತ, ಕೃಷ್ಣಮೂರ್ತಿ, ಲೋಕೇಶ್, ಶಾಂತ, ರೇಖಾ, ವೀಣಾ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಯಥಾಭವ (ಕ)	2 ಪ್ರದರ್ಶನಗಳು
ಅಯಲಾನ್ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬ್ಯಾಚ್ಯುಲರ್ ಪಾರ್ಟಿ (ಕ)	4 ಪ್ರದರ್ಶನಗಳು
ರಾಜಕಮಲ್	
ವಡಕ್ಕುಪಟ್ಟಿ ರಾಮಸ್ವಾಮಿ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಫೈಟರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶಂಕರ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ನೋ ಶೋ
ಸ್ಕ್ರೀನ್ 2	ಕ್ರಷ್ (ಕ): ಬೆ.10.30ಕ್ಕೆ, ಬ್ಯಾಚುಲರ್ ಪಾರ್ಟಿ (ಕ): ಮ.1.05ಕ್ಕೆ, ಕಾಟೇರ (ಕ): ಮ.3.55ಕ್ಕೆ, ನೆಕ್ಸ್ಟ್ ಗೋಲ್ ವಿನ್ಸ್ (ಇಂ): ರಾ.7.20ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಹನುಮಾನ್ (ಕ): ಬೆ.9.55ಕ್ಕೆ, ಫೈಟರ್ (ಹಿಂ): ಮ.1ಕ್ಕೆ, ಸಂ.4.10ಕ್ಕೆ ರಾ.7.20ಕ್ಕೆ, ರಾ.10.30ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ.9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ, ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

MVC ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥರ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಶಿತೆ (ಕ): ಬೆ.11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸುಗಳು



11ನೇ ದಿನ, ಗುರುವಾರ 8-2-2024

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಉಜರೆ ಪ್ಲೇಟ್ ಡಿII–1400 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ

1 ನ್ಯಾಚುರಲ್ ಹಂಟರ್ 2. ಡೀಮ್ಡ್ ಟು ಫೈರ್ 3. ಏಂಜಲ್ ಪವರ್

II. ಸೂಪರ್ ಸ್ಪೀಡ್ ಪ್ಲೇಟ್–1100 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ

1 ಸ್ಪಿರಿಚಿಯಲ್ ಫೋರ್ಸ್ 2. ಕಂಟ್ರೀಸ್ ಲೈಟ್ 3. ಸುಲ್ತಾನ್ ಸೋರ್ಡ್

III. ಉಜರೆ ಪ್ಲೇಟ್ ಡಿI—1400 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ

1 ಆರ್ಮಾಮೆಂಟ್ 2. ಸ್ಟೆಪ್ ಆಫ್ ಗರ್ಲ್ 3 ಶಿವಾಲಿಕ್ ಸೌಂಡ್

IV. ಅಲೀಸ್ ಸೆರನೇಡ್ ಪ್ಲೇಟ್ ಡಿII–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ

1. ಮನಿ ಎಕ್ಸ್‌ಚೇಂಜ್ 2. ಪರ್ಫೆಕ್ಟ್ ಇಂಪ್ರಸ್ 3. ವರ್ಧನ್

V. P.M. ಚೆನ್ನಬಸವಣ್ಣ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ

1 ಬ್ರೈಟೆಸ್ಟ್ ಸ್ಟಾರ್ 2. ಗೆಲ್‌ಡೆಡ್ ಬಟರ್ ಫ್ಲೈ 3. ದಿ ಫ್ಲೈಯಿಂಗ್ ಫ್ಲೀಟ್

VI. ಮೈಸೂರ್ ಬುಕ್ ಮೇಕರ್ಸ್ ಅಸೋಸಿಯೇಷನ್ ಟ್ರೋಫಿ–1200 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ

1 ಕ್ಯಾಲಿಪ್ ಸೋಕಿಂಗ್ 2. ಶಿರಾ 3. ಪಿರೋನಿಯಾ

VII. ಅಜಂತ ಪ್ಲೇಟ್–1600 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ

1 ಮಿಸ್ಟಿಕ್ ಡಿವೈನ್ 2 ಇಬ್ರಾಯಿಮ್ ಒವಿಕ್ 3 ಸರ್‌ಕ್ಯಾಲಿಕುಲಸ್

VIII. ಅಲೀಸ್ ಸೆರನೇಡ್ ಪ್ಲೇಟ್ ಡಿI–1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ

1 ಟ್ರಂಪ್ ಬೇಬಿ 2 ಕಾನ್‌ಫಿಡೆಂಟ್ 3. ಅತುಲ್ಯಾ

ದಿನದ ಅತ್ಯುತ್ತಮ........	: ಬ್ರೈಟೆಸ್ಟ್ ಸ್ಟಾರ್
ಡಬ್ಬಲ್........	: ಮನಿ ಎಕ್ಸ್‌ಚೇಂಜ್, ಕ್ಯಾಲಿಪ್ ಸೋಕಿಂಗ್
ಜಾಕ್‌ಪಾಟ್........	: 4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್........	: 5, 6, 7 ಮತ್ತು 8
I ಟ್ರಿಬಲ್........	: 1, 2 ಮತ್ತು 3
II ಟ್ರಿಬಲ್........	: 3, 4 ಮತ್ತು 5
III ಟ್ರಿಬಲ್........	: 6, 7 ಮತ್ತು 8
ಎಕ್ಸ್‌ಆಕ್ಸ್........	: 1 ರಿಂದ 8

ಟಿಪ್‌ಸ್ಟರ್ ಪಿಜಿಸಿ

ಸಣ್ಣತಾಯಮ್ಮ ನಿಧನ



ಪಿರಿಯಾಪಟ್ಟಣ, ಫೆ.7– ತಾಲೂಕಿನ ಅಪಟೂರು ನಿವಾಸಿ ಸಣ್ಣತಾಯಮ್ಮ (96) ಇಂದು ಬೆಳಿಗ್ಗೆ ನಿಧನರಾದರು. ಮೃತರು ಸಿಎಫ್‌ಟಿಆರ್‌ಐನ ನಿವೃತ್ತ ಉದ್ಯೋಗಿ ಭೈರಪ್ಪ ಸೇರಿದಂತೆ ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು ಸಂಜೆ ಅಪಟೂರು ಗ್ರಾಮದ ಜಮೀನಿನಲ್ಲಿ ನೆರವೇರಿತು.

WANTED
Permanent
DRIVER
for family Car
Experience with DL is must
City limits only, Salary 15000/-
Age : 50 & above
Call: 63620 23789

WANTED
* MACHINE OPERATOR (DIPLOMA Or ITI)- MALE
* ACCOUNTANT -(FEMALE)
* OFFICE BOY -(MALE)
: HEBBAL INDUSTRIAL AREA MYSORE
8904575617

mega sale never before 1+1 offer
BUY 1 GET 1 free
ON ALL IN-HOUSE BRANDS *
PICK THE BEST FOR UR FEET
ON GENTS & LADIES FOOTWEAR
Open On Sunday | Rush Today
Limited Period Offer
SHOE WORLD™ ESTD.1998 — Celebrating 25+ Years
Best Brands at Your Feet...
*T&C Apply
Only At : SHIVARAMPET, OPP. MANNARS MARKET, MYSORE - 01. PH : 0821- 2424282

WANTED
SALES EXECUTIVES - 5 nos
with experience in Real Estate Sales
send your resume to
hiremenow235@gmail.com
90359 39300

ಕಾರ್ಯಕ್ರಮಗಳು ಹಾಗೂ ಸಭೆಗಳಿಗೆ
ವೈದ್ಯರ ಸಮುದಾಯ ಭವನ



ಆಲನಹಳ್ಳಿ, ಟಿ.ನರಸೀಪುರ ರಸ್ತೆ,
ರಿಂಗ್ ರಸ್ತೆ ಜಂಕ್ಷನ್, ಮೈಸೂರು
ಸುಸಜ್ಜಿತ ಸಭಾಂಗಣ,
ಡೈನಿಂಗ್ ಹಾಲ್, ಜನರೇಟರ್,
ಪಾರ್ಕಿಂಗ್ ಸ್ಥಳ, ಇತ್ಯಾದಿ.
Call: 96111 72148, 94495 61722
Office time 11 am to 6.00 pm on all days

SITES FOR SALE
30 X 40 Corner
- 4550 / Sqft
40 X 60 Middle
- 72 Lakhs
Close to Srirampura Ring Road
Broker Excuse
81230 75038

MYSORE FOODS™

ಚಪಾತಿ	- ₹4.50/-
ಪೂರಿ	- ₹4/-
ಇಡ್ಲಿ ಹಿಟ್ಟು	- ₹40/-
ಪುಳಿಯೋಗರೆ ಪೇಸ್ಟ್	- ₹60/-

*ಷರತ್ತುಗಳು ಅನ್ವಯಿಸುತ್ತವೆ
81474 69991
96326 57007

ಹಾಸ್ಟೆಲ್‌ನಲ್ಲಿ
ಕೆಲಸ ಮಾಡಲು
ಅಡುಗೆ ಭಟ್ಟರು
ಬೇಕಾಗಿದ್ದಾರೆ
ಉತ್ತಮ ವೇತನ, ಉಚಿತ ವಸತಿ
ಪಾಂಡವಪುರ, ಮಂಡ್ಯ
ದೂ: **7338138083**

GRANITE
20 MM GRANITES
AVAILABLE
@ RS. 50 TO 65 IN
ALL COLORS
8296743479

PUBLIC NOTICE

Notice is hereby issued to the General Public that My client **Mr. CHETAN P TAYAL**, has filed **O.S. No. 25 7/2016** on the file of the 3rd ADDL CIVIL JUDGE SENIOR DIVISION, Mysore getting Executed the Sale Deed in respect of Registered Agreement to sell with regard to Schedule property, the Hon'ble Court has granted stay order not to alienate and not to create any charge over the Schedule Property to any 3rd person until the disposal of the Suit. Any persons entering into any contract or creating any type of charge over the schedule property is not binding on my client, who is the plaintiff in the above case.

SCHEDULE

All that piece and parcel of composite immovable lands bearing **Sy No 153 (New sy no 153/1) measuring 15 Guntas** situated at Metagalli Village, Kasaba Hobli, Mysore Taluk, Mysore District, Karnataka State and Bounded on the: EAST BY- KRS Road, WEST BY-Govt Voni & Land Bearing Sy No 152, NORTH BY- Annayappa's choultry, SOUTH BY- Remaining part of **Sy No 153** of Mrs. Shanthi.

SD/-
M Sampath Kumar, Advocate
Office At: # 904/CH1, Gopalaswamy
Shishu Vihara Road, Lakshimipuram,
Mysore - 570004
Phone : 98451 47741

ಇನೇ ವರ್ಷದ ಸವಿನೆನಪು



ಯ|| ಶ್ರೀ ಹೊನ್ನೇಗೌಡರು
ದುಃಖತಪ್ತರು: ಕುಟುಂಬವರ್ಗ,
ಬೋಗಾದಿ, ಮೈಸೂರು.

2.5 BHK
HOME INTERIORS @
₹2.5 Lakhs*
Home Space Mart™
TALK TO OUR DESIGN TEAM
8197310113

PUBLIC NOTICE

Notice is hereby given that **SRI.K.NAGESHA,** son of Late Krishnaiah Setty, is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at **DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002,** within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

House No.23 (CITB Site No.23), situated at 8th Cross,6th Main, Kamakshi Hospital Road, Saraswathipuram-T.Koppal Chamaraja Mohalla, Mysore City with building thereon,site measuring East to West (42Feet 6Inches+40Feet 6Inches)/2 and North to South 51 Feet 6Inches, totally measuring 237.47 Square Yards and bounded on: East: Road, West: Site No.55 (Private Property), North: Site No.22/A (Private Property) and South: Site No.24 (Private Property).

Sd/- **Dhirendra Kumar R. Mehta,**
Advocate, KEY-ANS LAW SOLUTIONS
Date: 06.02.2024, Place: Mysore

PUBLIC NOTICE

The General Public is hereby informed that my client is intending to purchase the below mentioned schedule of property from its owners Sri. Ravalaiah S/o Ravalaiah, Sri.Chikaiah S/o Ravalaiah, Smt. Chandramma W/o Late. Kumar, Smt. Venktamma W/o. Ningaiah, Sri. Ravalaiah S/o Ningaiah and Sri. Javaraninga S/o.Marichikaiah and their respective legal heirs, residents of Chikkegowdanakoppalu, Yelwala Village, Yelwala Hobli, Mysore. If anybody is having any objection, claim, interest, dispute with the above owners boundaries for the intended sale transaction, he/she/ they may contact the undersigned with the documentary proof substantiating his/ her/ their objections/ claims/ details of dispute/s within Seven (07) days from the date of this publication, failing which my client will proceed to complete the sale transaction with the above owners as if there are no third party claims/ objections/disputes in respect of the Schedule Property and thereafter no claims/ objections /disputes will be entertained.

SCHEDULE PROPERTY

All that piece and parcel of Alienated land bearing Survey No.236/2 measuring 2 Acre 34 Guntas situated at Yelwala Village, Yelwala Hobli, Mysore. East: Halla, West: Sy No. 237, North: Sy No. 236/1 and Sy No. 235, South: Sy No. 237 and Road

Sd/-H.S.Kumar B.A.L L.L.B
ADVOCATE, LAW LEXICON
ASSOCIATES, No. 1411, 1st floor, 6th
Cross, Thyagaraja Road, K.R. Mohalla,
Mysuru:9448797546
Date: 05.02.2024

ಭಾವಪೂರ್ಣ ಶ್ರದ್ಧಾಂಜಲಿ



ಭಾರ್ಗವ ವಿಷಕಂಠ
ಜನನ: 07.08.1995, ಮರಣ: 07.02.2024
ದುಃಖತಪ್ತರು: ಯಾದವಗಿರಿ ಸ್ನೇಹಿತರು

WANTED
BEAUTICIAN
HAIRDRESSER
and
THERAPIST
Contact:
0821-4193567 / 9632769550

FOR RENT
2BHK House Ground Floor #6237, Vijaynagar, 4th stage, 2nd Phase, Mysore
9886377165



NOT GETTING YOUR
STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

ನಾಳೆಯಿಂದ ರಾಜ್ಯಾದ್ಯಂತ



ಕೆ.ಜಿ.ರೋಡ್ ಬೆಂಗಳೂರು
ನರ್ತಕಿ 4 ಆಟ
ಮಾಗಡಿರೋಡ್ 10:00
VEERESH CINEMAS
ರಾಜಾಜಿನಗರ **ನವರಂಗ**
ಪೀಣ್ಯ **ಭಾರತಿ**
ಜೆಪಿನಗರ **ಸಿದ್ದೇಶ್ವರ**
ತಾವರೆಕೆರೆ **ಬಾಲಾಜಿ**
ಅವಲಹಳ್ಳಿ **ವೆಂಕಟೇಶ್ವರ**
ಕಮಲಾನಗರ **ವೀರಭದ್ರೇಶ್ವರ**
ಮಲ್ಲತಹಳ್ಳಿ **ವಿಆರ್ ಮಾಲ್**

ಕತ್ರಿಗುಪ್ಪೆ **ಕಾಮಾಕ್ಯ**
ಸುಂಕದಕಟ್ಟೆ **ಮೋಹನ**
PVR CINEMAS
FORUM
ORION
VEGA CITY
GT WORLD MALL
VAISHNAVI SAPHIRE
PHONIX MARKET CITY
ARENA, VR MALL
SPIRIT MALL
MSR ELEMENTS
ORIAN UPTOWN
INOX LIVE THE MOVIE
MANTRI
CENTRAL
BROOK FIELD
FORUM NEIGHBOURHOOD

SWAGATH
GARUDA
GARUDA YALAHANKA
RMZ GALLERIA
LIDO
SBR HORIZON
Cinépolis
ETA, RMM MALL
ORION EAST
FUN SIGMA
SHANTINIKETHANA
ORION AVENUE
SJR CENRAL
GOPALAN CINEMAS
ARCADE
GRAND
INNOVATION
SIRSI CIRCLE
SIGNATURE
ROCKLINE cinemas
KINO CINEMAS

ತುಮಕೂರು **ಕೃಷ್ಣ**
ಸಿರಾ **ರಂಗನಾಥ**
ಮೈಸೂರು **ಆಡೋ**
ಚನ್ನಪಟ್ಟಣ **ಲಕ್ಷ್ಮೀ**
ಕುಂಬಾರಕೊಪ್ಪಲು **ಮಾದೇಶ್ವರ**
ಮಂಡ್ಯ **ಮಹಾವೀರ**
ಹಾಸನ **ಪಿಕ್ಚರ್ ಪ್ಯಾಲೇಸ್**
ಚನ್ನರಾಯಪಟ್ಟಣ **ಧನಲಕ್ಷ್ಮೀ**
ಚಾಮರಾಜನಗರ **ಭ್ರಮರಾಂಬ**
ಅರಸಿಕೆರೆ **ರತ್ನ**
ಕೆಆರ್ ನಗರ **ಎಸ್.ಸಿ.ವಿ.ಡಿ.ಎಸ್**
ಶ್ರೀರಂಗಪಟ್ಟಣ **ಶ್ರೀದೇವಿ**

ದಾವಣಗೆರೆ **ತ್ರಿಶೂಲ**
ಜಗಳೂರು **ಭಾರತಿ**
ಹುಬ್ಬಳ್ಳಿ
PVR CINEMAS
Cinépolis
ಧಾರವಾಡ **ಶ್ರೀನಿವಾಸ**
ಬಾದಾಮಿ **ಮಹಾಕೂಟೇಶ್ವರ**
ಅಥಣಿ **ದುರ್ಗಲಕ್ಷ್ಮೀ**
ಇಂಡಿ **ಶ್ರೀನಿವಾಸ**
ರೋಣ **ರೇಣುಕಾ**
ಕನಕಗಿರಿ **ನಂದಿ**
ಮಂಗಳೂರು **ರೂಪವಾಣಿ**
ಹಾಗೂ ರಾಜ್ಯಾದ್ಯಂತ

